# 2010 - 11 ನೇ ಸಾಲಿನಲ್ಲಿ ನಡೆದ ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಸಭೆಯ ನಡವಳಿಗಳು.



| ಕ್ರ ಸಂ. | ಸಭೆಯ ವಿವರ | ಪುಟ ಸಂಖ್ಯೆ | |
|---|---|---|---|
| | | ರಿಂದ | ವರೆಗೆ |
| 1 | ದಿನಾಂಕ: 12-04-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು. | 2 | 5 |
| 2 | ದಿನಾಂಕ: 30-04-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು. | 6 | 15 |
| 3 | ದಿನಾಂಕ: 07-07-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು. | 16 | 31 |
| 4 | ದಿನಾಂಕ: 04-10-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು. | 32 | 54 |
| 5 | ದಿನಾಂಕ: 07-01-2011 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ತುರ್ತು ಸಭೆಯ ತೀರ್ಮಾನಗಳು. | 55 | 58 |
| 6 | ದಿನಾಂಕ: 31-01-2011 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು. | 59 | 76 |
| 7 | ದಿನಾಂಕ: 19-03-2011 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು. | 77 | 91 |

# ದಿನಾಂಕ: 12-04-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಮಾಸಿಕ ಸಭೆಯ ತೀರ್ಮಾನ.

**ಸಭೆಯಲ್ಲಿ ಹಾಜರಿದ್ದ ಸದಸ್ಯರು.**

| | | |
|---|---|---|
| 1 | ಶ್ರೀ ಸಿ. ಎಸ್. ರಂಗನಾಥ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಅಧ್ಯಕ್ಷರು |
| 2 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 3 | ಶ್ರೀ ಜಿ. ಲೋಕೇಶ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 4 | ಶ್ರೀ ಮಧು ಕುಮಾರ್‌ರಾಜ್ ಅರಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 5 | ಶ್ರೀ ಶ್ರೀನಿವಾಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 6 | ಶ್ರೀಮತಿ ವೀಣಾ ಶೆಟ್ಟಿ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 7 | ಸಹಾಯಕ ನಿರ್ದೇಶಕರು,<br>ನಗರ ಯೋಜನಾ ಇಲಾಖೆ, ಚಿಕ್ಕಮಗಳೂರು. (ನಗರ ಯೋಜನಾ ಸದಸ್ಯರು) | ಸದಸ್ಯರು |
| 8 | ಕಾರ್ಯಪಾಲಕ ಅಭಿಯಂತರರು,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 9 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 10 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 11 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಹಾಸನ.<br>(ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 12 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |
| 13 | ಶ್ರೀ ರಾಜು<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 14 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 15 | ಪರಿಸರ ಮಾಲಿನ್ಯ ಅಧಿಕಾರಿಗಳು,<br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>ಚಿಕ್ಕಮಗಳೂರು | ಸದಸ್ಯರು |

## ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.

| | | |
|---|---|---|
| 1 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 2 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 3 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಆಹ್ವಾನಿತರು |

ಪ್ರಾಧಿಕಾರದ ವಿಶೇಷ ಸಭೆಗೆ ಹಾಜರಾದ ಅಧ್ಯಕ್ಷರು, ಮಾನ್ಯ ಶಾಸಕರು ಹಾಗೂ ಸದಸ್ಯರನ್ನು ಆಯುಕ್ತರು ಸ್ವಾಗತಿಸಿದರು, ಅಧ್ಯಕ್ಷರು ಸಭೆಯನ್ನು ಪ್ರಾರಂಭಿಸಲು ಸೂಚಿಸಿದರು.

**ವಿಷಯ ನಂ 1.**

ಚಿಕ್ಕಮಗಳೂರು ನಗರದ ಮಹಾಯೋಜನೆ 2021 (ಪರಿಷ್ಕೃತ –1) ರ (ಅಂತಿಮ) ನಕ್ಷೆಯನ್ನು ನಗರಸಭೆ ಚಿಕ್ಕಮಗಳೂರು ರವರು ಸಭೆಯಲ್ಲಿ ಅನುಮೋದಿಸಿರುವುದನ್ನು ಪ್ರಾಧಿಕಾರದ ತುರ್ತು ವಿಶೇಷ ಸಭೆಯಲ್ಲಿ ಚರ್ಚಿಸಿ ಸರ್ಕಾರದ ಅನುಮೋದನೆ ಪಡೆಯುವ ಕುರಿತು.

**ಟಿಪ್ಪಣಿ:**

ಚಿಕ್ಕಮಗಳೂರು ನಗರದ ಮಹಾಯೋಜನೆ 2021 (ಪರಿಷ್ಕೃತ –1) ರ (ಅಂತಿಮ) ನಕ್ಷೆಯನ್ನು ನಗರಸಭೆ ಚಿಕ್ಕಮಗಳೂರು ರವರು ಸಭೆಯಲ್ಲಿ ಚರ್ಚಿಸಿ ಕೆಲವು ಸರ್ವೆ ನಂಬರುಗಳನ್ನು ಕೃಷಿ ವಲಯದಿಂದ ವಸತಿ ವಲಯ ಹಾಗೂ ಕೆಲವು ಸರ್ವೆ ನಂಬರುಗಳನ್ನು ಮಹಾ ಯೋಜನಾ ನಕ್ಷೆಗೆ ಸೇರಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ ಹಾಗೂ ಮಾನ್ಯ ಅಧ್ಯಕ್ಷರ ಸೂಚನೆ ಮೇರೆಗೆ ಹಿರೇಮಗಳೂರು ಗ್ರಾಮದ ಸರ್ವೆ ನಂ. 309 / 1 ರಲ್ಲಿನ 00 ಎಕರೆ 27 ಗುಂಟೆ, ಸರ್ವೆ ನಂ. 308 ರಲ್ಲಿನ 01 ಎಕರೆ 15 ಗುಂಟೆ, ಸರ್ವೆ ನಂ. 309 / 1 ರಲ್ಲಿನ 00 ಎಕರೆ 30 ಗುಂಟೆ ಜಮೀನು, ಸರ್ವೆ ನಂ. 307 / P2 ರಲ್ಲಿನ 00 ಎಕರೆ 15 ಗುಂಟೆ, ಸರ್ವೆ ನಂ. 429 / 2 ರಲ್ಲಿನ 00 ಎಕರೆ 14½ ಗುಂಟೆ, ಸರ್ವೆ ನಂ. 429 / 2 ರಲ್ಲಿನ 00 ಎಕರೆ 25½ ಗುಂಟೆ, ಸರ್ವೆ ನಂ. 430 / 1, 2 ರಲ್ಲಿನ 01 ಎಕರೆ 08 ಗುಂಟೆ, ಹಾಗೂ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 340 ರಲ್ಲಿನ 01 ಎಕರೆ 22 ಗುಂಟೆ, ಜಮೀನನ್ನು ಕೃಷಿ ವಲಯದಿಂದ ವಸತಿ ವಲಯಕ್ಕೆ ಸೇರಿಸಲು ಸೂಚಿಸಿರುತ್ತಾರೆ, ಹಾಗೂ ನಗರ ಯೋಜನಾ ಸದಸ್ಯರು ಅಭಿಪ್ರಾಯವನ್ನು ಪಡೆದು ಸದರಿ ವಿಷಯದ ಬಗ್ಗೆ ಪ್ರಾಧಿಕಾರದ ನಿರ್ಣಯ ಕೈಗೊಳ್ಳಬೇಕಿದ್ದು, ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ಆಯುಕ್ತರು ವಿಷಯದ ಬಗ್ಗೆ ಮಾತನಾಡಿ ಪ್ರಾಧಿಕಾರದ ಸಭೆಯ ದಿನಾಂಕ: 30-10-2009 ರ ನಿರ್ಣಯದಂತೆ ಮಹಾಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಕ್ರಮವಹಿಸಿದ್ದು ಈ ಮಧ್ಯೆ ಮಹಾಯೋಜನೆಯ ಬಗ್ಗೆ ಸ್ಥಳೀಯ ಸಂಸ್ಥೆಯ ಅಭಿಪ್ರಾಯಗಳನ್ನು ಸಹ ಪಡೆದು ಕ್ರಮ ವಹಿಸಲು ಸರ್ಕಾರದ ಅಧಿಸೂಚನೆ ದಿನಾಂಕ: 14-12-2009 ರಲ್ಲಿ ತಿಳಿಸಲಾಗಿರುತ್ತದೆ. ಅದರಂತೆ ಮಹಾಯೋಜನೆಯ ನಕ್ಷೆ ಹಾಗೂ ವರದಿಗಳನ್ನು ಚಿಕ್ಕಮಗಳೂರು ನಗರ ಸಭೆಗೆ ಕಳುಹಿಸಿಕೊಡಲಾಗಿದ್ದು ಚಿಕ್ಕಮಗಳೂರು ನಗರ ಸಭೆಯ ವಿಶೇಷ ಸಭೆಯ ದಿನಾಂಕ: 30-03-2010 ರಲ್ಲಿ ಈ ವಿಷಯದ ಬಗ್ಗೆ ಚರ್ಚಿಸಿ ಕೆಲವು ಮಾರ್ಪಾಡುಗಳನ್ನು ಮಾಡಲು ಕೋರಿರುತ್ತಾರೆ.

ಪ್ರಾಧಿಕಾರದ ಅಧ್ಯಕ್ಷರು ಸಹ ಕೆಲವು ಮಾರ್ಪಾಡುಗಳನ್ನು ಮಾಡುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ, ಈ ಹಿನ್ನೆಲೆಯಲ್ಲಿ ಪ್ರಾಧಿಕಾರದ ವಿಶೇಷ ಸಭೆಯನ್ನು ಕರೆದಿದ್ದು ಸಭೆಯನ್ನು ಮಹಾಯೋಜನೆಯನ್ನು ಅಂತಿಮಗೊಳಿಸಿ ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ ಕ್ರಮವಹಿಸುವ ಬಗ್ಗೆ ಸೂಕ್ತವಾಗಿ ನಿರ್ಣಯಿಸಲು ಕೋರಿದರು.

ನಗರಯೋಜನಾ ಸದಸ್ಯರು ಮಾತನಾಡಿ ಈ ಹಿಂದೆ ಪ್ರಾಧಿಕಾರದಿಂದ ಸೂಕ್ತವಾಗಿ ಮಹಾಯೋಜನೆಯನ್ನು ತಯಾರಿಸಿದ್ದು ಈ ಹಂತದಲ್ಲಿ ಚಿಕ್ಕಮಗಳೂರು ನಗರ ಸಭೆಯವರು ತಿಳಿಸಿರುವ ಮಾರ್ಪಾಡುಗಳ ಪೈಕಿ ಹಿರೇಮಗಳೂರು ಸರ್ವೆ ನಂ. 40, 41, 75, 76, 77, 72, 73, 74, 78, 36, 39, 42, 43 ಮತ್ತು 71 ರ ಪ್ರದೇಶಗಳನ್ನು ಪೂರ್ಣವಾಗಿ ಸೆಪ್ಟಿಕ್ ಟ್ಯಾಂಕ್‌ಗಳ ನಿರ್ಮಾಣಕ್ಕಾಗಿ ಸಾರ್ವಜನಿಕರ ಉಪಯುಕ್ತತೆಯ ಉಪಯೋಗದಲ್ಲಿ ಪ್ರಸ್ತಾಪಿಸುವುದು ಮಾತ್ರ ಸೂಕ್ತವಾಗಿರುತ್ತದೆ, ಉಳಿದ ಯಾವುದೇ ಬದಲಾವಣೆಗಳು ಸೂಕ್ತವಾಗಿರುವುದಿಲ್ಲ ಎಂದು ಅಭಿಪ್ರಾಯಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 94 / 4 ರ ಪ್ರದೇಶವು ವಾಣಿಜ್ಯ ವಲಯಕ್ಕೆ ಮೀಸಲಿದ್ದು ಅದನ್ನು ವಸತಿಗೆ ಬದಲಾಯಿಸಲು ನಗರ ಸಭೆಯಿಂದ ಕೋರಿರುವುದು ಸಮಂಜಸವಾಗಿರುವುದಿಲ್ಲ ಎಂದರು ವಾಣಿಜ್ಯ ವಲಯದಲ್ಲಿ ವಸತಿ ಕಟ್ಟಡ ನಿರ್ಮಿಸಲು ಅವಕಾಶವಿರುವುದರಿಂದ ವಸತಿಗೆ ಬದಲಾಯಿಸದೆ ವಾಣಿಜ್ಯ ವಲಯದಲ್ಲಿಯೇ ಮುಂದುವರೆಸುವುದು ಸೂಕ್ತ ಎಂದರು, ಚಿಕ್ಕಮಗಳೂರು ಸರ್ವೆ ನಂ. 76 / 1 ರ ಹತ್ತಿರದಲ್ಲಿ ಹಳ್ಳ ಇದ್ದು ಮಳೆಗಾಲದಲ್ಲಿ ನೀರು ತುಂಬುವುದರಿಂದ ಉದ್ಯಾನವನ ವಲಯದಲ್ಲಿಯೇ ಗುರ್ತಿಸುವುದು ಸೂಕ್ತ ಎಂದು ಅಭಿಪ್ರಾಯಿಸಿದರು, ಸಭೆಯಲ್ಲಿ ಈ ಬಗ್ಗೆ ಅನುಮೋದಿಸಲಾಯಿತು.

ಅಧ್ಯಕ್ಷರು ಮುಂದುವರೆದು ಮಾತನಾಡಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 307, 308, 309 ರ ಪ್ರದೇಶಗಳು ಉದ್ದೇಶಿತ 24.00 ಮೀಟರ್ ರಸ್ತೆಗೆ ಲಗತ್ತಾಗಿದ್ದು ನೀರಿನಿಂದ ಆವೃತವಾದ ಪ್ರದೇಶದಿಂದ ಎತ್ತರದ ಪ್ರದೇಶವಾಗಿರುವುದರಿಂದ ಸದರಿ ಪ್ರದೇಶಗಳನ್ನು ಮಹಾ ಯೋಜನೆಯಲ್ಲಿ ವಸತಿಗೆ ಪ್ರಸ್ತಾಪಿಸುವುದು ಸೂಕ್ತ ಎಂದರು ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಮಹಾಯೋಜನೆಯ ನಕ್ಷೆಯಲ್ಲಿ ಈ ಬಗ್ಗೆ ಗುರ್ತಿಸಿ ಸದರಿ ಪ್ರದೇಶಗಳನ್ನು ವಸತಿ ವಲಯಕ್ಕೆ ಪ್ರಸ್ತಾಪಿಸಲು ನಿರ್ಣಯಿಸಲಾಯಿತು.

ಹಿರೇಮಗಳೂರು ಗ್ರಾಮದ ಸರ್ವೆ ನಂ. 429, 430 ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 340 ರ ಪ್ರದೇಶಗಳಲ್ಲಿ ಈಗಾಗಲೇ ಅಭಿವೃದ್ಧಿಗಳು ಬರುತ್ತಿದ್ದು ಅವುಗಳನ್ನು ಸಹ ವಸತಿಗೆ ಕಾಯ್ದಿರಿಸುವುದು ಸೂಕ್ತವೆಂದು ಅಧ್ಯಕ್ಷರು ಅಭಿಪ್ರಾಯಿಸಿದರು, ಅದರಂತೆ ಸದರಿ ಪ್ರದೇಶವನ್ನು ವಸತಿ ವಲಯದಲ್ಲಿ ಪ್ರಸ್ತಾಪಿಸಲು ನಿರ್ಣಯಿಸಲಾಯಿತು.

ಚಿಕ್ಕಮಗಳೂರಿಗೆ ಪ್ರವಾಸಿಗರು ಭೇಟಿ ನೀಡುವ ಕೇಂದ್ರವಾಗಿದ್ದು ಪ್ರವಾಸಿಗರ ಅನುಕೂಲಕ್ಕಾಗಿ ರೆಸಾರ್ಟ್‌ಗಳನ್ನು ನಿರ್ಮಿಸುವುದು ಅಗತ್ಯವಿರುತ್ತದೆ, ರೆಸಾರ್ಟ್ ನಿರ್ಮಾಣದ ಬಗ್ಗೆ ದೊಡ್ಡ ವಿಸ್ತೀರ್ಣದ ಪ್ರದೇಶವನ್ನು ವಾಣಿಜ್ಯ ವಲಯಕ್ಕೆ ಮೀಸಲಿಡುವುದು ಸೂಕ್ತವಿದೆ ಎಂದು ಮಾನ್ಯ ಶಾಸಕರಾದ ಶ್ರೀ ಸಿ. ಟಿ. ರವಿಯವರು ಅಭಿಪ್ರಾಯಿಸಿದರು, ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ಅಭಿವೃದ್ದಿಗೆ ಸೂಕ್ತವಿರುವ ಹಾಗೂ ಮುಖ್ಯ ರಸ್ತೆಗೆ ಸಮೀಪವಿರುವ ರಾಮನಹಳ್ಳಿ ಗ್ರಾಮದ ಸರ್ವೆ ನಂ. 144 ಮತ್ತು 147 ರಲ್ಲಿನ ಪ್ರದೇಶಗಳನ್ನು ವಾಣಿಜ್ಯ ವಲಯಕ್ಕೆ ಪ್ರಸ್ತಾಪಿಸಲು ನಿರ್ಣಯಿಸಲಾಯಿತು ಹಾಗೂ ನಕ್ಷೆಯಲ್ಲಿ ಈ ಬಗ್ಗೆ ಜಾಗವನ್ನು ಸಭೆಯಲ್ಲಿಯೇ ಗುರ್ತಿಸಲಾಯಿತು.

ನಗರ ಸಭೆಯ ನಿರ್ಣಯದಂತೆ ಹಿರೇಮಗಳೂರು ಸರ್ವೆ ನಂ. 40, 41, 75, 76, 77, 72, 73, 74, 78, 36, 39, 42, 43 ಮತ್ತು 71 ರ ಪ್ರದೇಶಗಳನ್ನು ಸೆಪ್ಟಿಕ್ ಟ್ಯಾಂಕ್‌ಗಳ ನಿರ್ಮಾಣಕ್ಕಾಗಿ ಸಾರ್ವಜನಿಕರ ಉಪಯುಕ್ತತೆಯ ವಲಯದಲ್ಲಿ ಪ್ರಸ್ತಾಪಿಸಲು ನಿರ್ಣಯಿಸಲಾಯಿತು.

ಮೇಲ್ಕಂಡ ಅಂಶಗಳೊಂದಿಗೆ ಮಹಾ ಯೋಜನೆಯನ್ನು ಅಂತಿಮಗೊಳಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು, ಕ್ರಮವಹಿಸಲು ಅಧ್ಯಕ್ಷರು ಹಾಗೂ ಆಯುಕ್ತರಿಗೆ ಸಭೆಯಲ್ಲಿ ಅಧಿಕಾರ ನೀಡಲಾಯಿತು.

**ವಿಷಯ ನಂ 2.**

ಇಂದಿರಾ ಗಾಂಧಿ ರಸ್ತೆ (ಐ. ಜಿ. ರಸ್ತೆ) ಅಗಲೀಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಜಿಲ್ಲಾಡಳಿತ ಮಾಡಿಕೊಳ್ಳುವ ಒಪ್ಪಂದದಂತೆ ನಿವೇಶನ ಹಾಗೂ ಕಟ್ಟಡದ ಮಾಲೀಕರುಗಳಿಗೆ ಟಿ. ಡಿ. ಆರ್. (T. D. R) ನೀಡುವ ಬಗ್ಗೆ.

**ಟಿಪ್ಪಣಿ:**

ಇಂದಿರಾ ಗಾಂಧಿ ರಸ್ತೆ (ಐ. ಜಿ. ರಸ್ತೆ) ಅಗಲೀಕರಣಕ್ಕೆ ಸಂಬಂದಿಸಿದಂತೆ ಮಾನ್ಯ ಜಿಲ್ಲಾಧಿಕಾರಿಗಳವರ ಸೂಚನೆಯಂತೆ ಐ. ಜಿ. ರಸ್ತೆ ಪಕ್ಕದ ನಿವೇಶನ ಹಾಗೂ ಕಟ್ಟಡ ಮಾಲೀಕರುಗಳಿಗೆ ಟಿ. ಡಿ. ಆರ್. (T. D. R) ನೀಡುವ ಬಗ್ಗೆ ವಿಷಯವನ್ನು ಚರ್ಚೆಗಾಗಿ ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು ಇಂದಿರಾ ಗಾಂಧಿ ರಸ್ತೆ (ಐ. ಜಿ. ರಸ್ತೆ) ಅಗಲೀಕರಣಕ್ಕೆ ಸಂಬಂದಿಸಿದಂತೆ ಜಿಲ್ಲಾಡಳಿತದಿಂದ ಮಾಡಿಕೊಳ್ಳುವ ಒಪ್ಪಂದದಂತೆ ರಸ್ತೆ ಅಗಲೀಕರಣಕ್ಕಾಗಿ ಜಾಗ ಬಿಡುವ ವಿಸ್ತೀರ್ಣಕ್ಕೆ ಕಟ್ಟಡದ ಮಾಲೀಕರುಗಳಿಗೆ ಕಾಯ್ದೆಯಂತೆ ಟಿ. ಡಿ. ಆರ್. (T. D. R) ನೀಡಲು ಒಪ್ಪಿಕೊಳ್ಳಲಾಯಿತು.

**ವಿಷಯ ನಂ 3.**

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಭೂ ಪರಿವರ್ತನೆ ಹೊಂದಿದ ಹಾಗೂ ಭೂ ಪರಿವರ್ತನೆ ಹೊಂದದ ಭೂಮಿಗಳನ್ನು ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಹೊಂದದೇ ವಿಭಜಿಸಿ ಅನದೀಕೃತ ವಿಂಗಡಣೆ ಮಾಡಿ ನಿವೇಶನ ರೂಪಿಸಿ ಸಾರ್ವಜನಿಕರಿಗೆ ಪರಭಾರೆ ಮಾಡುತ್ತಿರುವ ಬಗ್ಗೆ.

**ಟಿಪ್ಪಣಿ:**

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಭೂ ಪರಿವರ್ತನೆ ಹೊಂದಿದ ಹಾಗೂ ಭೂ ಪರಿವರ್ತನೆ ಹೊಂದದ ಭೂಮಿಗಳನ್ನು ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಹೊಂದದೇ ವಿಭಜಿಸಿ ಅನಧಿಕೃತ ವಿಂಗಡಣೆ ಮಾಡಿ ನಿವೇಶನ ರೂಪಿಸಿ ಸಾರ್ವಜನಿಕರಿಗೆ ಪರಭಾರೆ ಮಾಡುತ್ತಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಿ ಕ್ರಮ ವಹಿಸುವ ಬಗ್ಗೆ ಸಭೆಗೆ ಮಂಡಿಸಿದೆ.

**ತೀರ್ಮಾನ :**

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಭೂ ಪರಿವರ್ತನೆ ಹೊಂದಿದ ಹಾಗೂ ಭೂ ಪರಿವರ್ತನೆ ಹೊಂದದ ಭೂಮಿಗಳನ್ನು ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಹೊಂದದೇ ವಿಭಜಿಸಿ ಅನಧಿಕೃತ ವಿಂಗಡಣೆ ಮಾಡಿ ನಿವೇಶನ ರೂಪಿಸಿ ಸಾರ್ವಜನಿಕರಿಗೆ ಪರಭಾರೆ ಮಾಡುತ್ತಿರುವ ಬಗ್ಗೆ ಕ್ರಮವಹಿಸುವುದು ಸೂಕ್ತ ಎಂದು ಶಾಸಕರು ಅಭಿಪ್ರಾಯಪಟ್ಟರು ಅದರಂತೆ ಪ್ರಾಧಿಕಾರದ ಸಭೆಯಲ್ಲಿ ಅನಧಿಕೃತ ಅಭಿವೃದ್ದಿಗಳ ಬಗ್ಗೆ ನಗರಾಭಿವೃದ್ದಿ ಪ್ರಾಧಿಕಾರಗಳ ಕಾಯ್ದೆಯಂತೆ ಕ್ರಮ ವಹಿಸುವ ಬಗ್ಗೆ ಆಯುಕ್ತರಿಗೆ ಅಧಿಕಾರ ನೀಡಲಾಯಿತು ಹಾಗೂ ಈ ಬಗ್ಗೆ ಅನಧಿಕೃತ ಬಡಾವಣೆಗಳಲ್ಲಿ ನಿವೇಶನ ಖರೀದಿಸದಂತೆ ಸಾರ್ವಜನಿಕರಿಗೆ ತಿಳಿಸುವ ಬಗ್ಗೆ ಪತ್ರಿಕೆಯಲ್ಲಿ ಪ್ರಕಟಿಸಿ ಸಾರ್ವಜನಿಕರಲ್ಲಿ ಎಚ್ಚರಿಕೆ ಮೂಡಿಸಲು ಸಹ ನಿರ್ಣಯಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಪಡೆದು ಸಭೆಯು ಮುಕ್ತಾಯವಾಯಿತು.**

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

# ದಿನಾಂಕ: 30-04-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರು.**

| | | |
|---|---|---|
| 1 | ಶ್ರೀ ಸಿ. ಎಸ್. ರಂಗನಾಥ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಅಧ್ಯಕ್ಷರು |
| 2 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 3 | ಶ್ರೀ ಜಿ. ಲೋಕೇಶ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 4 | ಶ್ರೀ ಮಧು ಕುಮಾರ್‌ರಾಜ್ ಅರಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 5 | ಶ್ರೀ ಶ್ರೀನಿವಾಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 6 | ಶ್ರೀಮತಿ ವೀಣಾ ಶೆಟ್ಟಿ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 7 | ಶ್ರೀ ರಾಜು<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 8 | ಸಹಾಯಕ ನಿರ್ದೇಶಕರು,<br>ನಗರ ಯೋಜನಾ ಇಲಾಖೆ, ಚಿಕ್ಕಮಗಳೂರು. (ನಗರ ಯೋಜನಾ ಸದಸ್ಯರು) | ಸದಸ್ಯರು |
| 9 | ಕಾರ್ಯಪಾಲಕ ಅಭಿಯಂತರರು,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 10 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ,  ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 11 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಹಾಸನ.<br>(ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 12 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |
| 13 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು.  (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 14 | ಪರಿಸರ ಮಾಲಿನ್ಯ ಅಧಿಕಾರಿಗಳು,<br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>ಚಿಕ್ಕಮಗಳೂರು | ಸದಸ್ಯರು |

## ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.

| | | |
|---|---|---|
| 1 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 2 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 3 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 4 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಆಹ್ವಾನಿತರು |

**ವಿಷಯ ನಂ 1.**

ದಿನಾಂಕ: 6-03-2009 ಮತ್ತು 12-04-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆ ಮತ್ತು ವಿಶೇಷ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸುವ ಬಗ್ಗೆ.

**ಟಿಪ್ಪಣಿ:**

ದಿನಾಂಕ: 6-03-2009 ರಂದು ನಡೆದ ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆ ಮತ್ತು 12-04-2010 ರಂದು ನಡೆದ ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಮಾಸಿಕ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರುಗಳಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದು.

**ತೀರ್ಮಾನ :**

ದಿನಾಂಕ: 6-03-2009 ರಂದು ನಡೆದ ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಲಾಯಿತು, ದಿನಾಂಕ: 12-04-2010 ರಂದು ನಡೆದ ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಸಭೆಯ ವಿಷಯ ಸಂಖ್ಯೆ. 1 ರಲ್ಲಿ ನಗರಸಭೆಯ ನಿರ್ಣಯದಂತೆ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 91 / 4 ರ ಪ್ರದೇಶವನ್ನು ವಾಣಿಜ್ಯ ವಲಯದಿಂದ ವಸತಿ ವಲಯಕ್ಕೆ ಬದಲಾಯಿಸಲು ಕೋರಲಾಗಿದೆ. ಇದನ್ನು ಪ್ರಾಧಿಕಾರವು ಪರಿಶೀಲಿಸಿ, ವಾಣಿಜ್ಯ ವಲಯದಲ್ಲಿ ವಸತಿ ಕಟ್ಟಡ ನಿರ್ಮಿಸಲು ಅನುಮೋದಿಸಬಹುದಾಗಿರುವುದರಿಂದ ಸರ್ವೆ ನಂ. 91 / 4 ರ ಪ್ರದೇಶವನ್ನು ತಾತ್ಕಾಲಿಕ ಮಹಾಯೋಜನೆಯಂತೆ ವಾಣಿಜ್ಯ ವಲಯದಲ್ಲಿಯೇ ಮುಂದುವರಿಸಲು ನಿರ್ಣಯಿಸಲಾಗಿತ್ತು, ಈ ಬಗ್ಗೆ ನಗರ ಯೋಜನಾ ಸದಸ್ಯರು ಪ್ರಸ್ತಾಪಿಸಿ ನಿರ್ಣಯದಲ್ಲಿ ಸರ್ವೆ ನಂ. 91 / 4 ಎಂಬುದರ ಬದಲಾಗಿ ಸರ್ವೆ ನಂ. 94 / 4 ಎಂದು ನಮೂದಾಗಿರುವುದನ್ನು ಸಭೆಯ ಗಮನಕ್ಕೆ ತಂದರು ಸಭೆಯ ನಿರ್ಣಯದಲ್ಲಿ ಸರ್ವೆ ನಂ. 91 / 4 ಎಂದು ತಿದ್ದುಪಡಿ ಮಾಡಿ ಓದಿಕೊಳ್ಳಲು ನಿರ್ಣಯಿಸಲಾಯಿತು. ಹಾಗೂ ಉಳಿದಂತೆ ಎಲ್ಲಾ ವಿಷಯಗಳನ್ನು ಸ್ಥಿರೀಕರಿಸಲಾಯಿತು.

**ವಿಷಯ ನಂ 2.**

2010 ನೇ ಸಾಲಿನ ಫೆಬ್ರವರಿ ಮತ್ತು ಮಾರ್ಚ್ ಮಾಹೆಗಳ ಆದಾಯ ಮತ್ತು ಖರ್ಚಿನ ವಿವರಗಳನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.

**ಟಿಪ್ಪಣಿ:**

2010 ನೇ ಸಾಲಿನ ಫೆಬ್ರವರಿ ಮತ್ತು ಮಾರ್ಚ್ ಮಾಹೆಗಳ ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ–1 ಮತ್ತು ಅನುಬಂಧ–2 ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದಾಗಿದ್ದು ಸಭೆಗೆ ಮಂಡಿಸಿದೆ.

**ತೀರ್ಮಾನ :**

2010 ನೇ ಸಾಲಿನ ಫೆಬ್ರವರಿ ಮತ್ತು ಮಾರ್ಚ್ ಮಾಹೆಗಳ ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ–1 ಮತ್ತು ಅನುಬಂಧ–2 ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ 3.**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯ ವಿದ್ಯುತ್ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿಯ ಟೆಂಡರನ್ನು 2 / 10 ರಿಂದ 2 / 11 ರವರೆಗೆ ಅವಧಿಗೆ ವಿಸ್ತರಿಸುವ ಹಾಗೂ ಮೇ|| ಪ್ರಭಾ ಎಲೆಕ್ಟ್ರಿಕಲ್ ಬೆಂಗಳೂರು ರವರಿಂದ ಮೇ|| ಕೆ. ಕೆ. ಎಲೆಕ್ಟ್ರಿಕಲ್ಸ್, ಚಿಕ್ಕಮಗಳೂರು ರವರಿಗೆ ಪವರ್ ಆಫ್ ಅಟಾರ್ನಿ ಮಂಜೂರು ಮಾಡುವ ಬಗ್ಗೆ.

**ಟಿಪ್ಪಣಿ:**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯ ವಿದ್ಯುತ್ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿಯ ಟೆಂಡರ್ ಅವಧಿಯು 2 / 2010 ಕ್ಕೆ ಮುಕ್ತಾಯವಾಗಲಿದ್ದು, ಸದರಿ ಟೆಂಡರ್ ಅವಧಿಯನ್ನು ಪುನಃ ಇನ್ನು ಒಂದು ವರ್ಷದ ಅವಧಿಗೆ ಮುಂದುವರಿಸುವಂತೆ ಮೂಲ ಗುತ್ತಿಗೆದಾರರಾದ ಮೇ|| ಪ್ರಭಾ ಎಲೆಕ್ಟ್ರಿಕಲ್ಸ್ ರವರು ಮನವಿ ಸಲ್ಲಿಸಿರುತ್ತಾರೆ ಹಾಗೆಯೇ ಸದರಿ ನಿರ್ವಹಣೆ ಮತ್ತು ದುರಸ್ಥಿ ಕಾರ್ಯವನ್ನು ಮೇ|| ಕೆ. ಕೆ. ಎಲೆಕ್ಟ್ರಿಕಲ್ಸ್, ರವರಿಗೆ ಪವರ್ ಆಫ್ ಅಟಾರ್ನಿ ಮಂಜೂರು ಮಾಡುವಂತೆಯೂ ಕೋರಿ ನಿಯಮಾನುಸಾರ 200 ರೂಪಾಯಿಗಳ ಛಾಪಾಕಾಗದಲ್ಲಿ ಅಗ್ರಿಮೆಂಟ್ ನೀಡಿರುತ್ತಾರೆ. ಆದುದರಿಂದ, ಮೇ|| ಕೆ. ಕೆ. ಎಲೆಕ್ಟ್ರಿಕಲ್ಸ್, ಚಿಕ್ಕಮಗಳೂರು ರವರಿಗೆ ಜಿ.ಪಿ.ಎ. ಮಂಜೂರಾತಿ ನೀಡಬಹುದಾಗಿರುತ್ತೆ. ಈ ಬಗ್ಗೆ ಅನುಮೋದನೆ ನೀಡುವ ಕುರಿತು ವಿಷಯವನ್ನು ಸಭೆ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯ ವಿದ್ಯುತ್ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿಯ ಟೆಂಡರ್‌ನ್ನು 2 / 2010 ರಿಂದ 2 / 2011 ರ ವರೆಗೆ ಅವಧಿಯನ್ನು ವಿಸ್ತರಿಸಬಹುದೆಂದು ಹಾಗೆಯೇ ಮೇ || ಪ್ರಭಾ ಎಲೆಕ್ಟ್ರಿಕಲ್ಸ್, ಬೆಂಗಳೂರು ರವರಿಂದ ಮೇ|| ಕೆ. ಕೆ. ಎಲೆಕ್ಟ್ರಿಕಲ್ಸ್, ಚಿಕ್ಕಮಗಳೂರು ರವರಿಗೆ ಪವರ್ ಆಫ್ ಅಟಾರ್ನಿಯನ್ನು ನಿಯಮಾನುಸಾರ ಅವರಿಂದ ಅಗ್ರಿಮೆಂಟ್ ಪಡೆದು ಮಂಜೂರು ಮಾಡಬಹುದೆಂದು ಸಭೆಯು ಅನುಮೋದನೆ ನೀಡಿತು.

**ವಿಷಯ ನಂ 4.**

ಶ್ರೀ ಎಂ. ಪ್ರಕಾಶ ಕುಮಾರ್, ಟಿ. ಡಿ. ಸತ್ಯನ್, ಶ್ರೀ ಎಸ್. ಎಲ್. ಬೋಜೇಗೌಡ, ಇವರು ಬೀಕನಹಳ್ಳಿ ಗ್ರಾಮದ ಸರ್ವೆ ನಂ. 35 / 2A, 35 / 2B, 35 / 2C ಮತ್ತು 35 / 2E ರಲ್ಲಿನ 6 ಎಕರೆ 03 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಣಿಜ್ಯ ವಿನ್ಯಾಸ ಕರಡು ಅನುಮೋದನೆಗೊಂಡಿದ್ದು ಸದರಿ ಪ್ರದೇಶದಲ್ಲಿ ವಾಣಿಜ್ಯ ಕರಡು ವಿನ್ಯಾಸ ನಕ್ಷೆ ರದ್ದುಪಡಿಸಿ, ವಸತಿ ಉದ್ದೇಶಕ್ಕೆ ವಿನ್ಯಾಸ ನಕ್ಷೆ ಅನುಮೋದನೆಗೆ ಕೋರಿರುವ ಬಗ್ಗೆ.

**ಟಿಪ್ಪಣಿ:**

ಸದರಿ ಪ್ರದೇಶ ಒಟ್ಟು 6 ಎಕರೆ 04 ಗುಂಟೆ ಪ್ರದೇಶಕ್ಕೆ ಪ್ರಾಧಿಕಾರದ ಸಭೆ ದಿನಾಂಕ: 04-02-2000 ವಿಷಯ ಸಂಖ್ಯೆ 8 ರಂತೆ ತೀರ್ಮಾನಿಸಿದೆ, ವಾಣಿಜ್ಯ ಉದ್ದೇಶಕ್ಕೆ ಕರಡು ವಿನ್ಯಾಸ ನಕ್ಷೆ ಅನುಮೋದನೆ ಆಗಿರುತ್ತದೆ.

ಸದರಿ ನಕ್ಷೆಯಲ್ಲಿ ಈ ಕೆಳಕಂಡಂತೆ ಭೂ ಉಪಯೋಗ ನೀಡಲಾಗಿದೆ.

| ಕ್ರ.ಸಂ. | ಭೂ ಉಪಯೋಗ | ವಿಸ್ತೀರ್ಣ ಚದರ ಅಡಿ | ಶೇಕಡವಾರು % |
|---|---|---|---|
| 1 | ವಾಣಿಜ್ಯ | 1,59,430=00 | 60.00 |
| 2 | ಉದ್ಯಾನವನ ಮತ್ತು ನಾಗರೀಕ ಸೌಲಭ್ಯ | 26,572=00 | 10.00 |
| 3 | ರಸ್ತೆಗಳು | 60,428=00 | 25.00 |
| 4 | ವಾಹನ ನೀಲುಗಡೆ | 13,285=00 | 5.00 |
| | ಒಟ್ಟು | 2,65,716=00 | 100.00 |

ಅದರಂತೆ, ವಿನ್ಯಾಸ ಅಭಿವೃದ್ಧಿಗೊಳಿಸುವ ಬಗ್ಗೆ ಕಾಮಗಾರಿಗೆ ತಗಲುವ ವೆಚ್ಚವನ್ನು ಲೆಕ್ಕಾಚಾರ ಹಾಕಿ ವಿನ್ಯಾಸಕ್ಕೆ ನೆಲದ ಮೇಲೆ ಯಥಾವತ್ತಾಗಿ ಅಳವಡಿಸಿ ಅಭಿವೃದ್ಧಿ ಪಡಿಸಲು ಹಾಗೂ ಅಭಿವೃಧಿ ಶುಲ್ಕ ಪಾವ್ತಿಸಲು ಕಛೇರಿಯ ಪತ್ರ ಸಂಖ್ಯೆ. ನಅ : 90 : ಕ–ರೂರೇ : 99-2000 ದಿನಾಂಕ: 13-09-2000 ರಲ್ಲಿ ಕಾರ್ಯದೇಶ ನೀಡಲಾಗಿತ್ತು. ಅದರಂತೆ ದಿನಾಂಕ: 29-06-2000 ರಲ್ಲಿ ವಿನ್ಯಾಸದಲ್ಲಿ ವಾಹನ ನಿಲುಗಡೆಯ ಪ್ರದೇಶ, ರಸ್ತೆ ಪ್ರದೇಶ ಹಾಗೂ ವಿನ್ಯಾಸದ ಪ್ರದೇಶಗಳನ್ನು ಪ್ರಧಿಕಾರಕ್ಕೆ ನೋಂದಾಯಿಸಿ ಪರಿತ್ಯಜನಾ ಪತ್ರ ಮುಖೇನ ಹಸ್ತಾಂತರಿಸಿರುತ್ತಾರೆ.

ಅರ್ಜಿದಾರರು ದಿನಾಂಕ: 03-03-2010 ಹಾಗೂ ದಿನಾಂಕ: 05-04-2010 ರಂದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದ್ದು, ಸದರಿ ಪ್ರದೇಶದ ವಸತಿ ಉದ್ದೇಶಕ್ಕೆ ಅನುಕೂಲವಾಗಿದ್ದು, ಈ ಹಿಂದೆ ಕರಡು ಅನುಮೋದನೆಯಾದ ವಾಣಿಜ್ಯ ವಿನ್ಯಾಸದಲ್ಲಿ ದೊಡ್ಡ ನಿವೇಶನಗಳನ್ನು ಅಳವಡಿಸಿದ್ದು ಆ ನಿವೇಶನಗಳಿಗೆ ಬೇಡಿಕೆ ಇಲ್ಲದೇ ಇರುವುದರಿಂದ, ಸಣ್ಣ ಅಳತೆಯ ನಿವೇಶನಗಳನ್ನು ರಚಿಸಿಕೊಳ್ಳಲು ವಿನ್ಯಾಸವನ್ನು ವಸತಿ ಉದ್ದೇಶಕ್ಕೆ ಪರಿಷ್ಕರಿಸಿ ಮಾರ್ಪಡಿಸಿಕೊಡಲು ಕೋರಿರುತ್ತಾರೆ. ಹಾಗೂ ಸದರಿ ಉದ್ದೇಶಿತ ವಸತಿ ವಿನ್ಯಾಸದಲ್ಲಿ ಬಿಡಬಹುದಾದ ಉದ್ಯಾನವನ, ಸಾರ್ವಜನಿಕ ಸೌಲಭ್ಯ, ಹಾಗೂ ರಸ್ತೆಗಳ ಜಾಗಗಳನ್ನು ನೋಂದಣಿ ಮಾಡಿಕೊಡಲು ಬದ್ದರಾಗಿರುವುದಾಗಿ ತಿಳಿಸಿರುತ್ತಾರೆ. ಹಾಗೂ ಈಗಾಗಲೇ ಕರಡು ವಾಣಿಜ್ಯ ವಿನ್ಯಾಸದಲ್ಲಿರುವ ಯಾವುದೇ ನಿವೇಶನಗಳನ್ನು ಮಾರಾಟ ಮಾಡಿರುವುದಿಲ್ಲವೆಂದು ಹಾಗೂ ಖಾತೆ ನಗರಸಭೆಯಲ್ಲಿ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗಾಗಿ ಈ ಮೇಲ್ಕಂಡಂತೆ ಅರ್ಜಿದಾರರು ಕೋರಿರುವ ವಾಣಿಜ್ಯ ವಿನ್ಯಾಸವನ್ನು ಪ್ರಾಧಿಕಾರದಿಂದ ವಸತಿ ಉದ್ದೇಶಕ್ಕೆ ವಿನ್ಯಾಸವನ್ನು ಮಾರ್ಪಾಡಿಸಲು ವಿಷಯವನ್ನು ಚರ್ಚಿಸಿ ಸೂಕ್ತ ತೀರ್ಮಾನಕ್ಕಾಗಿ ಪ್ರಾಧಿಕಾರದ ಸಭೆಗೆ ಮುಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:**

ಮಹಾಯೋಜನೆಯಲ್ಲಿನ ರಸ್ತೆ ಪರಿಚಲನೆಯನ್ನು ಅನುಸರಿಸಿ ವಸತಿ ವಿನ್ಯಾಸಕ್ಕಾಗಿ ಮಾರ್ಪಡಿಸಿರುತ್ತಾರೆ. ವಲಯ ನಿಯಮಾನುಸಾರ ವಸತಿ ವಿನ್ಯಾಸದಲ್ಲಿರುತ್ತದೆ. ಈಗಾಗಲೇ ದಿನಾಂಕ: 13-09-2000 ರಲ್ಲಿ ನೋಂದಾಯಿತ ವಾಣಿಜ್ಯ ಪತ್ರ ಮುಖೇನಾ ಪ್ರಾಧಿಕಾರಕ್ಕೆ ವಾಣಿಜ್ಯ ವಿನ್ಯಾಸದಲ್ಲಿ ರಸ್ತೆ ಉದ್ಯಾನವನ ಹಾಗೂ ವಾಹನ ನಿಲುಗಡೆಯ ಪ್ರದೇಶಗಳನ್ನು ವಹಿಸಿಕೊಂಡಿರುತ್ತಾರೆ. ಪರಿಷ್ಕರಿಸಿದ ವಿನ್ಯಾಸದ ಬಡಾವಣೆಯಲ್ಲಿ ರಸ್ತೆ, ಉದ್ಯಾನವನ ಪ್ರದೇಶ, ಹಾಗೂ ನಾಗರೀಕ ಸೌಲಭ್ಯದ ಪ್ರದೇಶ ಪ್ರಸ್ತಾಪಿಸಿದ್ದು, ಇವುಗಳನ್ನು ಪ್ರಾಧಿಕಾರಕ್ಕೆ ವಹಿಸಿಕೊಡಬೇಕಾಗಿದೆ. ಈ ಹಿಂದೆ ದಿನಾಂಕ: 13-09-2000 ಕ್ಕೆ ನೋಂದಾಯಿತವಾಗಿರುವ ಪರಿತ್ಯಜನಾ ಪತ್ರವನ್ನು ಪರಿಷ್ಕರಿಸಬೇಕಾಗಿದ್ದು, ಈ ಬಗ್ಗೆ ಪ್ರಾಧಿಕಾರದಲ್ಲಿ ನಿರ್ಣಯಿಸಬೇಕಾಗಿರುತ್ತದೆ. ದಿನಾಂಕ: 13-09-2000 ರಲ್ಲಿ ನೋಂದಾಯಿಸಿ ಪರಿತ್ಯಜಿತ ಪತ್ರ ಪರಿಷ್ಕರಿಸಿ ಹೊಸದಾದ ವಸತಿ ವಿನ್ಯಾಸದ ರಸ್ತೆ, ಉದ್ಯಾನವನ, ನಾಗರೀಕ ಸೌಲಭ್ಯ, ಪ್ರಾಧಿಕಾರಕ್ಕೆ ವಹಿಸಿಕೊಳ್ಳಲು ಪ್ರಾಧಿಕಾರವು ನಿರ್ಣಯಿಸಿದಲ್ಲಿ ಪರಿಷ್ಕರಿಸಿದ ವಸತಿ ವಿನ್ಯಾಸಕ್ಕೆ ಅನುಮೋದನೆ ನೀಡಬಹುದಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ಚರ್ಚಿಸಲಾಯಿತು, ವಿನ್ಯಾಸದಲ್ಲಿನ ಉದ್ಯಾನವನ, ರಸ್ತೆ, ಹಾಗೂ ವಾಹನ ನಿಲುಗಡೆ ಪ್ರದೇಶಗಳನ್ನು ಪ್ರಾಧಿಕಾರಕ್ಕೆ ನೊಂದಾಯಿಸಿಕೊಟ್ಟಿರುವುದರಿಂದ ಸ್ಥಳದಲ್ಲಿ ಹಾಲಿ ಬಂದಿರಬಹುದಾದ ಬೆಳವಣಿಗೆಗಳನ್ನು ಪರಿಶೀಲಿಸಿಕೊಂಡು ವಿಷಯವನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ವಿಷಯ ನಂ 5.**

ಶ್ರೀ ಪಾಪಣ್ಣ ಬಿನ್ ಗುರುವಯ್ಯ, ಮತ್ತು ಶ್ರೀ ವೆಂಕಟೇಶ ಬಿನ್ ಗುರುವಯ್ಯ, ಕೆಂಪನಹಳ್ಳಿ ಚಿಕ್ಕಮಗಳೂರು ಇವರು ಕೆಂಪನಹಳ್ಳಿ ಗ್ರಾಮದ ಸರ್ವೆ ನಂ. 316 / 3 ರಲ್ಲಿನ 00 ಎಕರೆ 11 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಕೋರಿರುವ ಕುರಿತು.

**ಟಿಪ್ಪಣಿ:**

ಶ್ರೀ ಪಾಪಣ್ಣ ಬಿನ್ ಗುರುವಯ್ಯ, ಮತ್ತು ಶ್ರೀ ವೆಂಕಟೇಶ ಬಿನ್ ಗುರುವಯ್ಯ, ಕೆಂಪನಹಳ್ಳಿ ಚಿಕ್ಕಮಗಳೂರು ಇವರು ಕೆಂಪನಹಳ್ಳಿ ಗ್ರಾಮದ ಸರ್ವೆ ನಂ. 316 / 3 ರಲ್ಲಿನ 00 ಎಕರೆ 11 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಕೋರಿರುವ ಪ್ರದೇಶವು ಬೈ–ಪಾಸ್ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ, ಸಿ.ಡಿ.ಪಿ. ನಕ್ಷೆಯಲ್ಲಿ ಕೈಗಾರಿಕಾ ಉದ್ದೇಶಕ್ಕೆ ಕಾಯ್ದಿರಿಸಿದೆ ಈಗ ಸರ್ಕಾರದಿಂದ ಅನುಮೋದನೆಯಾಗಿರುವ ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನೆ ಪರಿಷ್ಕೃತ–1 (ತಾತ್ಕಾಲಿಕ) ನಕ್ಷೆಯಲ್ಲಿ ವಾಣಿಜ್ಯ ಉದ್ದೇಶಕ್ಕೆ ಕಾಯ್ದಿರಿಸಲಾಗಿದೆ, ವಾಣಿಜ್ಯದಲ್ಲಿ ವಸತಿಗೆ ಅವಕಾಶ ಇರುತ್ತದೆ, ಸಿ.ಡಿ.ಪಿ. ಯಲ್ಲಿ ಕೈಗಾರಿಕಾ ವಲಯದಲ್ಲಿರುವುದರಿಂದ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ವಸತಿಗೆ ಅಭಿಪ್ರಾಯ ನೀಡಲು ಅವಕಾಶ ಇರುತ್ತದೆ ಆದ್ದರಿಂದ ಸದರಿ ವಿಷಯವನ್ನು ಸಭೆಗೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ, ಮತ್ತು ಮಾನ್ಯ ಅಧ್ಯಕ್ಷರ ಸೂಚನೆಯಂತೆ ಮತ್ತು ಪ್ರಾಧಿಕಾರದ ಸಭೆಯ ಘಟನೋತ್ತರ ಮಂಜೂರಾತಿಯ ನಿರೀಕ್ಷೆಯ ಮೇರೆಗೆ ಜಿಲ್ಲಾಧಿಕಾರಿಗಳವರಿಗೆ ಅನುಬಂದ– 5 ರಲ್ಲಿ ತಾಂತ್ರಿಕ ಅಭಿಪ್ರಾಯ ನೀಡಲಾಗಿದ್ದು, ತಾತ್ಕಾಲಿಕ ಬಡಾವಣೆ ನಕ್ಷೆ ಅನುಮೋದನೆ ಸಲ್ಲಿಸಬೇಕಾಗಿರುವುದರಿಂದ ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಮಹಾಯೋಜನೆಯಂತೆ ಕೈಗಾರಿಕಾ ವಲಯದಲ್ಲಿದೆ ಆ ಪೈಕಿ ಅರ್ಜಿದಾರರು ತಮಗೆ ಸೇರಿದ 11 ಗುಂಟೆ ಪ್ರದೇಶವನ್ನು ವಸತಿಗೆ ಭೂ ಉಪಯೋಗದ ಬದಲಾವಣೆ ಕೋರಿರುತ್ತಾರೆ, ಕೆ.ಟಿ.ಸಿ.ಪಿ. ಕಾಯ್ದೆ 1961 ರ ಕಲಂ 14 ಎ (iii) ರಂತೆ ಅರ್ಜಿದಾರರು ಭೂ ಉಪಯೋಗ ಬದಲಾವಣೆಯ ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವ್ತಿಸಿದಲ್ಲಿ ಕೈಗಾರಿಕೆಯಿಂದ ವಾಣಿಜ್ಯ / ವಸತಿಗೆ ಭೂ ಉಪಯೋಗವನ್ನು ಬದಲಾಯಿಸಬಹುದಾಗಿದ್ದು ಶುಲ್ಕವನ್ನು ಪಾವ್ತಿಸಿ ಅರ್ಜಿದಾರರು ಪ್ರಾಧಿಕಾರಕ್ಕೆ ತಿಳಿಸಿದಲ್ಲಿ ಸಹ ಅದು Deemed change of Land use ಆಗುವುದಾಗಿ ನಗರ ಯೋಜನಾ ಸದಸ್ಯರು ಸಭೆಗೆ ತಿಳಿಸಿದರು ಹಾಗೂ ಈ ಪ್ರಕರಣವನ್ನು ಕಾಯ್ದೆ ಕಲಂ 18 ರಂತೆ ಶುಲ್ಕ ಪಾವತಿಸಿಕೊಂಡು ವಸತಿಗೆ ಭೂ ಉಪಯೋಗ ಬದಲಾವಣೆ ಆದೇಶ ನೀಡುವುದು ಸೂಕ್ತ ಎಂದು ಅಭಿಪ್ರಾಯಿಸಿದರು.

ಪರಿಸರ ಮಾಲಿನ್ಯ ಅಧಿಕಾರಿಗಳು ಮಾತನಾಡಿ ಮಹಾಯೋಜನೆಯಂತೆ ಕೈಗಾರಿಕೆ ವಲಯವನ್ನು ಪ್ರಸ್ತಾಪಿಸಿರುವ ಪ್ರದೇಶದ ಮಧ್ಯದಲ್ಲಿ ಕೇವಲ 11 ಗುಂಟೆ ಪ್ರದೇಶವನ್ನು ವಸತಿಗೆ ಭೂ ಉಪಯೋಗ ಬದಲಾವಣೆಗೆ ನೀಡಿದಲ್ಲಿ ಕೈಗಾರಿಕಾ ಪ್ರದೇಶದ ಅಭಿವೃದ್ದಿಯು ವಸತಿ ಅಭಿವೃದ್ದಿಗಿಂತ ಭಿನ್ನವಾಗಿರುವುದರಿಂದ ಮುಂದಿನ ದಿನಗಳಲ್ಲಿ ಕೈಗಾರಿಕೆ ನಿರ್ಮಿಸಲು ತೊಂದರೆ ಆಗುತ್ತದೆ ಕೈಗಾರಿಕೆ ಹಾಗೂ ವಸತಿ ವಲಯಗಳ ಮಧ್ಯೆ ಬಫರ್ ಬಿಡುವ ಬಗ್ಗೆ ಪ್ರಶ್ನೆ ಉದ್ಭವಿಸುತ್ತದೆ, ಕೈಗಾರಿಕೆ ಹಾಗೂ ವಸತಿ ವಲಯದ ಮಧ್ಯ 11 ಗುಂಟೆ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಆದಲ್ಲಿ ಕೈಗಾರಿಕಾ ಪ್ರದೇಶದಲ್ಲಿಯೇ ವಸತಿ ವಲಯದ ಸುತ್ತಲೂ ಬಫರ್ ಬಿಡಬೇಕಾಗಿರುವುದರಿಂದ ಕೈಗಾರಿಕೆಗಳ ಅಭಿವೃದ್ದಿಗೆ ಮಾರಕವಾಗುತ್ತದೆ ಎಂದು ಅಭಿಪ್ರಾಯಿಸಿದರು.

ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು ಹಾಗೂ ಮಹಾಯೋಜನೆಯಲ್ಲಿನ ಕೈಗಾರಿಕಾ ವಲಯದ ಮಧ್ಯದಲ್ಲಿ ವಸತಿ ನಿರ್ಮಾಣ ಸೂಕ್ತವಾಗಿರುವುದಿಲ್ಲ ಕಾಯ್ದೆಯಲ್ಲಿ ಈ ಬಗ್ಗೆ ಅವಕಾಶವಿದ್ದರೂ ಸಹ ಕೈಗಾರಿಕಾ ವಲಯದ ಅಂಚಿನಲ್ಲಿದ್ದಲ್ಲಿ ಮಾತ್ರ ವಸತಿಗೆ ಪರಿಗಣಿಸಬಹುದಾಗಿದೆ ಆದರೆ ಮಧ್ಯ ಭಾಗದಲ್ಲಿನ ಪ್ರದೇಶವನ್ನು ವಸತಿಗೆ ಭೂ ಉಪಯೋಗ ಬದಲಾವಣೆ ನೀಡುವುದು ಸಮಂಜಸವಾಗುವುದಿಲ್ಲ ಹಾಗಾಗಿ ಪ್ರಸ್ತಾವನೆಯನ್ನು ತಿರಸ್ಕರಿಸಬಹುದೆಂದು ನಿರ್ಣಯಿಸಲಾಯಿತು.

**ವಿಷಯ ನಂ 6.**

ಶ್ರೀ ಕೆ. ಆರ್. ಕಾರ್ತಿಕ್ ಬಿನ್ ಶ್ರೀ ಕೆ. ಎಸ್. ರಮೇಶ್ ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 545 / 6 ರಲ್ಲಿನ 11 ಎಕರೆ 02 ಗುಂಟೆ ಮತ್ತು ಸರ್ವೆ ನಂ. 545 / 1 ರಲ್ಲಿನ 02 ಎಕರೆ 05 ಗುಂಟೆ ಒಟ್ಟು 13 ಎಕರೆ 07 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಶಾಲಾ ಕಟ್ಟಡ ಉದ್ದೇಶಕ್ಕೆ ಏಕ ನಿವೇಶನ ಅನುಮೋದನೆ ಕೋರಿರುವ ಕುರಿತು.

**ಟಿಪ್ಪಣಿ:**

ಶ್ರೀ ಕೆ. ಆರ್. ಕಾರ್ತಿಕ್ ಬಿನ್ ಶ್ರೀ ಕೆ. ಎಸ್. ರಮೇಶ್ ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 545 / 6 ರಲ್ಲಿನ 11 ಎಕರೆ 02 ಗುಂಟೆ ಮತ್ತು ಸರ್ವೆ ನಂ. 545 / 1 ರಲ್ಲಿನ 02 ಎಕರೆ 05 ಗುಂಟೆ ಒಟ್ಟು 13 ಎಕರೆ 07 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಶಾಲಾ ಕಟ್ಟಡ ಉದ್ದೇಶಕ್ಕೆ ಏಕ ನಿವೇಶನ ಅನುಮೋದನೆ ಕೋರಿರುವ ಪ್ರದೇಶವು 12.00 ಮೀಟರ್ ಅಗಲದ ಕುರುವಂಗಿ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ. ಸದರಿ ಪ್ರದೇಶವು ಮಾನ್ಯ ಜಿಲ್ಲಾಧಿಕಾರಿಗಳವರ ಕಛೇರಿಯಿಂದ ಶಾಲಾ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುವ ಪ್ರದೇಶವಾಗಿರುತ್ತದೆ, ಸದರಿ ಪ್ರದೇಶಕ್ಕೆ ಅರ್ಜಿದಾರರು ಶಾಲಾ ಉಪಯೋಗಕ್ಕೆ ರೂಪ ರೇಖಾ ನಕ್ಷೆಗೆ ಅನುಮೋದನೆ ಕೋರಿರುತ್ತಾರೆ. ಅದರಂತೆ ರೂಪರೇಖಾ ನಕ್ಷೆಗೆ ಅನುಮೋದನೆ ನೀಡುವ ಸಂಬಂದ ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ನಗರ ಯೋಜನಾ ಸದಸ್ಯರವರು ಮಾತನಾಡಿ ತಾವು ಸ್ಥಳ ಪರಿಶೀಲಿಸಿರುವುದಿಲ್ಲ ಎಂದು ತಿಳಿಸಿದರು. ಕಡತ ಪರಿಶೀಲಿಸಲಾಗಿ ಮಹಾಯೋಜನೆಯಂತೆ ಕೃಷಿ ವಲಯದಲ್ಲಿ ವಲಯ ನಿಯಮಾನುಸಾರ ವಿಶೇಷ ಸಂಧರ್ಭನುಸಾರ ಶಾಲಾ ಕಟ್ಟಡ ನಿರ್ಮಿಸಲು ಅವಕಾಶವಿರುತ್ತದೆ ಎಂದು ಸಭೆಗೆ ತಿಳಿಸಿದರು ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಯಿತು, ನಗರ ಯೋಜನಾ ಸದಸ್ಯರು ಸ್ಥಳ ಪರಿಶೀಲಿಸಿ ವಲಯ ನಿಯಮಾನುಸಾರ ಅವಕಾಶವಿರುವುದಾಗಿ ವರದಿ ನೀಡಿದಲ್ಲಿ, ಪ್ರಸ್ತಾವನೆ ಅನುಮೋದಿಸಲು ನಿರ್ಣಯಿಸಲಾಯಿತು.

**ವಿಷಯ ನಂ 7.**

ಹಿರೇಮಗಳೂರು ಹಳೇ ಬಡಾವಣೆಯ ಸರ್ವೆ ನಂ. 519 ರ 06 ಎಕರೆ 02 ಗುಂಟೆ ಜಮೀನಿನ ಬದಲಿಗೆ ಇದೇ ಹಿರೇಮಗಳೂರು ಗ್ರಾಮದ ಸರ್ವೆ ನಂ. 495, 496, 586 ರಲ್ಲಿನ 06 ಎಕರೆ 09 ಗುಂಟೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ.

**ಟಿಪ್ಪಣಿ :**

ಹಿರೇಮಗಳೂರು ಹಳೇ ಬಡಾವಣೆಯ ಸರ್ವೆ ನಂ. 519 ರ 06 ಎಕರೆ 02 ಗುಂಟೆ ಜಮೀನಿನ ಬದಲಿಗೆ ಇದೇ ಹಿರೇಮಗಳೂರು ಗ್ರಾಮದ ಸರ್ವೆ ನಂ. 495, 496, 586 ರಲ್ಲಿನ 06 ಎಕರೆ 09 ಗುಂಟೆ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಹಾಲಿ ಬಡಾವಣೆಯ ಪಕ್ಕದಲ್ಲಿರುವ ಲ್ಯಾಂಡ್ ಬ್ಯಾಂಕ್ ಜಾಗಕ್ಕೆ ಹೊಂದಿಕೊಂಡಂತೆ ಇರುವ ಹಿರೇಮಗಳೂರು ಗ್ರಾಮದ ಸರ್ವೆ ನಂ. 495, 496, 586 ರಲ್ಲಿನ 06 ಎಕರೆ 09 ಗುಂಟೆ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಬಡಾವಣೆ ರಚಿಸಲು ಉದ್ದೇಶಿಸಲಾಗಿದೆ, ಸದರೀ ಪ್ರದೇಶಕ್ಕೆ ಸರ್ಕಾರದಿಂದ ಅನುಮತಿ ಪಡೆದು ಬಡಾವಣೆಗೆ ಹೊಂದಿಕೊಂಡಿರುವುದರಿಂದ ಸದರಿ ಜಮೀನಿನಲ್ಲಿ ಬಡಾವಣೆ ರಚಿಸುವುದು ಸೂಕ್ತವಾಗಿರುತ್ತದೆ, ಅದರಂತೆ ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಮಾನ್ಯ ಶಾಸಕರು ಮಾತನಾಡಿ ಈಗಾಗಲೇ ಸರ್ಕಾರದಿಂದ ಸರ್ವೆ ನಂ. 519 ರ ಬದಲಿಗೆ ಸರ್ವೆ ನಂ. 433, 434, 465 ಮತ್ತು ಇತರೆ ಪ್ರದೇಶದಲ್ಲಿನ ಒಟ್ಟು 06 ಎಕರೆ 10 ಗುಂಟೆ ಪ್ರದೇಶವನ್ನು ಭೂಸ್ವಾಧೀನಪಡಿಸಲು ಪೂರ್ವಾನುಮತಿಯನ್ನು ನೀಡಲಾಗಿದೆ. ವಿಷಯ ಹೀಗಿದ್ದರೂ ಸಹ ಈಗ ವಿಷಯದಲ್ಲಿ ಸರ್ವೆ ನಂ. 519 ರ ಬದಲಾಗಿ ಸರ್ವೆ ನಂ. 495, 496, 586 ರಲ್ಲಿನ 06 ಎಕರೆ 09 ಗುಂಟೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ತಿಳಿಸಲಾಗಿದೆ ಹಾಗಾಗಿ ಈ ಸಭೆಗೆ ಮಂಡಿಸಿರುವ ವಿಷಯವೇ ನ್ಯೂನ್ಯತೆಯಿಂದ ಕೂಡಿರುವುದಾಗಿ ತಿಳಿಸಿದರು, ಸಭೆಯಲ್ಲಿ ಇದನ್ನು ಒಪ್ಪಲಾಯಿತು, ಹಾಗೂ ಹಿರೇಮಗಳೂರು ಗ್ರಾಮದ ಸರ್ವೆ ನಂ. 495, 496, 586 ರಲ್ಲಿನ ಭೂಮಿಗಳು ಪ್ರಾಧಿಕಾರಕ್ಕೆ ಅವಶ್ಯವಿದ್ದಲ್ಲಿ ಪ್ರತ್ಯೇಕವಾಗಿ ವಿಷಯವನ್ನು ಮುಂದಿನ ಸಭೆಯಲ್ಲಿ ಮಂಡಿಸಲು ನಿರ್ಣಯಿಸಲಾಯಿತು.

**ವಿಷಯ ನಂ 8.**

ಶ್ರೀ ಬಿ. ಎ. ಬಾಲಕೃಷ್ಣ ಬಿನ್ ಶ್ರೀ ಅಣ್ಣಪ್ಪ ರಾವ್ ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 329 / P ರಲ್ಲಿನ 00 ಎಕರೆ 32 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ಉದ್ದೇಶಕ್ಕೆ ವಿನ್ಯಾಸ ಅನುಮೋದನೆ ಕೋರಿರುವ ಕುರಿತು.

**ಟಿಪ್ಪಣಿ:**

ಶ್ರೀ ಬಿ. ಎ. ಬಾಲಕೃಷ್ಣ ಬಿನ್ ಶ್ರೀ ಅಣ್ಣಪ್ಪ ರಾವ್ ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 329 / P ರಲ್ಲಿನ 00 ಎಕರೆ 32 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ಉದ್ದೇಶಕ್ಕೆ ವಿನ್ಯಾಸ ಅನುಮೋದನೆ ಕೋರಿರುವ ಪ್ರದೇಶವು 9.00 ಮೀಟರ್ ಅಗಲದ ನಗರಸಭಾ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ. ಅನುಮೋದಿತ ಮಹಾ ಯೋಜನೆಯಲ್ಲಿ ಸದರಿ ಜಮೀನು ವಸತಿ ವಲಯದಲ್ಲಿ ಇರುತ್ತದೆ ಮತ್ತು ಸದರಿ ಪ್ರದೇಶಕ್ಕೆ ಮಾನ್ಯ ಜಿಲ್ಲಾಧಿಕಾರಿಗಳವರ ಕಛೇರಿಯಿಂದ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುತ್ತದೆ, ಸದರಿ ಪ್ರದೇಶಕ್ಕೆ ವಸತಿ ಉದ್ದೇಶಕ್ಕೆ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಸಂಬಂದ ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ವಿಷಯ ಸಂಖ್ಯೆ 08 ಮತ್ತು ವಿಷಯ ಸಂಖ್ಯೆ 09 ರ ಪ್ರದೇಶಗಳು ಒಬ್ಬರಿಗೆ ಸೇರಿದ್ದು ಅಕ್ಕ ಪಕ್ಕದ ಭೂಮಿಗಳಾಗಿದೆ, ಒಟ್ಟಾಗಿ ಸೇರಿಸಿ ಪೂರ್ಣ 01 ಎಕರೆ 30 ಗುಂಟೆ ಪ್ರದೇಶಕ್ಕೆ ಒಂದೇ ವಸತಿ ವಿನ್ಯಾಸ ಅನುಮೋದನೆ ನೀಡುವುದು ಸೂಕ್ತ ಎಂದು ನಗರ ಯೋಜನಾ ಸದಸ್ಯರು ಅಭಿಪ್ರಾಯಿಸಿದರು. ಪ್ರತ್ಯೇಕ ಪ್ರಕರಣಗಳೆಂದು ಪರಿಗಣಿಸಿ ಉದ್ಯಾನವನ ಮತ್ತು ನಗರೀಕ ಸೌಕರ್ಯದ ನಿವೇಶನಗಳ ವಿನಾಯ್ತಿ ನೀಡಿ ವಿನ್ಯಾಸ ಅನುಮೋದನೆ ನೀಡುವುದು ಸೂಕ್ತವಾಗಿರುವುದಿಲ್ಲ ಎಂದು ಸಹ ಅಭಿಪ್ರಾಯಿಸಿದರು. ಮಾನ್ಯ ಅಧ್ಯಕ್ಷರು ಮಾತನಾಡಿ ಇದೇ ವಿಷಯ ಸೂಚಿಯಲ್ಲಿನ ವಿಷಯ ಸಂಖ್ಯೆ 10 ರಲ್ಲಿ ಇಂತಹ 03 ಪ್ರಕರಣಗಳನ್ನು ಹಿಂದಿನ ಒಂದೇ ಸಭೆಯಲ್ಲಿ ಅನುಮೋದಿಸಿರುವುದನ್ನು ಸಭೆಯ ಗಮನಕ್ಕೆ ತಂದರು ಹಾಗೂ ಹಿಂದಿನಿಂದಲೂ ಇಂತಹ ಪ್ರಕರಣಗಳನ್ನು ಅನುಮೋದಿಸಿರುವುದರಿಂದ ಈ ಹಂತದಲ್ಲಿ ನಿಲ್ಲಿಸುವುದು ಸೂಕ್ತವಾಗಿರುವುದಿಲ್ಲ ಎಂದು ಅಭಿಪ್ರಾಯಿಸಿದರು, ಕಾಯ್ದೆಯಲ್ಲಿ 4000 ಚದರ ಮೀಟರ್‌ಗಿಂತ ಕಡಿಮೆ ವಿಸ್ತೀರ್ಣದ ಪ್ರದೇಶಕ್ಕೆ ವಿನ್ಯಾಸ ಅನುಮೋದನೆ ನೀಡುವಾಗ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯಗಳ ವಿನಾಯ್ತಿ ನೀಡುವ ಬಗ್ಗೆ ಅವಕಾಶವಿರುತ್ತದೆ. ಒಂದೇ ಮಾಲಿಕರಿಗೆ ಸೇರಿದ ದೊಡ್ಡ ದೊಡ್ಡ ಜಮೀನುಗಳನ್ನು ವಿನ್ಯಾಸ ರೂಪಿಸುವಾಗ ಉದ್ಯಾನವನ ಮತ್ತು ನಾಗರೀಕ ಸೌಲಭ್ಯದ ಪ್ರದೇಶಗಳಿಗೆ ವಿನಾಯ್ತಿ ನೀಡುವ ಸಲುವಾಗಿಯೇ ಉದ್ದೇಶಪೂರ್ವಕವಾಗಿ 4000 ಚದರ ಮೀಟರ್‌ಗಿಂತ ಕಡಿಮೆ ವಿಸ್ತೀರ್ಣದ ಜಮೀನುಗಳನ್ನು ರೂಪಿಸಿ ಭೂ ಪರಿವರ್ತನೆ ಮಾಡಿಸುತ್ತಿರುವುದು ಕಾಯ್ದೆಯಲ್ಲಿನ ಅಂಶದ ದುರುಪಯೋಗವಾಗುತ್ತಿದೆ ಎಂದು ಆಯುಕ್ತರು ಅಭಿಪ್ರಾಯಿಸಿದರು. ಕಾಯ್ದೆಗೆ ವ್ಯತಿರಿಕ್ತವಾದಲ್ಲಿ ಈ ಹಿಂದೆ ಪ್ರಾಧಿಕಾರದಿಂದ ಅನುಮೋದಿಸಿರುವ ಇಂತಹ ಪ್ರಕರಣಗಳನ್ನು ಪಟ್ಟಿಮಾಡಿ ರದ್ದುಗೊಳಿಸುವ ಬಗ್ಗೆ ಕ್ರಮವಹಿಸಲು ಮಾನ್ಯ ಶಾಸಕರು ಅಭಿಪ್ರಾಯಿಸಿದರು.

ನಾಮ ನಿರ್ದೇಶನ ಸದಸ್ಯರು ಮಾತನಾಡಿ ಉದ್ದೇಶಪೂರ್ವಕವಾಗಿ 4000 ಚದರ ಮೀಟರ್‌ಗಿಂತ ಕಡಿಮೆ ವಿಸ್ತೀರ್ಣದ ಭೂಮಿಗಳನ್ನು ರೂಪಿಸಿ ನಂತರ ಬಡಾವಣೆ ನಕ್ಷೆ ಅನುಮೋದನೆ ನೀಡಿದಲ್ಲಿ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯಗಳ ಕೊರತೆ ಉಂಟಾಗುತ್ತದೆ, ಹಾಗಾಗಿ ಕಾಯ್ದೆಯಲ್ಲಿ ಅವಕಾಶವಿದ್ದರೂ ಸಹ ಉದ್ದೇಶಪೂರ್ವಕವಾಗಿ 4000 ಚದರ ಮೀಟರ್‌ಗಿಂತ ಕಡಿಮೆ ವಿಸ್ತೀರ್ಣ ಇರುವ ಸದರಿ ಪ್ರಕರಣಗಳನ್ನು ಅನುಮೋದಿಸುವುದು ಸೂಕ್ತವಾಗಿರುವುದಿಲ್ಲ ಎಂದು ಅಭಿಪ್ರಾಯಿಸಿದರು. ಸಮಗ್ರವಾಗಿ ಚರ್ಚಿಸಲಾಯಿತು, ಕಾಯ್ದೆಯಲ್ಲಿ ಅವಕಾಶವಿರುವುದರಿಂದ ಭೂ ಪರಿವರ್ತನಾ ವಿಸ್ತೀರ್ಣಕ್ಕೆ ವಲಯ ನಿಯಮಾನುಸಾರ ವಿನ್ಯಾಸವನ್ನು ಪ್ರತ್ಯೇಕವಾಗಿಯೇ ಅನುಮೋದಿಸಲು ನಿರ್ಣಯಿಸಲಾಯಿತು.

**ವಿಷಯ ನಂ 9.**

ಶ್ರೀ ಬಿ. ಎ. ಬಾಲಕೃಷ್ಣ ಬಿನ್ ಶ್ರೀ ಅಣ್ಣಪ್ಪ ರಾವ್ ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 329 / P ರಲ್ಲಿನ 00 ಎಕರೆ 38 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ಉದ್ದೇಶಕ್ಕೆ ವಿನ್ಯಾಸ ಅನುಮೋದನೆ ಕೋರಿರುವ ಕುರಿತು.

**ಟಿಪ್ಪಣಿ:**

ಶ್ರೀ ಬಿ. ಎ. ಬಾಲಕೃಷ್ಣ ಬಿನ್ ಶ್ರೀ ಅಣ್ಣಪ್ಪ ರಾವ್ ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 329 / P ರಲ್ಲಿನ 00 ಎಕರೆ 38 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ಉದ್ದೇಶಕ್ಕೆ ವಿನ್ಯಾಸ ಅನುಮೋದನೆ ಕೋರಿರುವ ಪ್ರದೇಶವು 9.00 ಮೀಟರ್ ಅಗಲದ ನಗರಸಭಾ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ. ಅನುಮೋದಿತ ಮಹಾ ಯೋಜನೆಯಲ್ಲಿ ಸದರಿ ಜಮೀನು ವಸತಿ ವಲಯದಲ್ಲಿ ಇರುತ್ತದೆ ಮತ್ತು ಸದರಿ ಪ್ರದೇಶಕ್ಕೆ ಮಾನ್ಯ ಜಿಲ್ಲಾಧಿಕಾರಿಗಳವರ ಕಛೇರಿಯಿಂದ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುತ್ತದೆ, ಸದರಿ ಪ್ರದೇಶಕ್ಕೆ ವಸತಿ ಉದ್ದೇಶಕ್ಕೆ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಸಂಬಂದ ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ವಿಷಯ ಸಂಖ್ಯೆ 08 ರಲ್ಲಿನ ನಿರ್ಣಯದಂತೆಯೇ ಕಾಯ್ದೆಯಲ್ಲಿ ಅವಕಾಶ ಇರುವುದರಿಂದ ಭೂ ಪರಿವರ್ತನಾ ವಿಷಯಕ್ಕೆ ವಲಯ ನಿಯಮಾನುಸಾರ ವಿನ್ಯಾಸವನ್ನು ಪ್ರತ್ಯೇಕವಾಗಿಯೇ ಅನುಮೋದಿಸಲು ನಿರ್ಣಯಿಸಲಾಯಿತು.

**ವಿಷಯ ನಂ 10.**

ಡಾ., ರಘು ಬಿನ್ ಶ್ರೀ ನಾರಾಯಣಪ್ಪ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 499 / 1 ರಲ್ಲಿನ 00 ಎಕರೆ 34 ಗುಂಟೆ, ಸರ್ವೆ ನಂ. 499 / 2P1 ರಲ್ಲಿನ 00 ಎಕರೆ 21 ಗುಂಟೆ, ಸರ್ವೆ ನಂ. 499 / 2P2 ರಲ್ಲಿನ 00 ಎಕರೆ 21 ಗುಂಟೆ, ಒಟ್ಟು 01 ಎಕರೆ 36 ಗುಂಟೆ, ವಿಸ್ತೀರ್ಣದ ಪ್ರದೇಶದಲ್ಲಿ ಅನುಮೋದಿಸಿರುವ ಬಡಾವಣೆಯನ್ನು ರದ್ದುಪಡಿಸಿ ಪ್ರಾಧಿಕಾರದ ವಶಕ್ಕೆ ಪಡೆಯುವ ಕುರಿತು.

**ಟಿಪ್ಪಣಿ:**

ಡಾ., ರಘು ಬಿನ್ ಶ್ರೀ ನಾರಾಯಣಪ್ಪ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 499 / 1 ರಲ್ಲಿನ 00 ಎಕರೆ 34 ಗುಂಟೆ, ಸರ್ವೆ ನಂ. 499 / 2P1 ರಲ್ಲಿನ 00 ಎಕರೆ 21 ಗುಂಟೆ, ಸರ್ವೆ ನಂ. 499 / 2P2 ರಲ್ಲಿನ 00 ಎಕರೆ 21 ಗುಂಟೆ, ಒಟ್ಟು 01 ಎಕರೆ 36 ಗುಂಟೆ, ವಿಸ್ತೀರ್ಣದ ಪ್ರದೇಶದಲ್ಲಿ ಅನುಮೋದಿಸಿರುವ ಬಡಾವಣೆಯನ್ನು ರದ್ದುಪಡಿಸಿ ಪ್ರಾಧಿಕಾರದ ವಶಕ್ಕೆ ಪಡೆಯುತ್ತಿರುವ ಪ್ರದೇಶವು ಪ್ರಾಧಿಕಾರದ ನಾಲ್ಕನೇ ಹಂತದ ಬಡಾವಣೆಗೆ ಹೊಂದಿಕೊಂಡಂತೆ ಇರುತ್ತದೆ, ಸದರಿ ಪ್ರದೇಶಕ್ಕೆ ರಸ್ತೆ, ಚರಂಡಿ, ಮತ್ತು ವಿದ್ಯುದ್ದೀಕರಣ ಸೌಕರ್ಯಗಳನ್ನು ಮಾಡಲಾಗಿದ್ದು ಸದರಿ ಪ್ರದೇಶವನ್ನು ಪ್ರಾಧಿಕಾರಕ್ಕೆ ವಶಪಡಿಸಿಕೊಂಡಲ್ಲಿ ಉತ್ತಮ ವಸತಿ ಬಡಾವಣೆಯನ್ನು ನಿರ್ಮಿಸಬಹುದಾಗಿರುತ್ತದೆ, ಆದುದರಿಂದ ಸದರಿ ಪ್ರದೇಶವನ್ನು ವಶಪಡಿಸಿ ಬಡಾವಣೆ ರಚಿಸಲು ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ನೀಡಿರುವುದರಿಂದ ಪೂರ್ಣವಾಗಿ ಕಡತ ಪರಿಶೀಲಿಸಿ ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ವಿಷಯ ನಂ 11.**

ಶ್ರೀ ಸಿ. ಎಸ್. ವೆಂಕಟೇಶ್ ಬಿನ್ ಲೇಟ್ ಶ್ರೀನಿವಾಸ ನಾಯ್ಡು ಮತ್ತು ಶ್ರೀ ಬಿ. ಎ. ಬಾಲಕೃಷ್ಣ ಬಿನ್ ಶ್ರೀ ಅಣ್ಣಪ್ಪ ರಾವ್ ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಬೀಕನಹಳ್ಳಿ ಗ್ರಾಮದ ಸರ್ವೆ ನಂ. 74 / 3 ನಂ. 74 / 4 ನಂ. 74 / 5 ಮತ್ತು ನಂ. 74 / 6 ರಲ್ಲಿನ 03 ಎಕರೆ 22 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ಉದ್ದೇಶಕ್ಕೆ ಕರಡು ವಿನ್ಯಾಸ ನಕ್ಷೆ ಅನುಮೋದನೆಯಾಗಿದ್ದು ಈಗ ಪರಿಷ್ಕೃತ ವಿನ್ಯಾಸ ನಕ್ಷೆ ಅನುಮೋದನೆ ಕೋರಿರುವ ಕುರಿತು.

**ಟಿಪ್ಪಣಿ :**

ಶ್ರೀ ಸಿ. ಎಸ್. ವೆಂಕಟೇಶ್ ಬಿನ್ ಲೇಟ್ ಶ್ರೀನಿವಾಸ ನಾಯ್ಡು ಮತ್ತು ಶ್ರೀ ಬಿ. ಎ. ಬಾಲಕೃಷ್ಣ ಬಿನ್ ಶ್ರೀ ಅಣ್ಣಪ್ಪ ರಾವ್ ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಬೀಕನಹಳ್ಳಿ ಗ್ರಾಮದ ಸರ್ವೆ ನಂ. 74 / 3 ನಂ. 74 / 4 ನಂ. 74 / 5 ಮತ್ತು ನಂ. 74 / 6 ರಲ್ಲಿನ 03 ಎಕರೆ 22 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ಉದ್ದೇಶಕ್ಕೆ ಕರಡು ವಿನ್ಯಾಸ ನಕ್ಷೆ ಅನುಮೋದನೆಯಾಗಿದ್ದು ಈಗ ಪರಿಷ್ಕೃತ ವಿನ್ಯಾಸ ನಕ್ಷೆ ಅನುಮೋದನೆ ಕೋರಿರುವ ಪ್ರದೇಶವು ದಿನಾಂಕ: 07-05-2009 ರಲ್ಲಿ ಕರಡು ವಿನ್ಯಾಸ ನಕ್ಷೆ ಅನುಮೋದನೆ ನೀಡಲಾಗಿದೆ, ಅದರಂತೆ ವಿನ್ಯಾಸ ನಕ್ಷೆಯನ್ನು ಭೂಮಿಯ ಮೇಲೆ ಅಳವಡಿಸಿ ರಸ್ತೆ ಚರಂಡಿ, ನಾಗರೀಕ ಸೌಕರ್ಯದ ನಿವೇಶನ ಹಾಗೂ ಉದ್ಯಾನವನವನ್ನು ಹಸ್ತಾಂತರಿಸಿರುವುದಿಲ್ಲ, ಹಾಗೂ ಸ್ಥಳದಲ್ಲಿ ಯಾವುದೇ ಅಭಿವೃದ್ದಿ ಮಾಡಿರುವುದಿಲ್ಲ ಹಾಗಾಗಿ ಅರ್ಜಿದಾರರು ಸದರಿ ಪ್ರದೇಶದಲ್ಲಿನ ದೊಡ್ಡ ನಿವೇಶನಗಳನ್ನು ಬೇಡಿಕೆ ಇಲ್ಲದ ಕಾರಣ ಸಣ್ಣ ಅಳತೆಯ ನಿವೇಶನಗಳನ್ನು ಅಳವಡಿಸಿಕೊಡಲು ಕೋರಿರುತ್ತಾರೆ, ಅದರಂತೆ ವಲಯ ನಿಯಮಾವಳಿಗೆ ಅನುಗುಣವಾಗಿ ತಯಾರಿಸಿದ ಪರಿಷ್ಕೃತ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಪ್ರಾಧಿಕಾರದ ಸಭೆಗೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ನಗರ ಯೋಜನಾ ಸದಸ್ಯರು ಮಾತನಾಡಿ ಸದರಿ ಪ್ರದೇಶವು ಖಾಲಿ ಇದ್ದು ಅಭಿವೃದ್ದಿ ಹೊಂದಿರುವುದಿಲ್ಲ ಎಂದು ತಿಳಿಸಿದರು, ಅಭಿವೃದ್ದಿ ಹೊಂದದ ಕಾರಣ ವಲಯ ನಿಯಮಾನುಸಾರ ಪರಿಷ್ಕರಿಸಿದ ವಿನ್ಯಾಸವನ್ನು ಅನುಮೋದಿಸಲು ನಿರ್ಣಯಿಸಲಾಯಿತು.

## ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ಇತರೆ ವಿಷಯಗಳು

**ವಿಷಯ ನಂ. 1.**

ಪ್ರಾಧಿಕಾರದ ವ್ಯಾಪ್ತಿಯಲ್ಲಿನ ನಾಗರೀಕ ಸೌಲಭ್ಯದ ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆ.

**ಟಿಪ್ಪಣಿ :**

ಶ್ರೀ ನಾರಾಯಣಗುರು ಸಮಿತಿ ಚಿಕ್ಕಮಗಳೂರು ಇವರು ಈಡಿಗ ಸಮುದಾಯದ ವಿದ್ಯಾರ್ಥಿಗಳಿಗೆ ಶಾಲೆ ತೆರೆಯಲು ಹಾಗೂ ಸಮುದಾಯದ ಕುಲಬಾಂದವರ ಸಂಘಟನೆಗೆ ಸಭಾ ಭವನ ನಿರ್ಮಾಣ ಮಾಡುವ ಉದ್ದೇಶಕ್ಕೆ ನಿವೇಶನ ಕೇಳಿದ್ದು ಇದು ಸಮಗ್ರ ಸಾರ್ವಜನಿಕರ ಸೌಕರ್ಯದ ವ್ಯಾಪ್ತಿಗೆ ಬರುವುದಿಲ್ಲ ಎಂದು ಅಭಿಪ್ರಾಯ ಪಡಲಾಯಿತು ಸದರೀ ಸಂಸ್ಥೆಗೆ ಪತ್ರ ಬರೆದು ಸಾರ್ವಜನಿಕ ಸೌಕರ್ಯ ನಿವೇಶನಗಳ ಹಂಚಿಕೆಗೆ ಇರಬೇಕಾದ ಅರ್ಹತೆ ಮತ್ತು ವಿವರಗಳನ್ನು ತಿಳಿಸಿ ಅದರಂತೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿ ಮುಂದಿನ ಸಭೆಗೆ ವಿಷಯ ಮಂಡಿಸಲು ದಿನಾಂಕ: 06-03-2010 ರ ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನಿಸಲಾಗಿತ್ತು.

ಆದರೆ ಅರ್ಜಿದಾರರು ದಿನಾಂಕ: 08-03-2010 ರಂದು ಮತ್ತೊಮ್ಮೆ ಅರ್ಜಿ ಸಲ್ಲಿಸಿ ಶಾಲೆ ಮತ್ತು ಸಮುದಾಯ ಭವನ ನಿರ್ಮಾಣಕ್ಕೆ 565.64 ಚದರ ಮೀಟರ್ ಅಳತೆಯ ನಿವೇಶನ ಮಂಜೂರು ಮಾಡಲು ಮನವಿ ಸಲ್ಲಿಸಿರುತ್ತಾರೆ, ಅದರಂತೆ ಸದರಿ ಸಂಸ್ಥೆಗೆ ನಾಗರೀಕ ಸೌಕರ್ಯದ ನಿವೇಶನ ಹಂಚಿಕೆ ಮಾಡಲು ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ಒಕ್ಕಲಿಗರ ಮಹಿಳಾ ಸಂಘ ಚಿಕ್ಕಮಗಳೂರು ಇವರು ಅರ್ಜಿಗೆ ನಿಗದಿಪಡಿಸಿದ್ದ ದಿನಾಂಕ ಮೀರಿದ ನಂತರ ನಿವೇಶನ ಶುಲ್ಕ ಪಾವತಿಸಿರುವುದರಿಂದ ಈ ಅರ್ಜಿಯನ್ನು ಸಹ ಸೂಕ್ತ ವಿವರಗಳನ್ನು ತರಿಸಿಕೊಂಡು ಮುಂದಿನ ಸಭೆಗೆ ಮಂಡಿಸಲು ದಿನಾಂಕ: 06-03-2010 ರ ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನಿಸಲಾಗಿತ್ತು, ಆದರೆ ಸದರಿ ಸಂಸ್ಥೆಯವರು ಕಲ್ಯಾಣನಗರದಲ್ಲಿ 565.64 ಚದರ ಮೀಟರ್ ವಿಸ್ತೀರ್ಣದ ಪ್ರದೇಶದಲ್ಲಿ ಸಾರ್ವಜನಿಕ ಗ್ರಂಥಾಲಯ ನಿರ್ಮಾಣ ಮಾಡಲು ಉದ್ದೇಶಿಸಿರುವುದಾಗಿ ತಿಳಿಸಿರುತ್ತಾರೆ, ಅದರಂತೆ ಸದರಿ ಸಂಸ್ಥೆಗೆ 565.64 ಚದರ ಮೀಟರ್ ಅಳತೆಯ ನಾಗರೀಕ ಸೌಕರ್ಯದ ನಿವೇಶನವನ್ನು ಹಂಚಿಕೆ ಮಾಡಲು ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಇನ್ನು ಹೆಚ್ಚಿನ ಮಾಹಿತಿಗಳನ್ನು ಹಾಗೂ ಈಗಾಗಲೇ ಸಲ್ಲಿಸಿರುವ ಸಾರ್ವಜನಿಕ ಸೌಕರ್ಯ ನಿವೇಶನಗಳ ಹಂಚಿಕೆಗೆ ಇರಬೇಕಾದ ಅರ್ಹತೆ ಮತ್ತು ವಿವರಗಳನ್ನು ಪರಿಶೀಲಿಸಿ, ಹಾಗೂ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯದ ನಿವೇಶನಗಳನ್ನು ಸಹ ಪರಿಶೀಲಿಸಿ ಹಂಚಿಕೆ ಮಾಡಲು ವಿಷಯವನ್ನು ಮುಂದಿನ ಸಭೆಗೆ ಮಂಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಪಡೆದು ಸಭೆಯು ಮುಕ್ತಾಯವಾಯಿತು.**

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

# ದಿನಾಂಕ: 07-07-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು.

## ಸಭೆಯಲ್ಲಿ ಹಾಜರಿದ್ದ ಸದಸ್ಯರು.

| | | |
|---|---|---|
| 1 | ಶ್ರೀ ಬಿ. ಹೆಚ್. ಶ್ರೀಕಾಂತ್ ಪೈ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಅಧ್ಯಕ್ಷರು |
| 2 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 3 | ಶ್ರೀ ಜಿ. ಲೋಕೇಶ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 4 | ಶ್ರೀ ಮಧು ಕುಮಾರ್‌ರಾಜ್ ಅರಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 5 | ಶ್ರೀಮತಿ ವೀಣಾ ಶೆಟ್ಟಿ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 6 | ಶ್ರೀ ರಾಜು<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 7 | ಸಹಾಯಕ ನಿರ್ದೇಶಕರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |
| 8 | ಕಾರ್ಯಪಾಲಕ ಅಭಿಯಂತರರು,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 9 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 10 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಹಾಸನ.<br>(ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 11 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |
| 12 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು. | ಸದಸ್ಯರು |
| 13 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 14 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 15 | ಪರಿಸರ ಮಾಲಿನ್ಯ ಅಧಿಕಾರಿಗಳು,<br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>ಚಿಕ್ಕಮಗಳೂರು | ಸದಸ್ಯರು |

## ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.

| | | |
|---|---|---|
| 1 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 2 | ಶ್ರೀ ಶ್ರೀನಿವಾಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 3 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಆಹ್ವಾನಿತರು |

**ವಿಷಯ ನಂ 1.**

ದಿನಾಂಕ: 30-04-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸುವ ಬಗ್ಗೆ.

**ಟಿಪ್ಪಣಿ :**

ದಿನಾಂಕ: 30-04-2010 ರಂದು ನಡೆದ ನಗರಾಭಿವೃದ್ದಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರುಗಳಿಗೂ ಕಳುಹಿಸಿಕೊಡಲಾಗಿದೆ, ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದು.

**ತೀರ್ಮಾನ :**

ದಿನಾಂಕ: 07-07-2010 ರಂದು ಮದ್ಯಾಹ್ನ 3.00 ಗಂಟೆಗೆ ಶ್ರೀ ಬಿ. ಹೆಚ್. ಶ್ರೀಕಾಂತ್ ಪೈ ನೂತನ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು, ಸಭೆಯಲ್ಲಿ ಮಾನ್ಯ ಶಾಸಕರಾದ ಶ್ರೀ ಸಿ. ಟಿ. ರವಿ ಹಾಗೂ ಇತರೆ ಸದಸ್ಯರುಗಳು ಉಪಸ್ಥಿತರಿದ್ದರು, ಆಯುಕ್ತರು ಮಾತನಾಡಿ ಹೊಸದಾಗಿ ಸರ್ಕಾರದಿಂದ ನೇಮಕಗೊಂಡ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಶ್ರೀಕಾಂತ್ ಪೈ ರವರನ್ನು ಹಾಗೂ ಪ್ರಾಧಿಕಾರದ ಕಛೇರಿಗೆ ಸರ್ಕಾರದಿಂದ ಹೊಸದಾಗಿ ಮಂಜೂರಾದ ನಗರ ಯೋಜನಾ ಸದಸ್ಯರ ಹುದ್ದೆಗೆ ನೇಮಕಗೊಂಡ ಶ್ರೀ ಎಂ. ಅಣ್ಣಪ್ಪ, ಸಹಾಯಕ ನಿರ್ದೇಶಕರನ್ನು ಸ್ವಾಗತಿಸಿದರು ಮತ್ತು ಮಾನ್ಯ ಶಾಸಕರು ಹಾಗೂ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿ ನಂತರ ಸಭೆ ನಡೆಸಿಕೊಡಲು ಅಧ್ಯಕ್ಷರಿಗೆ ಕೋರಿದರು.

ದಿನಾಂಕ: 30-04-2010 ರಂದು ನಡೆದ ನಗರಾಭಿವೃದ್ದಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳ ಸ್ಥಿರೀಕರಣದ ಬಗ್ಗೆ ಚರ್ಚಿಸಲಾಯಿತು, ಹಿಂದಿನ ಸಭೆಯ ವಿಷಯ ಸಂಖ್ಯೆ. 8 ಮತ್ತು 9 ಕ್ಕೆ ಸಂಬಂದಿಸಿದಂತೆ ಶ್ರೀ ಬಾಲಕೃಷ್ಣ ಬಿನ್ ಶ್ರೀ ಅಣ್ಣಪ್ಪ ರವರಿಗೆ ಸೇರಿದ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 329 / P ರಲ್ಲಿನ 00 ಎಕರೆ 32 ಗುಂಟೆ ಮತ್ತು 00 ಎಕರೆ 39 ಗುಂಟೆ ಒಟ್ಟು 01 ಎಕರೆ 03 ಗುಂಟೆ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ ಒಪ್ಪಿಗೆ ನೀಡಿದೆ ಎಂದು ತೀರ್ಮಾನಿಸಿದಂತೆ ನಡವಳಿಯ ಬಗ್ಗೆ ಮಾನ್ಯ ಶಾಸಕರು ಪ್ರಸ್ತಾಪಿಸಿ ಈ ರೀತಿ ಒಂದೇ ಸರ್ವೆ ನಂಬರಿನ ಒಬ್ಬರೇ ಮಾಲೀಕರಿಗೆ ಸೇರಿದ ಜಮೀನನ್ನು ತುಂಡು ಮಾಡಿ ವಿನ್ಯಾಸ ಅನುಮೋದನೆಗೆ ಕೋರಿ ಸರ್ಕಾರಕ್ಕೆ ನೀಡಬೇಕಾದ ಪಾರ್ಕ್ ರಸ್ತೆ, ನಾಗರೀಕ ನಿವೇಶನಗಳನ್ನು ನಿರ್ಮಿಸಲು ರಿಯಾಯಿತಿ ಪಡೆದು ಪ್ರಾಧಿಕಾರಕ್ಕೆ ಕಾನೂನು ಭಾಹಿರವಾಗಿ ದ್ರೋಹ ಬಗೆದಂತೆ ಆಗುತ್ತದೆ ಆದ್ದರಿಂದ ಆ ಎರಡು ವಿಷಯಗಳಿಗೆ ಅನುಮೋದನೆಯನ್ನು ನೀಡಿರಲಿಲ್ಲ, ಆದರೆ ಅನುಮೋದಿಸಲಾಗಿದೆ ಎಂದು ಹೇಗೆ ತಪ್ಪು ನಡವಳಿ ದಾಖಲಿಸಲಾಗಿದೆ ಎಂದು ಪ್ರಶ್ನಿಸಿದರು, ಈ ಬಗ್ಗೆ ಆಯುಕ್ತರು ಮಾತನಾಡಿ ಈ ಹಿಂದಿನ ಸಭೆಯಲ್ಲಿ ತಾವು ಹಾಜರಿರಲಿಲ್ಲ ಮತ್ತು ಸಭೆಯಲ್ಲಿ ತೀರ್ಮಾನ ಆಗಿರುವುದನ್ನು ದಾಖಲಿಸಿ ಈ ಹಿಂದಿನ ನಗರ ಯೋಜನಾ ಸದಸ್ಯರು ಅನುಮೋದನೆಗೆ ಸಲ್ಲಿಸಿದ್ದರಿಂದ ಈಗಾಗಲೇ ವಿನ್ಯಾಸ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿದರು, ಅಧ್ಯಕ್ಷರು ಮಾತನಾಡಿ ಸದರಿ ವಿನ್ಯಾಸ ಅನುಮೋದನೆ ರದ್ದುಗೊಳಿಸಲು ಹಾಗೂ ಸರ್ಕಾರಕ್ಕೆ ಪತ್ರ ಬರೆದು ಒಟ್ಟು ಭೂಮಿಯನ್ನು ವಿಭಜಿಸಿ ನಂತರ ವಿನ್ಯಾಸ ಅನುಮೋದನೆಗೆ ಕೋರುತ್ತಿರುವುದರಿಂದ ಉದ್ಯಾನವನ ಸಾರ್ವಜನಿಕ ಉಪಯೋಗಕ್ಕೆ ಬಿಡಬೇಕಾದ ಭೂಮಿಯನ್ನು ಬಿಡದೆ ವಂಚಿಸಲು ಪ್ರಯತ್ನಿಸುತ್ತಿರುವುದರ ಬಗ್ಗೆ ಸರ್ಕಾರದ ಮಾರ್ಗದರ್ಶನ ಕೋರಲು ಸೂಚಿಸಿದರು, ಆದರಂತೆ ಸಭೆ ಒಪ್ಪಿ ತೀರ್ಮಾನ ಮಾಡಿತು.

**ವಿಷಯ ನಂ 2.**

2010 ನೇ ಸಾಲಿನ ಏಪ್ರಿಲ್ ಮತ್ತು ಮೇ ಮಾಹೆಯ ಆದಾಯ ಮತ್ತು ಖರ್ಚಿನ ವಿವರಗಳನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.

**ಟಿಪ್ಪಣಿ :**

2010 ನೇ ಸಾಲಿನ ಏಪ್ರಿಲ್ ಮತ್ತು ಮೇ ಮಾಹೆಯ ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ–1 ಮತ್ತು ಅನುಬಂಧ–2 ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದಾಗಿದ್ದು ಸಭೆಗೆ ಮಂಡಿಸಿದೆ.

**ತೀರ್ಮಾನ :**

2010 ನೇ ಸಾಲಿನ ಏಪ್ರಿಲ್ ಮತ್ತು ಮೇ ಮಾಹೆಗಳ ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ–1 ಮತ್ತು ಅನುಬಂಧ–2 ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ 3.**

ಹಿರೇಮಗಳೂರು ಹಳೇ ವಸತಿ ಬಡಾವಣೆ ಸರ್ವೆ ನಂ. 433, 434 ಮತ್ತಿತರೆ ಸರ್ವೆ ನಂಬರುಗಳ 06 ಎಕರೆ 10 ಗುಂಟೆ ಭೂಮಿಯ ಬದಲಾಗಿ ಸದರೀ ಹಿರೇಮಗಳೂರು ಸರ್ವೆ ನಂ. 495, 496 ಮತ್ತು 586 ರಲ್ಲಿನ 06 ಎಕರೆ 09 ಗುಂಟೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ.

**ಟಿಪ್ಪಣಿ :**

ದಿನಾಂಕ: 06-03-2010 ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ. 08 ರಲ್ಲಿ ಹಿರೇಮಗಳೂರು ಹಳೇ ವಸತಿ ಬಡಾವಣೆ, ಸರ್ವೆ ನಂ. 433, 465 ಮತ್ತು 434 ರಲ್ಲಿ 06 ಎಕರೆ 10 ಗುಂಟೆ ಪ್ರದೇಶವನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಆಗಿದ್ದ ದಿನಾಂಕ: 05-10-2007 ರ ನಿರ್ಣಯವನ್ನು ರದ್ದುಗೊಳಿಸಿ ಅದರ ಬದಲಿಗೆ ಬೇರೆ 06 ಎಕರೆ 02 ಗುಂಟೆ ಭೂಮಿಯನ್ನು ಕಡ್ಡಾಯವಾಗಿ ಭೂಸ್ವಾಧೀನ ಪಡಿಸಿಕೊಳ್ಳುವಂತೆ ಆಗಿದ್ದ ನಿರ್ಣಯದಂತೆ ಸದರೀ ಪ್ರಾಧಿಕರದ ಹಳೇ ವಸತಿ ಬಡಾವಣೆಗೆ ಹೊಂದಿಕೊಂಡಂತೆ ಹಿರೇಮಗಳೂರು ಗ್ರಾಮದ ಸರ್ವೆ ನಂ. 495, 496 ಮತ್ತು 586 ರಲ್ಲಿನ 06 ಎಕರೆ 09 ಗುಂಟೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ಮೇಲಿನ ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು ಹಾಗೇಯೇ ದಿನಾಂಕ: 06-03-2010 ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ. 08 ರಲ್ಲಿ ಹಿರೇಮಗಳೂರು ಸರ್ವೆ ನಂ. 433, 465 ಮತ್ತು 434 ರಲ್ಲಿ 06 ಎಕರೆ 10 ಗುಂಟೆ ಪ್ರದೇಶವನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಆಗಿದ್ದ ನಿರ್ಣಯವನ್ನು ರದ್ದುಗೊಳಿಸಿ ಅದರ ಬದಲಿಗೆ ಹಿರೇಮಗಳೂರು ಸರ್ವೆ ನಂ. 495, 496 ಮತ್ತು 586 ರಲ್ಲಿನ 06 ಎಕರೆ 09 ಗುಂಟೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಮುನ್ನ ಯಾವ ಕಾರಣಕ್ಕಾಗಿ ಸರ್ವೆ ನಂ. 433, 465, 434 ನ್ನು ಕೈಬಿಡಬೇಕೆಂದು 06-03-2010 ರ ಸಭೆಯಲ್ಲಿ ನಿರ್ಣಯಿಸಲಾಗಿದೆ ಎಂದು ಪ್ರಶ್ನಿಸಿದರು, ಆಯುಕ್ತರು ಸದರಿ ನಿರ್ಣಯ ಓದಿ ಸದರಿ ಭೂಮಿಯ ರೈತರು ಸಣ್ಣ ರೈತರಾಗಿರುವುದರಿಂದ ಅದನ್ನು ಪರಿಗಣಿಸಿ ಕೈ ಬಿಡಲು ತೀರ್ಮಾನಿಸಿದೆ ಎಂದು ತಿಳಿಸಿದರು, ಈಗ ಅದರ ಬದಲಿಗೆ ಸೂಚಿಸುತ್ತಿರುವ ಭೂಮಿಯ ವಿವರ ಕೇಳಿದರು ಅದೂ ಸಹ ಸಣ್ಣ ರೈತರಿಗೆ ಸೇರಿದ್ದಾಗಿ ತಿಳಿಸಲಾಯಿತು, ಈ ಬಗ್ಗೆ ನ್ಯಾಯಾಲಯಗಳಲ್ಲಿ ಪ್ರಶ್ನಿಸಿದಾಗ ಪ್ರಾಧಿಕಾರಕ್ಕೆ ಮುಜುಗರವಾಗದ ರೀತಿಯಲ್ಲಿ ಇರಬೇಕು ಆದ್ದರಿಂದ ಸಂಪೂರ್ಣ ವಿವರಗಳನ್ನು ತರಿಸಿ ಪರಿಶೀಲಿಸಿ ಮುಂದಿನ ಸಭೆಗೆ ಮಂಡಿಸುವುದು ಸೂಕ್ತ ಎಂದು ಮಾನ್ಯ ಶಾಸಕರು ಹಾಗೂ ಅಧ್ಯಕ್ಷರು ಅಭಿಪ್ರಾಯಪಟ್ಟರು, ಅದಕ್ಕೆ ಸಭೆ ಒಪ್ಪಿಗೆ ನೀಡಿತು.

**ವಿಷಯ ನಂ 4.**

ಶ್ರೀ ಎಂ. ಪ್ರಕಾಶ್ ಕುಮಾರ್, ಶ್ರೀ ಟಿ. ಡಿ. ಸತ್ಯನ್, ಶ್ರೀ ಎಸ್. ಎಲ್. ಬೋಜೇಗೌಡ ಇವರು ಬೀಕನಹಳ್ಳಿ ಗ್ರಾಮದ ಸರ್ವೆ ನಂ. 35 / 2A, 35 / 2B, 35 / 2C ಮತ್ತು 35 / 2E ರಲ್ಲಿನ 06 ಎಕರೆ 03 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಣಿಜ್ಯ ವಿನ್ಯಾಸ ಕರಡು ಅನುಮೋದನೆಗೊಂಡಿದ್ದು ಸದರೀ ಪ್ರದೇಶದಲ್ಲಿ ವಾಣಿಜ್ಯ ಕರಡು ವಿನ್ಯಾಸ ನಕ್ಷೆ ರದ್ದುಪಡಿಸಿ ವಸತಿ ಉದ್ದೇಶಕ್ಕೆ ವಿನ್ಯಾಸ ನಕ್ಷೆ ಅನುಮೋದನೆ ಕೋರಿರುವ ಬಗ್ಗೆ.

**ಟಿಪ್ಪಣಿ:**

ಶ್ರೀ ಎಂ. ಪ್ರಕಾಶ್ ಕುಮಾರ್, ಶ್ರೀ ಟಿ. ಡಿ. ಸತ್ಯನ್, ಶ್ರೀ ಎಸ್. ಎಲ್. ಬೋಜೇಗೌಡ ಇವರು ಬೀಕನಹಳ್ಳಿ ಗ್ರಾಮದ ಸರ್ವೆ ನಂ. 35 / 2A, 35 / 2B, 35 / 2C ಮತ್ತು 35 / 2E ರಲ್ಲಿನ 06 ಎಕರೆ 03 ಗುಂಟೆ ಪ್ರದೇಶಕ್ಕೆ ಪ್ರಾಧಿಕಾರದ ಸಭೆ ದಿನಾಂಕ: 04-02-2000 ವಿಷಯ ಸಂಖ್ಯೆ 8 ರಂತೆ ತೀರ್ಮಾನಿಸಿದೆ, ವಾಣಿಜ್ಯ ಉದ್ದೇಶಕ್ಕೆ ಕರಡು ವಿನ್ಯಾಸ ನಕ್ಷೆ ಅನುಮೋದನೆ ಆಗಿರುತ್ತದೆ.

ಸದರಿ ನಕ್ಷೆಯಲ್ಲಿ ಈ ಕೆಳಕಂಡಂತೆ ಭೂ ಉಪಯೋಗ ನೀಡಲಾಗಿದೆ.

| ಕ್ರ.ಸಂ. | ಭೂ ಉಪಯೋಗ | ವಿಸ್ತೀರ್ಣ ಚದರ ಅಡಿ | ಶೇಕಡವಾರು % |
|---|---|---|---|
| 1 | ವಾಣಿಜ್ಯ | 1,59,430=00 | 60.00 |
| 2 | ಉದ್ಯಾನವನ ಮತ್ತು ನಾಗರೀಕ ಸೌಲಭ್ಯ | 26,572=00 | 10.00 |
| 3 | ರಸ್ತೆಗಳು | 60,428=00 | 25.00 |
| 4 | ವಾಹನ ನೀಲುಗಡೆ | 13,285=00 | 5.00 |
| | ಒಟ್ಟು | 2,65,716=00 | 100.00 |

ಅದರಂತೆ, ವಿನ್ಯಾಸ ಅಭಿವೃದ್ಧಿಗೊಳಿಸುವ ಬಗ್ಗೆ ಕಾಮಗಾರಿಗೆ ತಗಲುವ ವೆಚ್ಚವನ್ನು ಲೆಕ್ಕಾಚಾರ ಹಾಕಿ ವಿನ್ಯಾಸಕ್ಕೆ ನೆಲದ ಮೇಲೆ ಯಥಾವತ್ತಾಗಿ ಅಳವಡಿಸಿ ಅಭಿವೃದ್ಧಿ ಪಡಿಸಲು ಹಾಗೂ ಅಭಿವೃಧಿ ಶುಲ್ಕ ಪಾವ್ತಿಸಲು ಕಛೇರಿಯ ಪತ್ರ ಸಂಖ್ಯೆ. ನಅ : 90 : ಕ–ರೂರೇ : 99-2000 ದಿನಾಂಕ: 13-09-2000 ರಲ್ಲಿ ಕಾರ್ಯದೇಶ ನೀಡಲಾಗಿತ್ತು. ಅದರಂತೆ ದಿನಾಂಕ: 29-06-2000 ರಲ್ಲಿ ವಿನ್ಯಾಸದಲ್ಲಿ ವಾಹನ ನಿಲುಗಡೆಯ ಪ್ರದೇಶ, ರಸ್ತೆ ಪ್ರದೇಶ ಹಾಗೂ ವಿನ್ಯಾಸದ ಪ್ರದೇಶಗಳನ್ನು ಪ್ರಧಿಕಾರಕ್ಕೆ ನೋಂದಾಯಿಸಿ ಪರಿತ್ಯಜನಾ ಪತ್ರ ಮುಖೇನ ಹಸ್ತಾಂತರಿಸಿರುತ್ತಾರೆ.

ಅರ್ಜಿದಾರರು ದಿನಾಂಕ: 03-03-2010 ಹಾಗೂ ದಿನಾಂಕ: 05-04-2010 ರಂದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದ್ದು, ಸದರಿ ಪ್ರದೇಶದ ವಸತಿ ಉದ್ದೇಶಕ್ಕೆ ಅನುಕೂಲವಾಗಿದ್ದು, ಈ ಹಿಂದೆ ಕರಡು ಅನುಮೋದನೆಯಾದ ವಾಣಿಜ್ಯ ವಿನ್ಯಾಸದಲ್ಲಿ ದೊಡ್ಡ ನಿವೇಶನಗಳನ್ನು ಅಳವಡಿಸಿದ್ದು ಆ ನಿವೇಶನಗಳಿಗೆ ಬೇಡಿಕೆ ಇಲ್ಲದೇ ಇರುವುದರಿಂದ, ಸಣ್ಣ ಅಳತೆಯ ನಿವೇಶನಗಳನ್ನು ರಚಿಸಿಕೊಳ್ಳಲು ವಿನ್ಯಾಸವನ್ನು ವಸತಿ ಉದ್ದೇಶಕ್ಕೆ ಪರಿಷ್ಕರಿಸಿ ಮಾರ್ಪಡಿಸಿಕೊಡಲು ಕೋರಿರುತ್ತಾರೆ. ಹಾಗೂ ಸದರಿ ಉದ್ದೇಶಿತ ವಸತಿ ವಿನ್ಯಾಸದಲ್ಲಿ ಬಿಡಬಹುದಾದ ಉದ್ಯಾನವನ, ಸಾರ್ವಜನಿಕ ಸೌಲಭ್ಯ, ಹಾಗೂ ರಸ್ತೆಗಳ ಜಾಗಗಳನ್ನು ನೋಂದಣಿ ಮಾಡಿಕೊಡಲು ಬದ್ದರಾಗಿರುವುದಾಗಿ ತಿಳಿಸಿರುತ್ತಾರೆ. ಹಾಗೂ ಈಗಾಗಲೇ ಕರಡು ವಾಣಿಜ್ಯ ವಿನ್ಯಾಸದಲ್ಲಿರುವ ಯಾವುದೇ ನಿವೇಶನಗಳನ್ನು ಮಾರಾಟ ಮಾಡಿರುವುದಿಲ್ಲವೆಂದು ಹಾಗೂ ಖಾತೆ ನಗರಸಭೆಯಲ್ಲಿ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗಾಗಿ ಈ ಮೇಲ್ಕಂಡಂತೆ ಅರ್ಜಿದಾರರು ಕೋರಿರುವ ವಾಣಿಜ್ಯ ವಿನ್ಯಾಸವನ್ನು ಪ್ರಾಧಿಕಾರದಿಂದ ವಸತಿ ಉದ್ದೇಶಕ್ಕೆ ವಿನ್ಯಾಸವನ್ನು ಮಾರ್ಪಾಡಿಸಲು ವಿಷಯವನ್ನು ಚರ್ಚಿಸಿ ಸೂಕ್ತ ತೀರ್ಮಾನಕ್ಕಾಗಿ ಪ್ರಾಧಿಕಾರದ ಸಭೆಗೆ ಮುಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಅರ್ಜಿದಾರರ ಮನವಿಯಂತೆ ಪರಿಶೀಲಿಸಲಾಗಿದ್ದು ಆ ಪ್ರಕಾರ ಸದರಿ ಅನುಮೋದಿತ ವಾಣಿಜ್ಯ ವಿನ್ಯಾಸವನ್ನು ವಸತಿ ಉದ್ದೇಶಕ್ಕೆ ಪರಿಷ್ಕರಿಸಿ ವಲಯ ನಿಯಮಾವಳಿ ಪ್ರಕಾರ ರಸ್ತೆ ಪರಿಚಲನೆ ಅಳವಡಿಸಿ ಮಾರ್ಪಡಿಸಬಹುದಾಗಿದೆ. ಆದರೆ ಅನುಮೋದಿತ ವಾಣಿಜ್ಯ ವಿನ್ಯಾಸದಲ್ಲಿ ನಿವೇಶನಗಳನ್ನು ಮಾರಾಟ ಮಾಡಿಲ್ಲವೆಂಬ ಬಗ್ಗೆ ಉಪನೊಂದಣಾಧಿಕಾರಿಗಳಿಂದ ಇ. ಸಿ. ಪಡೆಯಬೇಕಾಗಿರುತ್ತದೆ, ಹಾಗೂ ಖಾತೆ ಮಾಡಿಲ್ಲದ ಬಗ್ಗೆ ನಗರ ಸಭೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ಆನಂತರ ವಸತಿ ವಿನ್ಯಾಸ ಅನುಮೋದನೆ ಸಂಬಂದ ಕ್ರಮಕೈಗೊಳ್ಳಬಹುದಾಗಿದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು, ಶ್ರೀ ಎಂ. ಪ್ರಕಾಶ್ ಕುಮಾರ್, ಶ್ರೀ ಟಿ. ಡಿ. ಸತ್ಯನ್, ಶ್ರೀ ಎಸ್. ಎಲ್. ಬೋಜೇಗೌಡ ಇವರು ಬೀಕನಹಳ್ಳಿ ಗ್ರಾಮದ ಸರ್ವೆ ನಂ. 35 / 2A, 35 / 2B, 35 / 2C ಮತ್ತು 35 / 2E ರಲ್ಲಿನ 06 ಎಕರೆ 03 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಣಿಜ್ಯ ವಿನ್ಯಾಸ ಕರಡು ಅನುಮೋದನೆಯಾಗಿದ್ದ ವಿನ್ಯಾಸ ನಕ್ಷೆಯನ್ನು ವಸತಿ ಉದ್ದೇಶಕ್ಕೆ ಅನುಮೋದನೆ ಕೋರಿದ್ದ ಬಗ್ಗೆ ನಗರ ಯೋಜನಾ ಸದಸ್ಯರ ಅಭಿಪ್ರಾಯದಂತೆ ಹಾಲೀ ಭೂಮಾಲೀಕರುಗಳಿಂದ ಸದರೀ ಭೂ ಪ್ರದೇಶವನ್ನು ಯಾರಿಗೂ ಮಾರಾಟ ಮಾಡಿರುವುದಿಲ್ಲ ಎಂಬ ಬಗ್ಗೆ ನಿರಾಕ್ಷೇಪಣಾ ಪತ್ರ, ಹಾಗೂ ಇ.ಸಿ. ಪಡೆಯಲು ಹಾಗೂ ವಾಣಿಜ್ಯ ವಲಯದಿಂದ ನಿಯಮಾನುಸಾರ ವಸತಿ ವಲಯಕ್ಕೆ ಭೂ ಬದಲಾವಣೆ ಮಾಡಿ ನಂತರ ಈ ಬಗ್ಗೆ ಅಗತ್ಯ ಅನುಮೋದನೆಗೆ ಮಂಡಿಸಲು ತೀರ್ಮಾನಿಸಲಾಯಿತು.

**ವಿಷಯ ನಂ 5.**

ಪ್ರಾಧಿಕಾರದ ಕಛೇರಿಗೆ ಹೊರಗುತ್ತಿಗೆ ಆದಾರದ ಮೇಲೆ ಕಮಾಂಡರ್ ಸೆಕ್ಯೂರಿಟಿ ಸರ್ವಿಸಸ್ ಬಿ. ಎಂ. ಶ್ರೀ ರಸ್ತೆ ಚಿಕ್ಕಮಗಳೂರು ಇವರಿಂದ ಕೆಲವು ಹುದ್ದೆಗಳ ಮೂಲಕ ಪಡೆಯುತ್ತಿರುವ ಸೇವೆಯನ್ನು ನವೀಕರಿಸುವ ಅಥವಾ ಹೊಸದಾಗಿ ಕೊಟೇಶನ್ ಕರೆಯುವ ಮೂಲಕ ಒಂದು ತಾಂತ್ರಿಕ ಪರಿಣಿತಿ ಹಾಗೂ ಒಬ್ಬರು ಪಧವೀಧರ ಸಹಾಯಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ.

**ಟಿಪ್ಪಣಿ:**

ಪ್ರಾಧಿಕಾರದ ಕಛೇರಿಯಲ್ಲಿ ಮಂಜೂರಾಗಿರುವ ಎಲ್ಲಾ ಹುದ್ದೆಗಳು ಭರ್ತಿಯಾಗದೆ ಇರುವ ಕಾರಣ ಪ್ರಾಧಿಕಾರದ ಕೆಲಸ ಕಾರ್ಯಗಳು ಹೆಚ್ಚಾಗಿದ್ದ ಕಾರಣ ಕಮಾಂಡರ್ ಸೆಕ್ಯೂರಿಟಿ ಸರ್ವಿಸಸ್ ಸಂಸ್ಥೆಯ ಮೂಲಕ ಕಳೆದ ಮೂರು ವರ್ಷಗಳ ಹಿಂದೆ ಕೆಲವು ಹುದ್ದೆಗಳನ್ನು ಕೊಟೇಶನ್ ಮೂಲಕ ಹೊರಗುತ್ತಿಗೆ ಆದಾರದಲ್ಲಿ ನೇಮಕ ಮಾಡಿಕೊಳ್ಳಲಾಗಿತ್ತು, ನೇಮಕಮಾಡಿಕೊಂಡವರನ್ನು ಮುಂದುವರಿಸುವ ಬಗ್ಗೆ 2009 - 10 ನೇ ಸಾಲಿನ ಲೆಕ್ಕ ತಪಾಸಣೆಯಲ್ಲಿ ಆಕ್ಷೇಪಣೆ ಮಾಡಿ ಕನಿಷ್ಠ ಸಭೆಯಲ್ಲಿ ಕೂಡಲೇ ಮುಂದುವರಿಸುವ ಬಗ್ಗೆ ಸಭೆ ನಿರ್ಣಯ ಪಡೆಯುವಂತೆ ಸೂಚನೆ ನೀಡಲಾಗಿತ್ತು ಆದುದರಿಂದ ಪ್ರಾಧಿಕಾರದ ಈಗಾಗಲೇ ಹಿರೇಮಗಳೂರು ವಸತಿ ಬಡಾವಣೆಯಲ್ಲಿ 17 ಎಕರೆ 37½ ಗುಂಟೆ ಪ್ರದೇಶದಲ್ಲಿ ವಸತಿ ಬಡಾವಣೆಯ ಅಭಿವೃದ್ಧಿಪಡಿಸುವ ಕಾಮಗಾರಿಗಳು ಪ್ರಗತಿಯಲ್ಲಿರುವುದರಿಂದ ಹಾಗೂ ತೇಗೂರು ಗ್ರಾಮ ಮತ್ತು ಉಪ್ಪಳ್ಳಿ ಇಂದಾವರ ಗ್ರಾಮಗಳಿಗೆ ಸಂಬಂದಿಸಿದ ವಿವಿಧ ಸರ್ವೆ ನಂಬರುಗಳಲ್ಲಿ ಒಟ್ಟು 110 ಎಕರೆ ಹಾಗೂ 200 ಎಕರೆ ಒಟ್ಟಾರೆ 310 ಎಕರೆ ಪ್ರದೇಶಗಳಲ್ಲಿ ವಸತಿ ಬಡಾವಣೆ ನಿರ್ಮಿಸಲು ಭೂಸ್ವಾಧೀನ ಪ್ರಕ್ರಿಯೆ ಕಾರ್ಯ ತೀವ್ರ ಪ್ರಗತಿಯಲ್ಲಿರುವುದರಿಂದ ಕೆಲಸ ಕಾರ್ಯಗಳು ಅಧಿಕವಾಗಿರುವುದರಿಂದ ಇನ್ನೂ ಒಬ್ಬರು ತಾಂತ್ರಿಕ ಪದವಿ / ಡಿಪ್ಲಮೋ ಪದವೀದರ ಹಾಗೂ ಒಬ್ಬರು ಪದವೀದರ ಸಹಾಯಕರನ್ನು ಹೊರ ಗುತ್ತಿಗೆ ಆದಾರದ ಮೇಲೆ ನೇಮಕಮಾಡಿಕೊಳ್ಳುವ ಬಗ್ಗೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು ಪ್ರಾಧಿಕಾರದ ಕಛೇರಿಗೆ ಹೊರಗುತ್ತಿಗೆ ಆದಾರದ ಮೇಲೆ ಕಮಾಂಡರ್ ಸೆಕ್ಯೂರಿಟಿ ಸರ್ವಿಸಸ್ (ರಿ) ಚಿಕ್ಕಮಗಳೂರು ಇವರಿಂದ ಈಗಾಗಲೇ ಸೇವೆ ಪಡೆಯುತ್ತಿರುವುದನ್ನು ಮುಂದುವರಿಸದೆ ಕೊಟೇಶನ್ ಕರೆದು ದರ ಅನುಮೋದನೆ ನೀಡಿ ಅಗತ್ಯ ನೌಕರರ ಸೇವೆಯನ್ನು ಪಡೆಯುವಂತೆ ಸಭೆಯು ಅನುಮೋದನೆ ನೀಡಿತು.

**ವಿಷಯ ನಂ 6.**

ಚಿಕ್ಕಮಗಳೂರು ತಾಲ್ಲೂಕು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 126 / P ರಲ್ಲಿ ಅನುಮೋದಿತ ವಿನ್ಯಾಸದ ಮೇಲೆ ರಸ್ತೆ ಪ್ರಸ್ತಾಪಿಸಿರುವ ಬಗ್ಗೆ.

**ಟಿಪ್ಪಣಿ:**

ಚಿಕ್ಕಮಗಳೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ 1996 ರಲ್ಲಿ ಮಹಾಯೋಜನೆಯು ಅನುಮೋದಿಸಲಾಗಿದೆ, ಅನುಮೋದಿತ ಮಹಾಯೋಜನೆಯ ಭೂ ಉಪಯೋಗ ಹಾಗೂ ರಸ್ತೆ ಪರಿಚಲನೆಯನ್ನು ಅನುಸರಿಸಿಕೊಂಡು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 126 / P ರಲ್ಲಿನ 30 x 145 ಪ್ರದೇಶ ಹಾಗೂ 101 x 145 ಪ್ರದೇಶಕ್ಕೆ ಪ್ರಾಧಿಕಾರದಿಂದ ಕ್ರಮವಾಗಿ ದಿನಾಂಕ: 15-06-1999 ಹಾಗೂ ದಿನಾಂಕ: 29-01-2001 ಕ್ಕೆ ಎರಡು ಏಕ ನಿವೇಶನ ವಿನ್ಯಾಸಗಳು ಅನುಮೋದನೆ ಹೊಂದಿರುತ್ತವೆ. ಎರಡೂ ನಿವೇಶನಗಳನ್ನು ಸಹ ಒಟ್ಟಾಗಿ ನಗರಸಭೆಯಿಂದ ಒಟ್ಟುಗೂಡಿಸಿದ ಖಾತೆಯನ್ನು ತೆರೆಯಲಾಗಿರುತ್ತದೆ. ವಿನ್ಯಾಸದಲ್ಲಿ ಕಟ್ಟಡ ನಿರ್ಮಿಸಲು ನಗರ ಸಭೆಯ ಕಟ್ಟಡ ಪರವಾನಗಿ ಸಂಖ್ಯೆ.ಸಿಎಂಸಿ : ಸಿಕೆಎಂ : ಕ.ಪ.ಸಂ. 39 : 2009 - 2010, ದಿನಾಂಕ: 25-01-2010 ರಂತೆ ಪರವಾನಿಗೆ ಸಹ ನೀಡಲಾಗಿದೆ, ಸ್ಥಳದಲ್ಲಿ ಕಟ್ಟಡದ ನಿರ್ಮಾಣ ಕಾರ್ಯ ನಡೆದಿರುತ್ತದೆ. ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

1996 ರಲ್ಲಿ ಅನುಮೋದನೆ ಹೊಂದಿರುವ ಮಹಾಯೋಜನೆಯಂತೆ ಯಾವುದೇ ರಸ್ತೆ ಪ್ರಸ್ತಾವನೆ ಇರದ ಸದರಿ ಸರ್ವೆ ನಂ. 126 / P ರಲ್ಲಿ ದಕ್ಷಿಣೋತ್ತರವಾಗಿ ನಿವೇಶನದ ಅಡ್ಡವಾಗಿ 9.00 ಮೀಟರ್ ಅಗಲದ ರಸ್ತೆಯನ್ನು ಮಹಾಯೋಜನೆ ಪರಿಷ್ಕೃತ– 1 2021 ರಲ್ಲಿ ಪ್ರಸ್ತಾಪಿಸಲಾಗಿದೆ, ಪ್ರಾಧಿಕಾರದಿಂದ ಅನುಮೋದಿತ ವಿನ್ಯಾಸದಲ್ಲಿ ನಿಯಮಾನುಸಾರ ಕಟ್ಟಡ ಪರವಾನಿಗೆ ಪಡೆದಿರುವ ಹಾಗೂ ಸ್ಥಳದಲ್ಲಿ ಕಟ್ಟಡದ ಕೆಲಸ ಪ್ರಾರಂಭಿಸಿರುವ ಈ ಸ್ಥಳದಲ್ಲಿ ಮಹಾಯೋಜನೆ ಪರಿಷ್ಕೃತ– 1 2021 ರಲ್ಲಿ ಪ್ರಸ್ತಾಪಿಸಲಾದಂತೆ 9.00 ಮೀಟರ್ ಅಗಲದ ರಸ್ತೆ ಅಳವಡಿಕೆ ಕಷ್ಟವಾಗುತ್ತದೆ ಮಹಾಯೋಜನೆ ಪರಿಷ್ಕೃತ– 1 2021 ನ್ನು ಸರ್ಕಾರದ ಅನುಮೋದನೆಗಾಗಿ ಮಾನ್ಯ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಬೆಂಗಳೂರು ರವರ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗಿದೆ, ಸರ್ವೆ ನಂ. 126 / P ರಲ್ಲಿ ಸದರಿ 9.00 ಮೀಟರ್ ರಸ್ತೆ ಪ್ರಸ್ತಾವನೆ ಇರದಿದ್ದರೂ ಸಹ ಉಳಿದಂತೆ ಯಾವುದೇ ರಸ್ತೆ ಪರಿಚಲನೆಯು ಅಪೂರ್ಣವಾಗುವುದಿಲ್ಲ, ಈ ಹಿನ್ನೆಲೆಯಲ್ಲಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 126 / P ರಲ್ಲಿನ ಅನುಮೋದಿತ ವಿನ್ಯಾಸದ ಪ್ರದೇಶದಲ್ಲಿ ಮಹಾಯೋಜನೆ ಪರಿಷ್ಕೃತ– 1 2021 ರಂತೆ ಉತ್ತರ ದಕ್ಷಿಣವಾಗಿ ಪ್ರಸ್ತಾಪಿಸಿರುವ 9.00 ಮೀ ರಸ್ತೆ ಪ್ರಸ್ತಾವನೆಯನ್ನು ರದ್ದುಗೊಳಿಸುವ ಷರತ್ತುಗಳಿಗೊಳಪಟ್ಟು ಮಹಾಯೋಜನೆ ಪರಿಷ್ಕೃತ– 1 2021 ಕ್ಕೆ ಅಂತಿಮ ಅನುಮೋದನೆ ನೀಡುವ ಬಗ್ಗೆ ಸರ್ಕಾರವನ್ನು ಕೋರಬಹುದಾಗಿದೆ ಈ ಬಗ್ಗೆ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಉಪ್ಪಳ್ಳಿ ಗ್ರಾಮದ ಸರ್ವೆ ನಂ. 126 / P ರಲ್ಲಿ ಅನುಮೋದಿತ ವಿನ್ಯಾಸದ ಮೇಲೆ 1996 ರ ಸಿ. ಡಿ. ಪಿ. ನಕ್ಷೆಯಲ್ಲಿ ರಸ್ತೆ ಪ್ರಸ್ತಾವನೆ ಇರುವುದಿಲ್ಲ ಆದರೆ ಪ್ರಾಧಿಕಾರದಿಂದ ಈಗ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಿರುವ ಸಿ. ಡಿ. ಪಿ. (ಮಹಾಯೋಜನಾ ನಕ್ಷೆ) ಯಲ್ಲಿ ಪ್ರಸ್ತಾಪಿತ ಜಾಗದಲ್ಲಿ ರಸ್ತೆ ಹಾದು ಹೋಗಿರುವಂತೆ ಪ್ರಸ್ತಾವನೆ ಇರುತ್ತದೆ ಎಂದು ಆಯುಕ್ತರು ಸಭೆಗೆ ತಿಳಿಸಿದರು.

ಹಾಗೆಯೇ ನಗರ ಯೋಜನಾ ಸದಸ್ಯರು 1996 ರಲ್ಲಿ ಅನುಮೋದನೆ ಹೊಂದಿರುವ ಮಹಾಯೋಜನೆಯಂತೆ ಯಾವುದೇ ರಸ್ತೆ ಪ್ರಸ್ತಾವನೆ ಇರದ ಸದರಿ ಸರ್ವೆ ನಂ. 126 / P ರಲ್ಲಿ ದಕ್ಷಿಣೋತ್ತರವಾಗಿ ನಿವೇಶನದ ಅಡ್ಡವಾಗಿ 9.00 ಮೀಟರ್ ಅಗಲದ ರಸ್ತೆಯನ್ನು ಮಹಾಯೋಜನೆ ಪರಿಷ್ಕೃತ– 1 2021 ರಲ್ಲಿ ಪ್ರಸ್ತಾಪಿಸಲಾಗಿದೆ, ಪ್ರಾಧಿಕಾರದಿಂದ ಅನುಮೋದಿತ ವಿನ್ಯಾಸದಲ್ಲಿ ನಿಯಮಾನುಸಾರ ಕಟ್ಟಡ ಪರವಾನಿಗೆ ಪಡೆದಿರುವ ಹಾಗೂ ಸ್ಥಳದಲ್ಲಿ ಕಟ್ಟಡದ ಕೆಲಸ ಪ್ರಾರಂಭಿಸಿರುವ ಈ ಸ್ಥಳದಲ್ಲಿ ಮಹಾಯೋಜನೆ ಪರಿಷ್ಕೃತ– 1 2021 ರಲ್ಲಿ ಪ್ರಸ್ತಾಪಿಸಲಾದಂತೆ 9.00 ಮೀಟರ್ ಅಗಲದ ರಸ್ತೆ ಅಳವಡಿಕೆ ಕಷ್ಟವಾಗುತ್ತದೆ ಮಹಾಯೋಜನೆ ಪರಿಷ್ಕೃತ– 1 2021 ನ್ನು ಸರ್ಕಾರದ ಅನುಮೋದನೆಗಾಗಿ ಮಾನ್ಯ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಬೆಂಗಳೂರು ರವರ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗಿದೆ, ಸರ್ವೆ ನಂ. 126 / P ರಲ್ಲಿ ಸದರಿ 9.00 ಮೀಟರ್ ರಸ್ತೆ ಪ್ರಸ್ತಾವನೆ ಇರದಿದ್ದರೂ ಸಹ ಉಳಿದಂತೆ ಯಾವುದೇ ರಸ್ತೆ ಪರಿಚಲನೆಯು ಅಪೂರ್ಣವಾಗುವುದಿಲ್ಲ, ಈ ಹಿನ್ನೆಲೆಯಲ್ಲಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 126 / P ರಲ್ಲಿನ ಅನುಮೋದಿತ ವಿನ್ಯಾಸದ ಪ್ರದೇಶದಲ್ಲಿ ಮಹಾಯೋಜನೆ ಪರಿಷ್ಕೃತ– 1 2021 ರಂತೆ ಉತ್ತರ ದಕ್ಷಿಣವಾಗಿ ಪ್ರಸ್ತಾಪಿಸಿರುವ 9.00 ಮೀ ರಸ್ತೆ ಪ್ರಸ್ತಾವನೆಯನ್ನು ರದ್ದುಗೊಳಿಸುವ ಷರತ್ತುಗಳಿಗೊಳಪಟ್ಟು ಮಹಾಯೋಜನೆ ಪರಿಷ್ಕೃತ– 1 2021 ಕ್ಕೆ ಅಂತಿಮ ಅನುಮೋದನೆ ನೀಡುವ ಬಗ್ಗೆ ಸರ್ಕಾರವನ್ನು ಕೋರಬಹುದಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು ಅದರಂತೆ ಪ್ರಸ್ತಾಪಿತ ನಿವೇಶನದ ಮೇಲೆ ರಸ್ತೆ ಹಾದು ಹೋಗಿರುವ ಪ್ರಸ್ತಾವನೆಯನ್ನು ಕೈಬಿಡುವ ಬಗ್ಗೆ ಕೋರಿ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಬೆಂಗಳೂರು ಇವರ ಮುಖಾಂತರ ಸರ್ಕಾರಕ್ಕೆ ಪ್ರಸ್ಥಾವನೆ ಸಲ್ಲಿಸಬಹುದಾಗಿದೆ ಎಂದು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ವಿಷಯ ನಂ 7.**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 17 / 5 ರಲ್ಲಿನ 00 ಎಕರೆ 39 ಗುಂಟೆ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿ ಶ್ರೀ ಎಹ್ತೆ ಶಾಮ್ ಹುಸೇನ್ ರವರು ಸಲ್ಲಿಸಿರುವ ಮನವಿಯ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 17 / 5 ರಲ್ಲಿನ 00 ಎಕರೆ 39 ಗುಂಟೆ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್‌ಎನ್ : ಸಿಆರ್ : 181 : 2009 - 10, ದಿನಾಂಕ: 23-02-2010 ರಂತೆ ವಸತಿಗಾಗಿ ಭೂ ಪರಿವರ್ತನೆ ಹೊಂದಿದೆ. ಸದರಿ ಪ್ರದೇಶದ ದಕ್ಷಿಣಕ್ಕೆ ಹಾಲಿ 9.00 ಮೀ ಅಗಲದ ರಸ್ತೆ ಇರುತ್ತದೆ, ಅರ್ಜಿದಾರರು ಬಹು ನಿವೇಶನ ವಿನ್ಯಾಸ ಅನುಮೋದನೆ ಕೋರಿದ್ದು ಒಟ್ಟು ವಿಸ್ತೀರ್ಣವು 4000 ಚದರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯದ ಪ್ರದೇಶಗಳಿಗೆ ವಿನಾಯಿತಿ ನೀಡಿ ವಿನ್ಯಾಸ ಅನುಮೋದನೆ ನೀಡಲು ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ಪ್ರಸ್ತಾಪಿಸಿರುತ್ತಾರೆ. ಸರ್ಕಾರದ ಅಧಿಸೂಚನೆಯಂತೆ ಈ ಬಗ್ಗೆ ಅವಕಾಶವಿದೆ ಶೇಕಡ 55 ಕಿಂತ ಹೆಚ್ಚಾಗಿ ವಸತಿಗೆ ನೀಡುವ ವಿಸ್ತೀರ್ಣಕ್ಕೆ ಮಾರುಕಟ್ಟೆ ಬೆಲೆಯನ್ನು ಪಾವತಿಸಿಕೊಳ್ಳಬೇಕಾಗಿದೆ, ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದಾಗಿದೆ, ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಉಪ್ಪಳ್ಳಿ ಗ್ರಾಮದ ಸರ್ವೆ ನಂ. 17 / 5 ರಲ್ಲಿನ 00 ಎಕರೆ 39 ಗುಂಟೆ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆಗಾಗಿ ಕೋರಿರುವ ಪ್ರದೇಶದ ಪಹಣಿ, ಇ. ಸಿ. ಇತ್ಯಾದಿ ದೃಡೀಕರಣ ಪಡೆದು ಪರಿಶೀಲಿಸಿ ಒಂದು ಎಕರೆಗಿಂತ ಹೆಚ್ಚಿಗೆ ಇರುವ ಭೂಮಿಯನ್ನು ತುಂಡು ತುಂಡು ಮಾಡಿ ಪಾರ್ಕ್ ವಿನಾಯಿತಿ ಪಡೆಯುವ ಉದ್ದೇಶದಿಂದ ದುರುದ್ದೇಶಪೂರ್ವಕವಾಗಿರುತ್ತದೆ, ಆದ್ದರಿಂದ ಸದರಿ ಪ್ರದೇಶಕ್ಕೆ ಅರ್ಜಿದಾರರಿಂದ ಎಲ್ಲಾ ಮಾಹಿತಿ ಪಡೆದು ಪರಿಶೀಲಿಸಿ ಭೂಮಿಯನ್ನು ಸಬ್‌ಡಿವಿಜನ್ ಮಾಡದಿರುವ ಬಗ್ಗೆ ಖಾತ್ರಿ ಮಾಡಿಕೊಂಡು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿರುತ್ತದೆ ಆದ್ದರಿಂದ ವಿವರಗಳನ್ನು ಪಡೆದು ಮುಂದಿನ ಸಭೆಗೆ ಮಂಡಿಸುವಂತೆ ಸಭೆ ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ 8.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 145 / 6 ರಲ್ಲಿನ 00 ಎಕರೆ 21 ಗುಂಟೆ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ನೀಡಲು ಕೋರಿ ಶ್ರೀಮತಿ ಜಿ. ಎಸ್. ಮಂಜುಳಾ ಕೊಂ ಶ್ರೀ ಎ. ಹೆಚ್. ರಾಜೇಗೌಡ ರವರು ಕೋರಿರುವ ಬಗ್ಗೆ.

**ಟಿಪ್ಪಣಿ:**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 145 / 6 ರಲ್ಲಿನ 00 ಎಕರೆ 21 ಗುಂಟೆ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್ಎನ್ : ಸಿಆರ್ : 85 : 2008 - 09, ದಿನಾಂಕ: 11-05-2010 ರಂತೆ 00 ಎಕರೆ 21 ಗುಂಟೆ ಪ್ರದೇಶವು ವಸತಿಗೆ ಭೂ ಪರಿವರ್ತನೆ ಹೊಂದಿದೆ, ಸದರಿ ಪ್ರದೇಶದ ದಕ್ಷಿಣಕ್ಕೆ ಹಾಲಿ 9.00 ಮೀ ಅಗಲದ ರಸ್ತೆ ಇರುತ್ತದೆ, ಅರ್ಜಿದಾರರು ಬಹುನಿವೇಶನ ವಿನ್ಯಾಸ ಅನುಮೋದನೆ ಕೋರಿದ್ದು ಒಟ್ಟು ವಿಸ್ತೀರ್ಣವು 4000 ಚದರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ಸಿ. ಎ. ಪ್ರದೇಶಗಳ ವಿನಾಯಿತಿ ನೀಡಿ ವಿನ್ಯಾಸ ಅನುಮೋದನೆ ನೀಡಲು ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ಪ್ರಸ್ತಾಪಿಸಿರುತ್ತಾರೆ, ಸರ್ಕಾರದ ಅಧಿಸೂಚನೆಯಂತೆ ಈ ಬಗ್ಗೆ ಅವಕಾಶವಿದೆ, ಶೇಕಡ 55 ಕ್ಕಿಂತ ಹೆಚ್ಚಿಗೆ ವಸತಿಗೆ ನೀಡುವ ವಿನ್ಯಾಸಕ್ಕೆ ಮಾರುಕಟ್ಟೆ ಬೆಲೆಯನ್ನು ಪಾವ್ತಿಸಿಕೊಳ್ಳಬೇಕಾಗಿದೆ ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದಾಗಿದೆ, ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 145 / 6 ರಲ್ಲಿನ 00 ಎಕರೆ 21 ಗುಂಟೆ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆಯನ್ನು ಈಗಿನ ನಗರ ಯೋಜನಾ ಸದಸ್ಯರಿಂದ ಸ್ಥಳ ಪರಿಶೀಲನೆ ನಡೆಸಿ ಅನುಮೋದನೆ ನೀಡುವಂತೆ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ 9.**

ಕಾಲೇಜು ಅಭಿವೃದ್ಧಿ ಸಮಿತಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಬೇಲೂರು ರಸ್ತೆ, ಚಿಕ್ಕಮಗಳೂರು ಇಲ್ಲಿಗೆ ಮೂತ್ರಾಲಯ ಮತ್ತು ಶೌಚಾಲಯ ನಿರ್ಮಿಸಿಕೊಡಲು ಅರ್ಜಿ ಸಲ್ಲಿಸಿರುವ ಬಗ್ಗೆ.

**ಟಿಪ್ಪಣಿ:**

ಸರ್ಕಾರಿ ಪದವಿ ಪೂರ್ವ ಕಾಲೇಜು ಬೇಲೂರು ರಸ್ತೆ, ಚಿಕ್ಕಮಗಳೂರು ಇಲ್ಲಿ ಮೂತ್ರಾಲಯ ಮತ್ತು ಶೌಚಾಲಯ ನಿರ್ಮಿಸಿಕೊಡಬೇಕೆಂದು ಕಾಲೇಜು ಅಭಿವೃದ್ಧಿ ಸಮಿತಿ, ಇವರು ದಿನಾಂಕ: 03-06-2010 ರಂದು ಅರ್ಜಿ ಸಲ್ಲಿಸಿ ಸದರಿ ಕಾಲೇಜಿನಲ್ಲಿ ಸುಮಾರು 1350 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುತ್ತಾರೆ, ಈಗ ಹಾಲಿ ಇರುವ ಮೂತ್ರಾಲಯ ಮತ್ತು ಶೌಚಾಲಯಗಳು ಸಾಕಾಗುವುದಿಲ್ಲ ಇದರಿಂದ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿರುತ್ತದೆ, ಆದ್ದರಿಂದ ದಯಮಾಡಿ ಮೂತ್ರಾಲಯ ಮತ್ತು ಶೌಚಾಲಯ ಕೊಠಡಿಗಳನ್ನು ನಿರ್ಮಿಸಿಕೊಡಬೇಕೆಂದು ಕೋರಿರುತ್ತಾರೆ, ನಿರ್ಣಯದ ನಂತರ ಸರ್ಕಾರದ ಅನುಮೋದನೆ ಪಡೆದು ಅನುಷ್ಠಾನಗೊಳಿಸಬೇಕಿದೆ. ಅದರಂತೆ ಕಾಲೇಜು ಆವರಣದಲ್ಲಿ ಶೌಚಾಲಯ ಮತ್ತು ಮೂರ್ತಾಲಯ ನಿರ್ಮಾಣ ಮಾಡಿಕೊಡುವ ಬಗ್ಗೆ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಪ್ರಾಧಿಕಾರದಿಂದ ಸದ್ಯಕ್ಕೆ ರೂ. 2.00 ಲಕ್ಷಗಳ ವೆಚ್ಚದಲ್ಲಿ ಶೌಚಾಲಯ ನಿರ್ಮಿಸಬಹುದೆಂದು, ಹೆಚ್ಚಿನ ನೆರವು ಬೇಕಾದಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಬೇಲೂರು ರಸ್ತೆ, ಚಿಕ್ಕಮಗಳೂರು ಇವರಿಂದ ಮಾಹಿತಿಯನ್ನು ಪಡೆದು ಮುಂದಿನ ದಿನಗಳಲ್ಲಿ ಅನುಮೋದನೆ ಪಡೆಯಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ 10.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 316 / 2 ರಲ್ಲಿನ 00 ಎಕರೆ 09 ಗುಂಟೆ ಪ್ರದೇಶಕ್ಕೆ ಕೈಗಾರಿಕೆ ಉದ್ದೇಶದಿಂದ ವಾಣಿಜ್ಯ / ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಕೋರಿರುವ ಕುರಿತು.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 316 / 2 ರಲ್ಲಿನ 00 ಎಕರೆ 09 ಗುಂಟೆ ಪ್ರದೇಶವು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾ ಯೋಜನೆಯಲ್ಲಿ ಕೈಗಾರಿಕೆ ಉದ್ದೇಶಕ್ಕಾಗಿ ಮೀಸಲಿಡಲಾಗಿದೆ, ಅರ್ಜಿದಾರರು ವಸತಿಗೆ ಭೂ ಪರಿವರ್ತನೆ ಕೋರಿದ್ದು ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 14 A (iii) ರಂತೆ ಕೈಗಾರಿಕಾ ವಲಯದಿಂದ ವಾಣಿಜ್ಯ / ವಸತಿಗೆ ಸಂಬಂಧಿಸಿದ ಶುಲ್ಕ ಪಾವತಿಸಿಕೊಂಡು ಭೂ ಪರಿವರ್ತನೆಗೆ ಅನುಮೋದನೆ ನೀಡಲು ಪ್ರಾಧಿಕಾರಕ್ಕೆ ಅವಕಾಶವಿರುತ್ತದೆ, ಪ್ರಾಧಿಕಾರದಿಂದ ಘಟನೋತ್ತರ ಮಂಜೂರಾತಿ ನಿರೀಕ್ಷಿಸಿ ದಿನಾಂಕ: 30-04-2010 ರಂದು ಸದರಿ ಪ್ರಸ್ತಾವನೆಗೆ ನಿರಾಕ್ಷೇಪಣಾ ಪತ್ರ ನೀಡಿರುತ್ತದೆ, ಇದನ್ನು ದೃಡೀಕರಿಸಲು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 316 / 2 ರಲ್ಲಿನ 00 ಎಕರೆ 09 ಗುಂಟೆ ಪ್ರದೇಶವು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾ ಯೋಜನೆಯಲ್ಲಿ ಕೈಗಾರಿಕೆ ಉದ್ದೇಶಕ್ಕಾಗಿ ಮೀಸಲಿಡಲಾಗಿದೆ, ಅರ್ಜಿದಾರರು ವಸತಿಗೆ ಭೂ ಪರಿವರ್ತನೆ ಕೋರಿದ್ದು ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 14 A (iii) ರಂತೆ ಕೈಗಾರಿಕಾ ವಲಯದಿಂದ ವಾಣಿಜ್ಯ / ವಸತಿಗೆ ಸಂಬಂಧಿಸಿದ ಶುಲ್ಕ ಪಾವತಿಸಿಕೊಂಡು ಭೂ ಪರಿವರ್ತನೆಗೆ ಅನುಮೋದನೆ ನೀಡಲು ಪ್ರಾಧಿಕಾರಕ್ಕೆ ಅವಕಾಶವಿರುತ್ತದೆ, ಪ್ರಾಧಿಕಾರದಿಂದ ಘಟನೋತ್ತರ ಮಂಜೂರಾತಿ ನಿರೀಕ್ಷಿಸಿ ದಿನಾಂಕ: 30-04-2010 ರಂದು ಸದರಿ ಪ್ರಸ್ತಾವನೆಗೆ ನಿರಾಕ್ಷೇಪಣಾ ಪತ್ರ ನೀಡಿರುವುದರಿಂದ ಹಿರೇಮಗಳೂರು ಗ್ರಾಮದ ಸರ್ವೆ ನಂ. 316 / 2 ರಲ್ಲಿನ 00 ಎಕರೆ 09 ಗುಂಟೆ ಪ್ರದೇಶವನ್ನು ಅನುಮೋದಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 11.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 316 / 3 ರಲ್ಲಿನ 00 ಎಕರೆ 11 ಗುಂಟೆ ಪ್ರದೇಶಕ್ಕೆ ಕೈಗಾರಿಕೆ ಉದ್ದೇಶದಿಂದ ವಾಣಿಜ್ಯ / ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಕೋರಿರುವ ಕುರಿತು.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 316 / 3 ರಲ್ಲಿನ 00 ಎಕರೆ 11 ಗುಂಟೆ ಪ್ರದೇಶವು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾ ಯೋಜನೆಯಲ್ಲಿ ಕೈಗಾರಿಕೆ ಉದ್ದೇಶಕ್ಕಾಗಿ ಮೀಸಲಿಡಲಾಗಿದೆ.

ಅರ್ಜಿದಾರರು ವಸತಿಗೆ ಭೂ ಪರಿವರ್ತನೆ ಕೋರಿದ್ದು ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 14 A (iii) ರಂತೆ ಕೈಗಾರಿಕಾ ವಲಯದಿಂದ ವಾಣಿಜ್ಯ / ವಸತಿಗೆ ಸಂಬಂಧಿಸಿದ ಶುಲ್ಕ ಪಾವತಿಸಿಕೊಂಡು ಭೂ ಪರಿವರ್ತನೆಗೆ ಅನುಮೋದನೆ ನೀಡಲು ಪ್ರಾಧಿಕಾರಕ್ಕೆ ಅವಕಾಶವಿರುತ್ತದೆ, ಪ್ರಾಧಿಕಾರದಿಂದ ಘಟನೋತ್ತರ ಮಂಜೂರಾತಿ ನಿರೀಕ್ಷಿಸಿ ದಿನಾಂಕ: 30-04-2010 ರಂದು ಸದರಿ ಪ್ರಸ್ತಾವನೆಗೆ ನಿರಾಕ್ಷೇಪಣಾ ಪತ್ರ ನೀಡಿರುತ್ತದೆ, ಇದನ್ನು ದೃಡೀಕರಿಸಲು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 316 / 3 ರಲ್ಲಿನ 00 ಎಕರೆ 11 ಗುಂಟೆ ಪ್ರದೇಶವು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾ ಯೋಜನೆಯಲ್ಲಿ ಕೈಗಾರಿಕೆ ಉದ್ದೇಶಕ್ಕಾಗಿ ಮೀಸಲಿಡಲಾಗಿದೆ, ಅರ್ಜಿದಾರರು ವಸತಿಗೆ ಭೂ ಪರಿವರ್ತನೆ ಕೋರಿದ್ದು ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 14 A (iii) ರಂತೆ ಕೈಗಾರಿಕಾ ವಲಯದಿಂದ ವಾಣಿಜ್ಯ / ವಸತಿಗೆ ಸಂಬಂಧಿಸಿದ ಶುಲ್ಕ ಪಾವತಿಸಿಕೊಂಡು ಭೂ ಪರಿವರ್ತನೆಗೆ ಅನುಮೋದನೆ ನೀಡಲು ಪ್ರಾಧಿಕಾರಕ್ಕೆ ಅವಕಾಶವಿರುತ್ತದೆ, ಪ್ರಾಧಿಕಾರದಿಂದ ಘಟನೋತ್ತರ ಮಂಜೂರಾತಿ ನಿರೀಕ್ಷಿಸಿ ದಿನಾಂಕ: 30-04-2010 ರಂದು ಸದರಿ ಪ್ರಸ್ತಾವನೆಗೆ ನಿರಾಕ್ಷೇಪಣಾ ಪತ್ರ ನೀಡಿರುವುದರಿಂದ ಹಿರೇಮಗಳೂರು ಗ್ರಾಮದ ಸರ್ವೆ ನಂ. 316 / 3 ರಲ್ಲಿನ 00 ಎಕರೆ 11 ಗುಂಟೆ ಪ್ರದೇಶವನ್ನು ಅನುಮೋದಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 12.**

ಶ್ರೀಮತಿ ಮರಿಯಾ ಪ್ರಮೀಳಾ ಡಿಸೋಜ ಕೊಂ ಜೆರಾಲ್ಡ್ ಲೋಬೋ ರವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 296 / 2 ರಲ್ಲಿನ 02 ಎಕರೆ 32 ಗುಂಟೆ ಮತ್ತು ಸರ್ವೆ ನಂ. 288 ರಲ್ಲಿನ 01 ಎಕರೆ 08 ಗುಂಟೆ ಒಟ್ಟು 04 ಎಕರೆ 00 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಶಾಲಾ ಕಟ್ಟಡ ಬೋರ್ಡಿಂಗ್ ಉದ್ದೇಶಕ್ಕೆ ಏಕ ನಿವೇಶನ ಅನುಮೋದನೆ ಕೋರಿರುವ ಕುರಿತು.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀಮತಿ ಮರಿಯಾ ಪ್ರಮೀಳಾ ಡಿಸೋಜ ಕೊಂ ಜೆರಾಲ್ಡ್ ಲೋಬೋ ರವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 296 / 2 ರಲ್ಲಿನ 02 ಎಕರೆ 32 ಗುಂಟೆ ಮತ್ತು ಸರ್ವೆ ನಂ. 288 ರಲ್ಲಿನ 01 ಎಕರೆ 08 ಗುಂಟೆ ಒಟ್ಟು 04 ಎಕರೆ 00 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಶಾಲಾ ಕಟ್ಟಡ ಬೋರ್ಡಿಂಗ್ ಉದ್ದೇಶಕ್ಕೆ ಏಕ ನಿವೇಶನ ಅನುಮೋದನೆ ಕೋರಿರುವ ಪ್ರದೇಶವು ಪ್ರಾಧಿಕಾರದ ಕಛೇರಿಯಿಂದ ದಿನಾಂಕ: 18-12-2009 ರಲ್ಲಿ ಸದರಿ ಪ್ರದೇಶಕ್ಕೆ ತಾಂತ್ರಿಕ ಅಭಿಪ್ರಾಯ ನೀಡಲಾಗಿರುತ್ತದೆ, ಅದರಂತೆ ದಿನಾಂಕ: 20-01-2010 ರಲ್ಲಿ ತಾತ್ಕಾಲಿಕ ಶಾಲಾ ಹಾಗೂ ಬೋರ್ಡಿಂಗ್ ಉದ್ದೇಶಕ್ಕೆ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ, ಅದರನ್ವಯ ಮಾನ್ಯ ಜಿಲ್ಲಾಧಿಕಾರಿಗಳವರ ಕಛೇರಿಯಿಂದ ಭೂ ಪರಿವರ್ತನೆ ಆದೇಶವಾಗಿರುತ್ತದೆ, ಸದರಿ ಪ್ರದೇಶಕ್ಕೆ ಅರ್ಜಿದಾರರು ಶಾಲಾ ಕಟ್ಟಡ ಮತ್ತು ಬೋರ್ಡಿಂಗ್ ಉಪಯೋಗಕ್ಕೆ ರೂಪ ರೇಖಾ ನಕ್ಷೆಗೆ ಅನುಮೋದನೆ ಕೋರಿರುತ್ತಾರೆ. ಅದರಂತೆ ರೂಪರೇಖಾ ನಕ್ಷೆಗೆ ಅನುಮೋದನೆ ನೀಡಬಹುದಾಗಿದ್ದು, ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಶ್ರೀಮತಿ ಮರಿಯಾ ಪಮೀಳಾ ಡಿಸೋಜ ಕೊಂ ಜೆರಾಲ್ಡ್ ಲೋಬೋ ರವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 296 / 2 ರಲ್ಲಿನ 02 ಎಕರೆ 32 ಗುಂಟೆ ಮತ್ತು ಸರ್ವೆ ನಂ. 288 ರಲ್ಲಿನ 01 ಎಕರೆ 08 ಗುಂಟೆ ಒಟ್ಟು 04 ಎಕರೆ 00 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಶಾಲಾ ಕಟ್ಟಡ ಬೋರ್ಡಿಂಗ್ ಉದ್ದೇಶಕ್ಕೆ ಏಕ ನಿವೇಶನ ಅನುಮೋದನೆ ಕೋರಿರುವ ಪ್ರದೇಶಕ್ಕೆ ಪ್ರಾಧಿಕಾರದ ಕಛೇರಿಯಿಂದ ದಿನಾಂಕ: 18-12-2009 ರಲ್ಲಿ ಸದರಿ ಪ್ರದೇಶಕ್ಕೆ ತಾಂತ್ರಿಕ ಅಭಿಪ್ರಾಯ ನೀಡಲಾಗಿರುತ್ತದೆ, ಅದರಂತೆ ದಿನಾಂಕ: 20-01-2010 ರಲ್ಲಿ ತಾತ್ಕಾಲಿಕ ಶಾಲಾ ಹಾಗೂ ಬೋರ್ಡಿಂಗ್ ಉದ್ದೇಶಕ್ಕೆ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ, ಅದರನ್ವಯ ಮಾನ್ಯ ಜಿಲ್ಲಾಧಿಕಾರಿಗಳವರ ಕಛೇರಿಯಿಂದ ಭೂ ಪರಿವರ್ತನೆ ಆದೇಶವಾಗಿರುತ್ತದೆ.

ಸದರಿ ಪ್ರದೇಶಕ್ಕೆ ಅರ್ಜಿದಾರರು ಶಾಲಾ ಕಟ್ಟಡ ಮತ್ತು ಬೋರ್ಡಿಂಗ್ ಉಪಯೋಗಕ್ಕೆ ರೂಪ ರೇಖಾ ನಕ್ಷೆಗೆ ಅನುಮೋದನೆ ಕೋರಿರುತ್ತಾರೆ. ಅದರಂತೆ ರೂಪರೇಖಾ ನಕ್ಷೆಗೆ ಅನುಮೋದನೆ ನೀಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 13.**

ಬೈಪಾಸ್ ರಸ್ತೆ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯ ಹತ್ತಿರ ನಿರ್ಮಾಣವಾಗುತ್ತಿರುವ ಶ್ರೀ ಬೀರಲಿಂಗೇಶ್ವರ ಸ್ವಾಮಿ ದೇವಾಲಯ ನಿರ್ಮಾಣಕ್ಕೆ ಧನಸಹಾಯ ಮಾಡುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯಲ್ಲಿನ ನಾಗರೀಕ ಸೌಲಭ್ಯದ ನಿವೇಶನದಲ್ಲಿ ಶ್ರೀ ಬೀರಲಿಂಗೇಶ್ವರ ಸ್ವಾಮಿ ದೇವಾಲಯವಿದ್ದು ಅತ್ಯಂತ ಶಿಥಿಲಾವಸ್ಥೆಯಲ್ಲಿದ್ದು ಈ ದೇವಾಲಯದ ಜೀರ್ಣೋದ್ದಾರ ಕಾರ್ಯವನ್ನು ಮಾಡಬೇಕೆಂದು ಉದ್ದೇಶಿಸಲಾಗಿದೆ ಎಂದು ಅಧ್ಯಕ್ಷರು ಮತ್ತು ಸದಸ್ಯರು ಶ್ರೀ ಬೀರಲಿಂಗೇಶ್ವರ ಸ್ವಾಮಿ ದೇವಾಲಯ ಬೈಪಾಸ್ ರಸ್ತೆ, ಚಿಕ್ಕಮಗಳೂರು ರವರು ದಿನಾಂಕ:15-06-2010 ರಂದು ಅರ್ಜಿ ಸಲ್ಲಿಸಿ ದೇವಸ್ಥಾನ ಜೀರ್ಣೋದ್ದಾರಕ್ಕಾಗಿ ಪ್ರಾಧಿಕಾರದಿಂದ ದೇಣಿಗೆಯನ್ನು ನೀಡಬೇಕೆಂದು ಮನವಿ ಸಲ್ಲಿಸಿರುತ್ತಾರೆ, ಆದರೆ ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 09 : ಮೈಅಪ್ರಾ : 2005, ದಿನಾಂಕ: 12-04-2005 ರಲ್ಲಿ ಪ್ರಾಧಿಕಾರಗಳು ಸರ್ಕಾರದ ಪೂರ್ವಾನುಮತಿ ಪಡೆಯದೇ ವಂತಿಕೆ : ಅನುದಾನ ನೀಡಬಾರದೆಂದು ಹಾಗೂ ಇದನ್ನು ಮೀರಿ ಪ್ರಾಧಿಕಾರಗಳು ವಂತಿಕೆ ನೀಡಲು ಮುಂದಾದರೆ ಪ್ರಾಧಿಕಾರವನ್ನೇ ನೇರ ಹೊಣೆಯಾಗಿಸಿ ಅಂತಹ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ಸಹ ಸೂಚಿಸಲಾಗಿದೆ.

ಸರ್ಕಾರವು ಈ ವಿಷಯವನ್ನು ಪುನರ್ ಪರಿಶೀಲಿಸಿ ರಾಷ್ಟ್ರೀಯ ಹಬ್ಬಗಳಿಗಾಗಿ ಮತ್ತು ಕನ್ನಡ ರಾಜ್ಯೋತ್ಸವ ಆಚರಣೆಗಾಗಿ ಗರಿಷ್ಠ ರೂ. 5000=00 (ಐದು ಸಾವಿರ ಮಾತ್ರ) ವಂತಿಕೆಯನ್ನು ಪ್ರಾಧಿಕಾರಗಳು ಇನ್ನು ಮುಂದೆ ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ನೀಡಬಹುದೆಂದು ತಿಳಿಸಿರುತ್ತಾರೆ, ಅದರಂತೆ ವಂತಿಕೆ / ದೇಣಿಗೆ ನೀಡುವ ಬಗ್ಗೆ ಸಭೆಯಲ್ಲಿ ನಿರ್ಣಯ ಮಾಡಿ ಸರ್ಕಾರದ ಅನುಮತಿ ಪಡೆದು ಅನುಷ್ಠಾನ ಮಾಡಬಹುದಾಗಿರುತ್ತದೆ, ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಪ್ರಾಧಿಕಾರದ ಬಡಾವಣೆಯಲ್ಲಿಯೇ ಇರುವ ದೇವಾಲಯ ಆಗಿರುವುದರಿಂದ ದೇವಸ್ಥಾನದ ಟ್ರಸ್ಟ್ ವತಿಯಿಂದ ಅಂದಾಜು ಪಟ್ಟಿ ತರಿಸಿ ಅನುದಾನದ ಮೊತ್ತ ಅಧ್ಯಕ್ಷರೇ ನಿರ್ಧರಿಸಿ ಧನ ಸಹಾಯ ನೀಡುವ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು ಅನುಮೋದನೆ ಪಡೆದು ಮುಂದಿನ ಕ್ರಮ ಕೈಗೊಳ್ಳಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 14.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 328 / 2, 328 / 3, 328 / 6, ಮತ್ತು 328 / 6P ರಲ್ಲಿನ 03 ಎಕರೆ 20½ ಗುಂಟೆ ಪ್ರದೇಶಕ್ಕೆ ಶಾಲಾ ಉಪಯೋಗಕ್ಕೆ ವಿನ್ಯಾಸ ಅನುಮೋದನೆ ನೀಡಲು ಶ್ರೀ ಎಂ. ಆರ್. ಗುರುಮೂರ್ತಿ, ಅಧ್ಯಕ್ಷರು ವಾಸವಿ ಎಜುಕೇಶನ್ ಸೋಸೈಟಿ (ರಿ) ಚಿಕ್ಕಮಗಳೂರು ರವರು ಕೋರಿರುವ ಬಗ್ಗೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 328 / 2, 328 / 3, 328 / 6, ಮತ್ತು 328 / 6P ರಲ್ಲಿನ 03 ಎಕರೆ 20½ ಗುಂಟೆ ಪ್ರದೇಶಕ್ಕೆ ಶಾಲಾ ಉಪಯೋಗಕ್ಕೆ ವಿನ್ಯಾಸ ಅನುಮೋದನೆ ನೀಡಲು ಶ್ರೀ ಎಂ. ಆರ್. ಗುರುಮೂರ್ತಿ, ಅಧ್ಯಕ್ಷರು ವಾಸವಿ ಎಜುಕೇಶನ್ ಸೋಸೈಟಿ (ರಿ) ಚಿಕ್ಕಮಗಳೂರು ರವರು ಕೋರಿರುತ್ತಾರೆ. ಸದರಿ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್ಎನ್ : ಸಿಆರ್ : 82 : 2009 - 10, ದಿನಾಂಕ: 20-05-2010 ರಂತೆ ವಸತಿಗೆ ಭೂ ಪರಿವರ್ತನೆ ಹೊಂದಿದೆ, ಸದರಿ ಪ್ರದೇಶದ ಪೂರ್ವಕ್ಕೆ ಹಾಲಿ 18.00 ಮೀ ಅಗಲದ ಬೈ–ಪಾಸ್ ರಸ್ತೆ ಇರುತ್ತದೆ, ಅರ್ಜಿದಾರರು ರೂಪ ರೇಖಾ ವಿನ್ಯಾಸ ಅನುಮೋದನೆ ಕೋರಿದ್ದು ವಲಯ ನಿಯಮಾನುಸಾರ ಶಾಲಾ ಉಪಯೋಗಕ್ಕೆ ರೂಪ ರೇಖಾ ವಿನ್ಯಾಸ ಅನುಮೋದಿಸಬಹುದಾಗಿದೆ, ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 328 / 2, 328 / 3, 328 / 6, ಮತ್ತು 328 / 6P ರಲ್ಲಿನ 03 ಎಕರೆ 20½ ಗುಂಟೆ ಪ್ರದೇಶಕ್ಕೆ ಶಾಲಾ ಉಪಯೋಗಕ್ಕೆ ವಿನ್ಯಾಸ ಅನುಮೋದನೆ ನೀಡಲು ಶ್ರೀ ಎಂ. ಆರ್. ಗುರುಮೂರ್ತಿ, ಅಧ್ಯಕ್ಷರು ವಾಸವಿ ಎಜುಕೇಶನ್ ಸೋಸೈಟಿ (ರಿ) ಚಿಕ್ಕಮಗಳೂರು ರವರು ಕೋರಿರುತ್ತಾರೆ. ಸದರಿ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್ಎನ್ : ಸಿಆರ್ : 82 : 2009 - 10, ದಿನಾಂಕ: 20-05-2010 ರಂತೆ ವಸತಿಗೆ ಭೂ ಪರಿವರ್ತನೆ ಹೊಂದಿದೆ, ಸದರಿ ಪ್ರದೇಶದ ಪೂರ್ವಕ್ಕೆ ಹಾಲಿ 18.00 ಮೀ ಅಗಲದ ಬೈ-ಪಾಸ್ ರಸ್ತೆ ಇರುತ್ತದೆ, ಅರ್ಜಿದಾರರು ರೂಪ ರೇಖಾ ವಿನ್ಯಾಸ ಅನುಮೋದನೆ ಕೋರಿದ್ದು ವಲಯ ನಿಯಮಾನುಸಾರ ಶಾಲಾ ಉಪಯೋಗಕ್ಕೆ ರೂಪ ರೇಖಾ ವಿನ್ಯಾಸ ಅನುಮೋದಿಸಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 15.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 336 / 1, 2, 3, 4A, 4A3, 10, 11, ರಲ್ಲಿನ ಒಟ್ಟು 05 ಎಕರೆ 00 ಗುಂಟೆ ಪ್ರದೇಶಕ್ಕೆ ವೃದ್ದಾಶ್ರಮ ಉಪಯೋಗಕ್ಕೆ ವಿನ್ಯಾಸ ಅನುಮೋದನೆ ನೀಡಲು ಶ್ರೀ ವಾಸವಿ ಸೇವಾ ಟ್ರಸ್ಟ್ ಹಿರೇಮಗಳೂರು ರವರು ಕೋರಿರುವ ಬಗ್ಗೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 336 / 1, 2, 3, 4A, 4A3, 10, 11, ರಲ್ಲಿನ ಒಟ್ಟು 05 ಎಕರೆ 00 ಗುಂಟೆ ಪ್ರದೇಶಕ್ಕೆ ವೃದ್ದಾಶ್ರಮ ಉಪಯೋಗಕ್ಕೆ ವಿನ್ಯಾಸ ಅನುಮೋದನೆ ನೀಡಲು ಶ್ರೀ ವಾಸವಿ ಸೇವಾ ಟ್ರಸ್ಟ್ ಹಿರೇಮಗಳೂರು ರವರು ವೃದ್ದಾಶ್ರಮ ಉಪಯೋಗಕ್ಕೆ ವಿನ್ಯಾಸ ಅನುಮೋದನೆ ನೀಡಲು ಕೋರಿರುತ್ತಾರೆ. ಸದರಿ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ, ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್ಎನ್ : ಸಿಆರ್ : 83 : 2009 - 10, ದಿನಾಂಕ: 18-05-2010 ರಂತೆ ವೃದ್ದಾಶ್ರಮ ಉಪಯೋಗಕ್ಕೆ ಭೂ ಪರಿವರ್ತನೆ ಹೊಂದಿದೆ, ಸದರಿ ಪ್ರದೇಶಕ್ಕೆ ಬೈಪಾಸ್ ರಸ್ತೆಯಿಂದ 15' ಅಡಿ ಅಗಲದ ರಸ್ತೆಯಿಂದ ಸಂಪರ್ಕ ಇರುತ್ತದೆ, ಅರ್ಜಿದಾರರು ರೂಪ ರೇಖಾ ವಿನ್ಯಾಸ ಅನುಮೋದನೆ ಕೋರಿದ್ದು ವಲಯ ನಿಯಮಾನುಸಾರ ವೃದ್ದಾಶ್ರಮ ಉಪಯೋಗಕ್ಕೆ ರೂಪ ರೇಖಾ ವಿನ್ಯಾಸ ಅನುಮೋದಿಸಬಹುದಾಗಿದೆ, ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ತೀರ್ಮಾನ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 336 / 1, 2, 3, 4A, 4A3, 10, 11, ರಲ್ಲಿನ ಒಟ್ಟು 05 ಎಕರೆ 00 ಗುಂಟೆ ಪ್ರದೇಶಕ್ಕೆ ವೃದ್ದಾಶ್ರಮ ಉಪಯೋಗಕ್ಕೆ ವಿನ್ಯಾಸ ಅನುಮೋದನೆ ನೀಡಲು ಶ್ರೀ ವಾಸವಿ ಸೇವಾ ಟ್ರಸ್ಟ್ ಹಿರೇಮಗಳೂರು ರವರು ವೃದ್ದಾಶ್ರಮ ಉಪಯೋಗಕ್ಕೆ ವಿನ್ಯಾಸ ಅನುಮೋದನೆ ನೀಡಲು ಕೋರಿರುತ್ತಾರೆ. ಸದರಿ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ, ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್ಎನ್ : ಸಿಆರ್ : 83 : 2009 - 10, ದಿನಾಂಕ: 18-05-2010 ರಂತೆ ವೃದ್ದಾಶ್ರಮ ಉಪಯೋಗಕ್ಕೆ ಭೂ ಪರಿವರ್ತನೆ ಹೊಂದಿದೆ, ಸದರಿ ಪ್ರದೇಶಕ್ಕೆ ಬೈಪಾಸ್ ರಸ್ತೆಯಿಂದ 15' ಅಡಿ ಅಗಲದ ರಸ್ತೆಯಿಂದ ಸಂಪರ್ಕ ಇರುತ್ತದೆ, ಅರ್ಜಿದಾರರು ರೂಪ ರೇಖಾ ವಿನ್ಯಾಸ ಅನುಮೋದನೆ ಕೋರಿದ್ದು ವಲಯ ನಿಯಮಾನುಸಾರ ವೃದ್ದಾಶ್ರಮ ಉಪಯೋಗಕ್ಕೆ ರೂಪ ರೇಖಾ ವಿನ್ಯಾಸ ಅನುಮೋದಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 16.**

ಚಿಕ್ಕಮಗಳೂರು ನಗರದಲ್ಲಿ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ ಸಾರ್ವಜನಿಕರಿಂದ ಪಡೆಯುವ ಅರ್ಜಿಗಳನ್ನು ನೇರವಾಗಿ ಪ್ರಾಧಿಕಾರಕ್ಕೆ ಪಡೆದು ನಂತರ ನಗರ ಸಭೆಗೆ ಕಳುಹಿಸಿಕೊಡುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರದಲ್ಲಿ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ ಸಾರ್ವಜನಿಕರಿಗೆ ಸುಗಮವಾಗಿ ಹಾಗೂ ಜರೂರಾಗಿ ಲೈಸನ್ಸ್ ನೀಡಲು ಅನುಕೂಲವಾಗುವಂತೆ ಸಾರ್ವಜನಿಕರಿಂದ ಲೈಸನ್ಸ್‌ಗಾಗಿ ನೀಡುವ ಅರ್ಜಿಗಳನ್ನು ನೇರವಾಗಿ ಪ್ರಾಧಿಕಾರದಲ್ಲಿ ಸ್ವೀಕರಿಸಿ ನಕ್ಷೆಗೆ ಅನುಮೋದನೆ ನೀಡಿ ಅಗತ್ಯ ಶುಲ್ಕಗಳನ್ನು ಪ್ರಾಧಿಕಾರದ ಕಛೇರಿಯಲ್ಲೇ ಭರಿಸಿಕೊಂಡು ನಂತರ ನಗರ ಸಭೆಗೆ ಅರ್ಜಿಯನ್ನು ಕಳುಹಿಸಬಹುದಾಗಿರುತ್ತದೆ, ಈ ವಿಷಯವನ್ನು ಸಭೆಗೆ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಕಟ್ಟಡ ಪರವಾನಗಿಗಾಗಿ ಸಲ್ಲಿಸುವ ಅರ್ಜಿಗಳನ್ನು ನೇರವಾಗಿ ನಗರಸಭೆ ಬದಲು ಪ್ರಾಧಿಕಾರದಲ್ಲಿ ಸ್ವೀಕರಿಸುವುದರಿಂದ ಅತೀ ಜರೂರಾಗಿ ಸಾರ್ವಜನಿಕರಿಗೆ ಕೆಲಸ ಮಾಡಿಕೊಡಬಹುದೆಂದು ಈ ಬಗ್ಗೆ ನಗರ ಸಭೆ ಮತ್ತು ಪ್ರಾಧಿಕಾರದ ಆಯುಕ್ತರುಗಳ ಅಭಿಪ್ರಾಯ ಸಂಗ್ರಹಿಸಲಾಯಿತು, ನಂತರ ಸಭೆಯು ಸರ್ಕಾರದ ಅನುಮೋದನೆ ಪಡೆದು ಜಾರಿಗೊಳಿಸಬಹುದಾಗಿರುತ್ತದೆ ಎಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

## ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ಇತರೆ ವಿಷಯಗಳು

**ವಿಷಯ ನಂ 1.**

500 ಟ್ರೀ ಗಾರ್ಡ್‌ಗಳನ್ನು ಪ್ರಾಧಿಕಾರದ ಬಡಾವಣೆ ಮತ್ತು ನಗರದ ವಿವಿಧ ರಸ್ತೆಗಳಿಗೆ ಅಳವಡಿಸಲು ಪ್ರಸ್ತಾವನೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರದಲ್ಲಿ ಮತ್ತು ಪ್ರಾಧಿಕಾರದ ಬಡಾವಣೆಗಳಲ್ಲಿ ವಿವಿಧ ರಸ್ತೆಗಳಲ್ಲಿ ಬೆಳೆಸುತ್ತಿರುವ ಮರಗಳಿಗೆ ಟ್ರೀ ಗಾರ್ಡ್ ಅಳವಡಿಸಲು ಟ್ರೀ ಗಾರ್ಡ್‌ಗಳಿಗೆ ಸೂಕ್ತ ದರ ಪಟ್ಟಿಗಳನ್ನು ಆಹ್ವಾನಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಒಪ್ಪಿಗೆ ನೀಡಲು ಪ್ರಾಧಿಕಾರದ ಸಭೆಗೆ ವಿಷಯವನ್ನು ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ನಂತರ ಮಾತನಾಡಿದ ಆಯುಕ್ತರು ಮಾನ್ಯ ಶಾಸಕರಿಗೆ ಒಂದು ಉತ್ತಮ ಗುಣಮಟ್ಟದ ಟ್ರೀ ಗಾರ್ಡ್ ಒಂದಕ್ಕೆ ರೂ. 2000.00 ಗಳಾಗಬಹುದು ಪ್ರಾಧಿಕಾರದ ಬಡಾವಣೆಯಲ್ಲಿ ಮತ್ತಿತರೆ ಹೊಸ ರಸ್ತೆಗಳಲ್ಲಿ ಗಿಡಗಳನ್ನು ನೆಟ್ಟು ಬೆಳೆಸುವ ಸಲುವಾಗಿ 500 ಟ್ರೀ ಗಾರ್ಡ್ ಸರಬರಾಜು ಮಾಡಿಕೊಳ್ಳುವ ಬಗ್ಗೆ ನಿರ್ದರಿಸಿದ್ದು ಈ ಬಗ್ಗೆ ಸಭೆ ಮುಂದೆ ಮಂಡಿಸಿದೆ ಎಂದು ಹೇಳಿದರು, ಇದಕ್ಕೆ ಮಾನ್ಯ ಶಾಸಕರು 500 ಟ್ರೀ ಗಾರ್ಡ್‌ಗಳ ಸರಬರಾಜಿಗೆ ರೂ. 10.00 ಲಕ್ಷ ಬೇಕಾಗುತ್ತದೆ ಇದು ತುಂಬಾ ಹೆಚ್ಚಾಗಿರುತ್ತದೆ ಆದ್ದರಿಂದ ಸದ್ಯಕ್ಕೆ 200 ಟ್ರೀ ಗಾರ್ಡ್‌ಗಳನ್ನು ಮದ್ಯಮ ಗುಣಮಟ್ಟದವುಗಳನ್ನು ಕಡಿಮೆ ದರದಲ್ಲಿ ಸರಬರಾಜು ಮಾಡಿಕೊಳ್ಳುವಂತೆ ಸಭೆಗೆ ಸೂಚಿಸಿದರು, ಅದರಂತೆ ಸಭೆಯು ಈ ಬಗ್ಗೆ ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ನಂ 2.**

ಪ್ರಾಧಿಕಾರದ ಕಛೇರಿಯ ಅಧ್ಯಕ್ಷರ ಕೊಠಡಿಗೆ ಫ್ಲೂರ್ ಮ್ಯಾಟ್ ಹಾಕಿಸಿ, ಕಛೇರಿಯ ಹಿಂಭಾಗದಲ್ಲಿ ಉಳಿದಿರುವ ಜಾಗದಲ್ಲಿ ಕೊಠಡಿ ನಿರ್ಮಾಣಕ್ಕಾಗಿ ತಳಪಾಯ ಹಾಕಿ ಕಟ್ಟಡ ವಿಸ್ತರಣೆ ಮಾಡಿ ನಿರ್ಮಾಣ ಮಾಡುವುದು ಮತ್ತು ಎ. ಸಿ. ಶೀಟ್ ಅಳವಡಿಸಿ ಕಟ್ಟಡ ವಿಸ್ತರಿಸುವುದು ಮತ್ತು ಮೆಟ್ಟಿಲುಗಳನ್ನು ವಿಸ್ತರಿಸಿ ಗ್ರಿಲ್ಸ್ ಅಳವಡಿಸುವ ಹಾಗೂ ಇನ್ನಿತರೆ ಕಾಮಗರಿಯನ್ನು ಕೈಗೊಂಡಿರುವ ಕುರಿತು.

**ಟಿಪ್ಪಣಿ :**

ಪ್ರಾಧಿಕಾರದ ಕಛೇರಿಯಲ್ಲಿ ಅಧ್ಯಕ್ಷರ ಕೊಠಡಿಗೆ ಫ್ಲೂರ್ ಮ್ಯಾಟ್ ಹಾಕಿಸುವುದು, ಕಛೇರಿಯ ಹಿಂಭಾಗದಲ್ಲಿ ಉಳಿದಿರುವ ಜಾಗದಲ್ಲಿ ಕೊಠಡಿ ನಿರ್ಮಾಣಕ್ಕಾಗಿ ತಳಪಾಯ ಹಾಕಿ ಕಟ್ಟಡ ವಿಸ್ತರಣೆ ಮಾಡಿ ನಿರ್ಮಾಣ ಮಾಡುವುದು ಮತ್ತು ಜಿ. ಐ. ಪೈಪ್ ಅಳವಡಿಸಿ ಎ. ಸಿ. ಶೀಟ್ ಹಾಕುವುದು ಮತ್ತು ಗ್ರಿಲ್ಸ್ ಅಳವಡಿಸಿ ಮೆಟ್ಟಿಲುಗಳನ್ನು ಅಳವಡಿಸುವ ಕಾಮಗಾರಿಗಳನ್ನು ಮತ್ತು ಇನ್ನಿತರೆ ಅಗತ್ಯ ಕಾಮಗಾರಿಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮತ್ತು ಸಭೆಯ ಘಟನೋತ್ತರ ಮಂಜೂರಾತಿ ನಿರೀಕ್ಷಿಸಿ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ, ಆದರಂತೆ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಕಾಮಗಾರಿಗೆ ತಗಲುವ ವೆಚ್ಚವನ್ನು ಭರಿಸಲು ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಪ್ರಾಧಿಕಾರದ ಕಛೇರಿಯಲ್ಲಿ ಅಧ್ಯಕ್ಷರ ಕೊಠಡಿಗೆ ಫ್ಲೂರ್ ಮ್ಯಾಟ್ ಹಾಕಿಸುವುದು, ಕಛೇರಿಯ ಹಿಂಭಾಗದಲ್ಲಿ ಉಳಿದಿರುವ ಜಾಗದಲ್ಲಿ ಕೊಠಡಿ ನಿರ್ಮಾಣಕ್ಕಾಗಿ ತಳಪಾಯ ಹಾಕಿ ಕಟ್ಟಡ ವಿಸ್ತರಣೆ ಮಾಡಿ ನಿರ್ಮಾಣ ಮಾಡುವುದು ಮತ್ತು ಜಿ. ಐ. ಪೈಪ್ ಅಳವಡಿಸಿ ಎ. ಸಿ. ಶೀಟ್ ಹಾಕುವುದು ಮತ್ತು ಗ್ರಿಲ್ಸ್ ಅಳವಡಿಸಿ ಮೆಟ್ಟಿಲುಗಳನ್ನು ಅಳವಡಿಸುವ ಕಾಮಗಾರಿಗಳನ್ನು ಮತ್ತು ಕಛೇಯಲ್ಲಿ ಅಗತ್ಯವಿರುವ ಪಾರ್ಟಿಷನ್‌ಗಳನ್ನು ಅಳವಡಿಸುವುದು ಮತ್ತು ಇನ್ನಿತರೆ ಅಗತ್ಯ ಕಾಮಗಾರಿಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮತ್ತು ಸಭೆಯ ಘಟನೋತ್ತರ ಮಂಜೂರಾತಿ ನಿರೀಕ್ಷಿಸಿ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ, ಆದರಂತೆ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಕಾಮಗಾರಿಗೆ ತಗಲುವ ವೆಚ್ಚವನ್ನು ಪ್ರಧಿಕಾರದಿಂದಲೇ ಭರಿಸಬಹುದೆಂದು ಸರ್ವಾನುಮತದಿಂದ ಅನುಮೋದಿಸಲಾಯಿತು.

**ವಿಷಯ ನಂ 3.**

ಚಿಕ್ಕಮಗಳೂರು ನಗರದ ಮತ್ತು ನಗರಾಭಿವೃದ್ದಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅನಧೀಕೃತ / ಅಕ್ರಮ ಕಟ್ಟಡಗಳ ನಿರ್ಮಾಣದ ಬಗ್ಗೆ ಜಾಗೃತದಳ ರಚಿಸುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರದ ಮತ್ತು ನಗರಾಭಿವೃದ್ದಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅನಧೀಕೃತ / ಅಕ್ರಮ ಕಟ್ಟಡಗಳ ನಿರ್ಮಾಣದ ಬಗ್ಗೆ ಹೆಚ್ಚಿನ ಗಮನಹರಿಸಿ ಈಗಾಗಲೇ ಅಕ್ರಮವಾಗಿ ಕಟ್ಟಡ / ಲೇಔಟ್ ಇತ್ಯಾದಿಗಳನ್ನು ನಿರ್ಮಾಣ ಮಾಡುತ್ತಿರುವುದು ಕಂಡುಬಂದಿರುತ್ತದೆ ಸದರಿ ಅಕ್ರಮ / ಅನಧೀಕೃತ ಕಟ್ಟಡಗಳನ್ನು ತಡೆಯಲು ನಗರಸಭೆ ಹಾಗೂ ಪ್ರಾಧಿಕಾರದ ಅಧಿಕಾರಿಗಳ ಜಂಟಿ ಜಾಗೃತ ದಳ ರಚಿಸುವ ಬಗ್ಗೆ ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ಚಿಕ್ಕಮಗಳೂರು ನಗರದ ಮತ್ತು ನಗರಾಭಿವೃದ್ದಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅನಧೀಕೃತ / ಅಕ್ರಮ ಕಟ್ಟಡಗಳ ನಿರ್ಮಾಣದ ಬಗ್ಗೆ ಮಾತನಾಡಿ ಅಧ್ಯಕ್ಷರು ಅಕ್ರಮ ನಿರ್ಮಾಣಗಳ ಬಗ್ಗೆ ಹೆಚ್ಚಿನ ಗಮನ ಕೋಡಬೇಕಿರುವುದರಿಂದ ನಗರಸಭೆ ಹಾಗೂ ಪ್ರಾಧಿಕಾರದ ಅಧಿಕಾರಿಗಳ ಜಂಟಿ ಜಾಗೃತ ದಳ ರಚಿಸಬೇಕಾಗಿದೆ ಎಂದು ಹೇಳಿದರು ಇದನ್ನು ಸಭೆ ಒಪ್ಪಿತು ನಗರ ಸಭೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಪ್ರಾಧಿಕಾರದ ಸಹಾಯಕ ಅಭಿಯಂತರರು, ಹಾಗೂ ವರ್ಕ್ ಇನ್ಸ್‌ಪೆಕ್ಟರ್‌ರನ್ನು ಹಾಗೂ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರನ್ನು ದಳಕ್ಕೆ ಒಪ್ಪಿಗೆ ನೀಡಲಾಯಿತು, ಪ್ರತಿ ತಿಂಗಳಿಗೊಮ್ಮೆ ಈ ತಂಡದ ಪ್ರಗತಿಯನ್ನು ಪ್ರಾಧಿಕಾರದ ಅಧ್ಯಕ್ಷರು, ಆಯುಕ್ತರು ಹಾಗೂ ನಗರ ಸಭೆಯ ಅಧ್ಯಕ್ಷರು ಹಾಗೂ ಆಯುಕ್ತರ ಸಮ್ಮುಖದಲ್ಲಿ ಚರ್ಚಿಸಲು ಸಭೆ ಸೇರಿಸಲು ನಿರ್ಣಯಿಸಲಾಯಿತು, ಈ ಬಗ್ಗೆ ನಗರ ಸಭೆಗೆ ಪತ್ರ ಬರೆಯಲು ತೀರ್ಮಾನಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಪಡೆದು ಸಭೆಯು ಮುಕ್ತಾಯವಾಯಿತು.**

ಸಹಿ / -
ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಸಹಿ / -
ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

## ದಿನಾಂಕ: 07-07-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯಲ್ಲಿ ಚರ್ಚೆಯಾಗಿ ತೀರ್ಮಾನವಾದ ಬಗ್ಗೆ ಮಾನ್ಯ ಅಧ್ಯಕ್ಷರು ಮತ್ತು ಕೆಲವು ಸದಸ್ಯರು ಕೆಲವು ತಿದ್ದುಪಡಿಗಳನ್ನು ಬಯಸಿರುತ್ತಾರೆ ಸದರೀ ವಿಷಯಗಳು ಸಭೆಯಲ್ಲಿ ಚರ್ಚೆ ಆಗಿದ್ದರೂ ಪ್ರಮಾದದಿಂದ ಬಿಟ್ಟು ಹೋಗಿರುವುದರಿಂದ ಈ ಕೆಳಕಂಡಂತೆ ತಿದ್ದುಪಡಿ ನಿರ್ಣಯವನ್ನು ಮಾಡಲಾಗಿದೆ.

**ವಿಷಯ ನಂ 1.**

ಈ ತೀರ್ಮಾನದಲ್ಲಿ ಒಟ್ಟು ಭೂಮಿಯು 01 ಎಕರೆ 03 ಗುಂಟೆ ಎಂದು ತಪ್ಪಾಗಿ ನಮೂದಾಗಿದ್ದು ಅದನ್ನು 01 ಎಕರೆ 33 ಗುಂಟೆ ಎಂದು ಓದಿಕೊಳ್ಳುವುದು.

**ವಿಷಯ ನಂ 9.**

ಈಗಾಗಿರುವ ನಿರ್ಣಯದ ಮುಂದುವರಿದ ಭಾಗವಾಗಿ ಸರ್ಕಾರದ ಒಪ್ಪಿಗೆ ಪಡೆದು ಶೌಚಾಲಯ ನಿರ್ಮಾಣ ಮಾಡಲು ಸಭೆಯು ಬಹುಮತದಿಂದ ಅನುಮೋದನೆ ನೀಡಿತು ಎಂದು ಓದಿಕೊಳ್ಳುವುದು.

**ವಿಷಯ ನಂ 11.**

ಅನುಮೋದಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು ಎನ್ನುವುದಕ್ಕೆ ಬದಲಾಗಿ "ಸರ್ಕಾರಕ್ಕೆ ಸಲ್ಲಿಸಿರುವ ಮಹಾಯೋಜನೆ 2021 ರಲ್ಲಿ ಸರ್ವೆ ನಂ. 316 / 2 ಮತ್ತು 316 / 3 ರ ಭೂಮಿಯು ವಸತಿ ಉದ್ದೇಶಕ್ಕೆ ಮೀಸಲಿಟ್ಟಿರುವುದರಿಂದ" ಅನುಮೋದಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು ಎಂದು ಓದಿಕೊಳ್ಳುವುದು.

**ವಿಷಯ ನಂ 12.**

ನಿರ್ಣಯದಲ್ಲಿ ಸರ್ವೆ ನಂಬರ್ ಮತ್ತು ಅಳತೆಗಳು ತಪ್ಪಾಗಿರುವುದರಿಂದ ಸರ್ವೆ ನಂ. 296 / 1 ರಲ್ಲಿ 00 ಎಕರೆ 37 ಗುಂಟೆ, ಸರ್ವೆ ನಂ. 296 / 2 ರಲ್ಲಿ 02 ಎಕರೆ 32 ಗುಂಟೆ ಮತ್ತು ಸರ್ವೆ ನಂ. 288 ರಲ್ಲಿ 01 ಎಕರೆ 08 ಗುಂಟೆ ಒಟ್ಟು 04 ಎಕರೆ 37 ಗುಂಟೆ ಎಂದು ಓದಿಕೊಳ್ಳುವುದು.

ಸಹಿ / –
ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಸಹಿ / –
ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

# ದಿನಾಂಕ: 04-10-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು.

## ಸಭೆಯಲ್ಲಿ ಹಾಜರಿದ್ದ ಸದಸ್ಯರು.

| | | |
|---|---|---|
| 1 | ಶ್ರೀ ಬಿ. ಹೆಚ್. ಶ್ರೀಕಾಂತ್ ಪೈ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಅಧ್ಯಕ್ಷರು |
| 2 | ಶ್ರೀ ರಾಜು<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 3 | ಶ್ರೀ ಶ್ರೀನಿವಾಸ್<br>ಅಧ್ಯಕ್ಷರು ನಗರಸಭೆ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 4 | ಸಹಾಯಕ ನಿರ್ದೇಶಕರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |
| 5 | ಕಾರ್ಯಪಾಲಕ ಅಭಿಯಂತರರು,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 6 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ,  ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 7 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಹಾಸನ.<br>(ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 8 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |
| 9 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 10 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 11 | ಪರಿಸರ ಮಾಲಿನ್ಯ ಅಧಿಕಾರಿಗಳು,<br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>ಚಿಕ್ಕಮಗಳೂರು (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 12 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಆಹ್ವಾನಿತರು |

## ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.

| | | |
|---|---|---|
| 1 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 2 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |

| | | |
|---|---|---|
| 3 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 4 | ಶ್ರೀ ಜಿ. ಲೋಕೇಶ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 5 | ಶ್ರೀ ಮಧು ಕುಮಾರ್‌ರಾಜ್ ಅರಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 6 | ಶ್ರೀಮತಿ ವೀಣಾ ಶೆಟ್ಟಿ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |

**ವಿಷಯ ನಂ 1.**

ದಿನಾಂಕ: 07-07-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸುವ ಬಗ್ಗೆ.

**ಟಿಪ್ಪಣಿ :**

ದಿನಾಂಕ: 07-07-2010 ರಂದು ನಡೆದ ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಹಾಗೂ ಕ್ರಮ ಕೈಗೊಂಡ ಅನುಸರಣಾ ವರದಿಯನ್ನು ಈ ಕಾರ್ಯಸೂಚಿಯ ಜೊತೆಗೆ ಪ್ರಾಧಿಕಾರದ ಎಲ್ಲಾ ಸದಸ್ಯರುಗಳಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಲು ವಿಷಯ ಮಂಡಿಸಿದೆ.

**ತೀರ್ಮಾನ :**

ದಿನಾಂಕ: 04-10-2010 ರಂದು ಮದ್ಯಾನ್ಹ 3.00 ಗಂಟೆಗೆ ಶ್ರೀ ಬಿ. ಹೆಚ್. ಶ್ರೀಕಾಂತ್ ಪೈ ರವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು ಸಭೆಯಲ್ಲಿ ಹಾಜರಿದ್ದವರನ್ನು ಪ್ರಾಧಿಕಾರದ ಆಯುಕ್ತರು ಸ್ವಾಗತಿಸಿದರು, ಅಧ್ಯಕ್ಷರು ವಿಷಯ ಮಂಡಿಸಲು ಸೂಚಿಸಿದರು ಈ ಹಿಂದಿನ ದಿನಾಂಕ: 07-07-2010 ರ ಸಭೆಯ ನಡವಳಿಗಳ ಮೇಲೆ ಕ್ರಮ ಕೈಗೊಂಡ ಬಗ್ಗೆ ಅನುಸರಣಾ ವರದಿಯನ್ನು ಆಯುಕ್ತರು ಓದಿದರು, ಅದರಂತೆ ಹಿಂದಿನ ಸಭೆಯ ತೀರ್ಮಾನಗಳನ್ನು ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

**ವಿಷಯ ನಂ 2.**

2010 ನೇ ಸಾಲಿನ ಜೂನ್, ಜುಲೈ ಮತ್ತು ಆಗಸ್ಟ್ ಮಾಹೆಯ ಆದಾಯ ಮತ್ತು ಖರ್ಚಿನ ವಿವರಗಳನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.

**ಟಿಪ್ಪಣಿ:**

2010 ನೇ ಸಾಲಿನ ಜೂನ್, ಜುಲೈ ಮತ್ತು ಆಗಸ್ಟ್ ಮಾಹೆಯ ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ-1 ಅನುಬಂಧ-2 ಮತ್ತು ಅನುಬಂಧ-3 ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದಾಗಿದ್ದು ಸಭೆಗೆ ಮಂಡಿಸಿದೆ.

**ತೀರ್ಮಾನ :**

2010 ನೇ ಸಾಲಿನ ಜೂನ್, ಜುಲೈ ಮತ್ತು ಆಗಸ್ಟ್ ಮಾಹೆಯ ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ-1 ಅನುಬಂಧ-2 ಮತ್ತು ಅನುಬಂಧ-3 ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದೆಂದು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ನಂ 3.**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಗಾಂಧಿನಗರದಲ್ಲಿ ಇರುವ ಉದ್ಯಾನವನವನ್ನು ಸ್ವಾತಂತ್ರ್ಯ ದಿನಾಚರಣೆ 2010 ರ ಸ್ಮರಣಾರ್ಥ ಅಭಿವೃದ್ಧಿಪಡಿಸಲು ಕೈಗೊಂಡಿರುವ ಕ್ರಮದ ಅನುಮೋದನೆ ಮತ್ತು ಉಳಿದಂತೆ ಇನ್ನುಳಿದ ಮೂರು ಉದ್ಯಾನವನಗಳನ್ನು ಗುರುತಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಬಗ್ಗೆ.

**ಟಿಪ್ಪಣಿ:**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಗಾಂಧಿನಗರದಲ್ಲಿ ಇರುವ ಉದ್ಯಾನವನವನ್ನು ಸ್ವಾತಂತ್ರ್ಯ ದಿನಾಚರಣೆ 2010 ರ ಸ್ಮರಣಾರ್ಥ ಅಭಿವೃದ್ಧಿಪಡಿಸಲು ಕೈಗೊಂಡಿರುವ ಕ್ರಮದ ಅನುಮೋದನೆ ಮತ್ತು ಉಳಿದಂತೆ ಇನ್ನುಳಿದ ಮೂರು ಉದ್ಯಾನವನಗಳನ್ನು ಗುರುತಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಬಗ್ಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಪ್ರಸ್ತಾಪವಾಯಿತು. ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರು ಇದಕ್ಕೆ ಒಪ್ಪಿಗೆ ಸೂಚಿಸಿ ತುರ್ತು ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ. ಆದರಂತೆ ರೂ. 12.00 ಲಕ್ಷ ಮೊತ್ತಕ್ಕೆ ಅಂದಾಜು ಪಟ್ಟಿ ಸಿದ್ದಪಡಿಸಲಾಗಿದೆ. ಆಗಸ್ಟ್ 15 ರಂದು ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ನಿಗದಿಪಡಿಸಿದ್ದ ಭೂಮಿ ಪೂಜೆ ಕಾರ್ಯವನ್ನು ಮುಂದೂಡಲಾಗಿದೆ. ಲಕ್ಷ್ಮೀಶನಗರದ ನಾಗರೀಕ ವೇದಿಕೆ ಚಿಕ್ಕಮಗಳೂರು ರವರು ಒಂದು ಮನವಿ ಸಲ್ಲಿಸಿರುತ್ತಾರೆ ಹಾಗೂ ಗೃಹಮಂಡಳಿ ಬಡಾವಣೆಯ ನಿವಾಸಿಗಳ ಸಂಘದವರು ಸಹ ಮನವಿ ನೀಡಿ ತಮ್ಮ ಪ್ರದೇಶಗಳ ಉದ್ಯಾನವನಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಕೋರಿರುತ್ತಾರೆ, ಸದರೀ ಮೂರು ಉದ್ಯಾನವನಗಳನ್ನು ಪ್ರಾಧಿಕಾರದಿಂದ ಅಭಿವೃದ್ಧಿಪಡಿಸುವ ಬಗ್ಗೆ ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಗಾಂಧಿನಗರದಲ್ಲಿನ ಉದ್ಯಾನವನ ಅಭಿವೃದ್ಧಿಗಾಗಿ ರೂ.12.00 ಲಕ್ಷಕ್ಕೆ ನಿಯಮಾನುಸಾರ ಟೆಂಡರ್ ಕರೆದು ಕಾಮಗಾರಿ ಕೈಗೊಳ್ಳಲು ಸಭೆ ಸರ್ವಾನುಮತದಿಂದ ತೀರ್ಮಾನಿಸಿತು, ಉಳಿದ ಮೂರು ಪಾರ್ಕ್‌ಗಳಲ್ಲಿ ಹೌಸಿಂಗ್ ಬೋರ್ಡ್‌ನಲ್ಲಿನ ಒಂದು ಉದ್ಯಾನವನ, ಪ್ರಾಧಿಕಾರದ ಬಡಾವಣೆಯಲ್ಲಿನ ಒಂದು ಉದ್ಯಾನವನ ಮತ್ತು ಪ್ರಾಧಿಕಾರದ ಅಧ್ಯಕ್ಷರು ಸೂಚಿಸುವ ನಗರದ ಮತ್ತೊಂದೆಡೆ ಒಂದು ಉದ್ಯಾನವನ ಅಭಿವೃದ್ಧಿಪಡಿಸಲು ನಿಯಮಾನುಸಾರ ಅಂದಾಜು ಪಟ್ಟಿ ಸಿದ್ದಪಡಿಸಿ ಟೆಂಡರ್ ಕರೆದು ಕಾಮಗಾರಿ ಕೈಗೊಳ್ಳಲು ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ವಿಷಯ ನಂ 4.**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ನಾಗರೀಕ ಸೌಲಭ್ಯದ ನಿವೇಶನಗಳನ್ನು ವಿವಿದ ಸಂಘ ಸಂಸ್ಥೆಗಳಿಗೆ ಹಂಚಿಕೆ ಮಾಡುವ ಬಗ್ಗೆ.

**ಟಿಪ್ಪಣಿ:**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ನಾಗರೀಕ ಸೌಲಭ್ಯದ ನಿವೇಶನಗಳನ್ನು ವಿವಿದ ಸಂಘ ಸಂಸ್ಥೆಗಳಿಗೆ ಹಂಚಿಕೆ ಮಾಡಿಕೊಡುವಂತೆ, 1. ಜಿಲ್ಲಾ ನಾರಾಯಣ ಗುರು ಸಮಿತಿ (ರಿ) ಚಿಕ್ಕಮಗಳೂರು ರವರಿಗೆ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ, 2. ಜಿಲ್ಲಾ ಒಕ್ಕಲಿಗರ ಮಹಿಳಾ ಸಂಘ (ರಿ) ಚಿಕ್ಕಮಗಳೂರು ರವರು ಸಾರ್ವಜನಿಕ ಗ್ರಂಥಾಲಯ ಕಟ್ಟಡ ನಿರ್ಮಾಣಕ್ಕಾಗಿ, 3. ಪ್ರಮೋದಿನಿ ಯೋಗ ಶಿಕ್ಷಣ ಟ್ರಸ್ಟ್ ಚಿಕ್ಕಮಗಳೂರು ರವರು 40 x 60 ಅಳತೆಯ ಜಾಗವನ್ನು, ಸತ್ಯ ಸಾಯಿ ಮಧುವನ ಲೇಔಟ್‌ನಲ್ಲಿಯ ಪಾರ್ಕಿನಲ್ಲಿ ಹಂಚಿಕೆ ಮಾಡುವ ಬಗ್ಗೆ ಯೋಗ ಶಿಕ್ಷಣ ಟ್ರಸ್ಟ್ ಚಿಕ್ಕಮಗಳೂರು ರವರು ಹಾಗೂ

4. ಚಿಕ್ಕಮಗಳೂರು ಜಿಲ್ಲಾ ಪದವೀದರರ ಪತ್ತಿನ ಸಹಕಾರ ಸಂಘ (ರಿ) ಕನಿಷ್ಠ 1200 ಚದರ ಮೀಟರ್ ಅಳತೆಯ ನಾಗರೀಕ ಸೌಲಭ್ಯದ ನಿವೇಶನವನ್ನು ಸಂಘದ ಕಟ್ಟಡ ನಿರ್ಮಾಣಕ್ಕಾಗಿ ಹಂಚಿಕೆ ಮಾಡುವಂತೆ ಕೋರಿರುತ್ತಾರೆ, 5. ಭಾರತೀಯ ಜನಸೇನಾ ಪ್ರತಿಷ್ಠಾನ (ನೋಂ) ನಂ. 91. ಧರ್ಮಶ್ರೀ ಶಂಕರಪುರಂ ಬೆಂಗಳೂರು. ರವರು ಕರ್ನಾಟಕ ರಾಜ್ಯದಾದ್ಯಂತ ಅನೇಕ ಜನಪರ ಸೇವಾ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದ್ದು ಚಿಕ್ಕಮಗಳೂರಿನಲ್ಲೂ ನಡೆಸಲು ಸೂಕ್ತ ಕಾರ್ಯಾಲಯದ ಅವಶ್ಯಕತೆಗಾಗಿ ಸೂಕ್ತವಾದ ನಿವೇಶನವನ್ನು ನೀಡಬೇಕೆಂದು ಕೋರಿರುತ್ತಾರೆ. (ಪ್ರಾಧಿಕಾರದಲ್ಲಿ ಪ್ರಸ್ತುತ ವಿವಿದ ಅಳತೆಯ ನಿವೇಶನಗಳು ಲಭ್ಯವಿರುವ ಮಾಹಿತಿಯನ್ನು ಸಭೆಯಲ್ಲಿ ನೀಡಲಾಗುವುದು) ಆದರಂತೆ ಮೇಲಿನ ಐದು ಸಂಸ್ಥೆಗಳಿಗೆ ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯದ ನಿವೇಶನಗಳನ್ನು ಆದ್ಯತೆ ಮೇರೆಗೆ ಪರಿಶೀಲಿಸಿ ನಿಯಮಾನುಸಾರ ಹಂಚಿಕೆ ಮಾಡುವ ಬಗ್ಗೆ ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಮೇಲ್ಕಂಡ ಸಂಸ್ಥೆಗಳ ಜೊತೆಗೆ ಕಾರ್ಪೋರೇಷನ್ ಬ್ಯಾಂಕ್ ಚಿಕ್ಕಮಗಳೂರು ಹಾಗೂ ಅಂಬೇಡ್ಕರ್ ಶಿಕ್ಷಣ ಸಂಸ್ಥೆಯವರು ಸಹ ಅರ್ಜಿ ಸಲ್ಲಿಸಿರುವ ಬಗ್ಗೆ ತಿಳಿಸಲಾಯಿತು, ಈಗಾಗಲೇ ನಿಯಮಾನುಸಾರ ಬ್ಯಾಂಕ್ ಮೂಲಕ ಅರ್ಜಿ ಸಲ್ಲಿಸಿ ಹಣ ಪಾವತಿಸಿರುವವರಿಗೆ ನಿವೇಶನ ಹಂಚಿಕೆ ಮಾಡಲು, ಉಳಿದ ಸಂಸ್ಥೆಗಳಿಗೆ ಬಯಸಿರುವ ಉದ್ದೇಶಕ್ಕೆ ನಿಯಮಾನುಸಾರ ಮೀಸಲಿಟ್ಟು ಜಾಹಿರಾತು ಮೂಲಕ ಅರ್ಜಿ ಆಹ್ವಾನಿಸಿ ಅರ್ಹತೆ ಆದರಿಸಿ ಹಂಚಿಕೆ ಮಾಡಲು ಸಭೆ ಒಪ್ಪಿತು, ಪ್ರಮೋದಿನಿ ಯೋಗ ಶಿಕ್ಷಣ ಟ್ರಸ್ಟ್ ಚಿಕ್ಕಮಗಳೂರು ರವರು 40 x 60 ಅಳತೆಯ ಜಾಗವನ್ನು, ಸತ್ಯ ಸಾಯಿ ಮಧುವನ ಲೇಔಟ್‌ನಲ್ಲಿಯ ಪಾರ್ಕಿನಲ್ಲಿ ಹಂಚಿಕೆ ಮಾಡುವ ಬಗ್ಗೆ ಅರ್ಜಿ ಸಲ್ಲಿಸಿರುವ ಬಗ್ಗೆ ಚರ್ಚಿಸಲಾಯಿತು. ಉದ್ಯಾನವನಕ್ಕೆ ಮೀಸಲಿಟ್ಟಿರುವ ಭಾಗದ ಶೇಕಡ 5 ರಷ್ಟು ಗ್ರಂಥಾಲಯ ಉದ್ದೇಶಕ್ಕಾಗಿ ಹಂಚಿಕೆ ಮಾಡಲು ದಿನಾಂಕ: 30-11-2009 ರ ಸರ್ಕಾರಿ ಆದೇಶ ಪರಿಗಣಿಸಿ ಅದೇ ಉದ್ದೇಶಕ್ಕಾಗಿ ಅರ್ಹತೆಯ ಆದರಿಸಿ ನಿಯಮಾನುಸಾರ ಹಂಚಿಕೆ ಮಾಡಲು ಸಭೆ ಒಪ್ಪಿತು. ಪದವೀದರರ ಪತ್ತಿನ ಸಹಕಾರ ಸಂಘದ ಕಛೇರಿ ಉದ್ದೇಶಕ್ಕೆ ಹಂಚಿಕೆ ಮಾಡಲು ನಿಯಮಾನುಸಾರ ಅವಕಾಶ ಇರುವುದಿಲ್ಲವಾದ್ದರಿಂದ ತಿರಸ್ಕರಿಸಲು ತೀರ್ಮಾನಿಸಿತು.

**ವಿಷಯ ನಂ 5.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಇಂದಾವರ ಮತ್ತು ಉಪ್ಪಳ್ಳಿ ಗ್ರಾಮದ ವಿವಿದ ಸರ್ವೆ ನಂಬರುಗಳಲ್ಲಿನ ಒಟ್ಟು 200 ಎಕರೆ ಜಮೀನನ್ನು ಇತ್ತೀಚಿಗೆ ಸರ್ಕಾರವು ಜಾರಿಗೆ ತಂದಿರುವ 40 : 60 ಅನುಪಾತದ ಪಾಲುಗಾರಿಕೆ ಯೋಜನೆಯಲ್ಲಿ ಅಭಿವೃದ್ದಿಪಡಿಸಿ ವಸತಿ ಬಡಾವಣೆ ರಚಿಸುವ ಸಲುವಾಗಿ ಭೂಸ್ವಾಧೀನ ಪಡಿಸಿಕೊಳ್ಳುವ ಸಲುವಾಗಿ ನೋಂದಣಿ ನಕ್ಷೆ ತಯಾರಿಸಿ ಇತರೆ ಕಾರ್ಯಗಳಿಗೆ ಸುಮಾರು 50.00 ಲಕ್ಷ ವೆಚ್ಚವಾಗಬಹುದಾಗಿದ್ದು ಸದರಿ ವೆಚ್ಚವನ್ನು ಪ್ರಾಧಿಕಾರದಿಂದ ಭರಿಸುವ ಬಗ್ಗೆ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಇಂದಾವರ ಮತ್ತು ಉಪ್ಪಳ್ಳಿ ಗ್ರಾಮದ ವಿವಿದ ಸರ್ವೆ ನಂಬರುಗಳಲ್ಲಿನ ಒಟ್ಟು 200 ಎಕರೆ ಜಮೀನನ್ನು ಇತ್ತೀಚಿಗೆ ಸರ್ಕಾರವು ಜಾರಿಗೆ ತಂದಿರುವ 40 : 60 ಅನುಪಾತದ ಪಾಲುಗಾರಿಕೆ ಯೋಜನೆಯಲ್ಲಿ ಅಭಿವೃದ್ದಿಪಡಿಸಿ ವಸತಿ ಬಡಾವಣೆ ರಚಿಸುವ ಸಲುವಾಗಿ ಭೂಸ್ವಾಧೀನ ಪಡಿಸಿಕೊಳ್ಳುವ ಸಲುವಾಗಿ ಉಪನೋಂದಣಾಧಿಕಾರಿಗಳಿಗೆ ಶೇಕಡ 7 ರಷ್ಟು ನೋಂದಣಿ ಮತ್ತು ಸ್ಟಾಂಪ್ ವೆಚ್ಚ, ಡೀಟೆಲ್ಡ್ ಡಿಮಾಂಡ್ ಸರ್ವೆ ವೆಚ್ಚ, ನಕ್ಷೆ ತಯಾರಿಸಿ ನಗರದ ಪ್ರಮುಖ ಸ್ಥಳಗಳಲ್ಲಿ ಪ್ರಚಾರ ಮಾಡುವುದು ಹಾಗೂ ಯೋಜನೆಯ ಮಂಜೂರಾತಿಗೆ ಪೂರ್ವಭಾವಿಯಾಗಿ ಮಾಡಬೇಕಾಗಿರುವ ಇತರೆ ಕಾರ್ಯಗಳಿಗೆ ಸುಮಾರು 50.00 ಲಕ್ಷ ವೆಚ್ಚ ಬರಬಹುದಾಗಿದ್ದು ಸದರಿ ವೆಚ್ಚವನ್ನು ಪ್ರಾಧಿಕಾರದಿಂದ ಭರಿಸಬೇಕಾಗಿರುತ್ತದೆ, ಸದರಿ ವೆಚ್ಚವನ್ನು ಪ್ರಾಧಿಕಾರದಿಂದ ಭರಿಸುವ ಬಗ್ಗೆ ಅನುಮೋದನೆ ಕೋರಿ ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಇಂದಾವರ ಮತ್ತು ಉಪ್ಪಳ್ಳಿ ಗ್ರಾಮದ ವಿವಿದ ಸರ್ವೆ ನಂಬರುಗಳಲ್ಲಿನ ಒಟ್ಟು 200 ಎಕರೆ ಜಮೀನನ್ನು ಇತ್ತೀಚಿಗೆ ಸರ್ಕಾರವು ಜಾರಿಗೆ ತಂದಿರುವ 40 : 60 ಅನುಪಾತದ ಪಾಲುಗಾರಿಕೆ ಯೋಜನೆಯಲ್ಲಿ ಅಭಿವೃದ್ದಿಪಡಿಸಿ ವಸತಿ ಬಡಾವಣೆ ರಚಿಸುವ ಸಲುವಾಗಿ ಭೂಸ್ವಾಧೀನ ಪಡಿಸಿಕೊಳ್ಳುವ ಸಲುವಾಗಿ ಉಪನೋಂದಣಾಧಿಕಾರಿಗಳಿಗೆ ಶೇಕಡ 7 ರಷ್ಟು ನೋಂದಣಿ ಮತ್ತು ಸ್ಟಾಂಪ್ ವೆಚ್ಚ, ಡೀಟೆಲ್ಡ್ ಡಿಮಾಂಡ್ ಸರ್ವೆ ವೆಚ್ಚ, ನಕ್ಷೆ ತಯಾರಿಸಿ ನಗರದ ಪ್ರಮುಖ ಸ್ಥಳಗಳಲ್ಲಿ ಪ್ರಚಾರ ಮಾಡುವುದು ಹಾಗೂ ಯೋಜನೆಯ ಮಂಜೂರಾತಿಗೆ ಪೂರ್ವಭಾವಿಯಾಗಿ ಮಾಡಬೇಕಾಗಿರುವ ಇತರೆ ಕಾರ್ಯಗಳಿಗೆ ಸುಮಾರು 50.00 ಲಕ್ಷ ವೆಚ್ಚ ಬರಬಹುದಾಗಿದ್ದು ಸದರಿ ವೆಚ್ಚವನ್ನು ಪ್ರಾಧಿಕಾರದಿಂದ ಭರಿಸಬೇಕಾಗಿರುತ್ತದೆ, ಸಭೆಯು ಸದರಿ ವೆಚ್ಚವನ್ನು ನಿಯಮಾನುಸಾರ ಭರಿಸಲು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ 6.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಇಂದಾವರ ಮತ್ತು ಉಪ್ಪಳ್ಳಿ ಗ್ರಾಮಗಳ ವಿವಿದ ಸರ್ವೆ ನಂಬರುಗಳಲ್ಲಿನ ಒಟ್ಟು 200 ಎಕರೆ ಜಮೀನನ್ನು ಪ್ರಾಧಿಕಾರದಿಂದ 40 : 60 ಅನುಪಾತದ ಪಾಲುಗಾರಿಕೆ ಯೋಜನೆಯಲ್ಲಿ ಅಭಿವೃದ್ದಿಪಡಿಸಿ ವಸತಿ ಬಡಾವಣೆ ನಿರ್ಮಾಣ ಮಾಡಲು ಉದ್ದೇಶಿಸಿರುವ ಭೂಮಿಯ ಮಧ್ಯಭಾಗದಲ್ಲಿ 23.00 ಎಕರೆ ಸರ್ಕಾರಿ ಜಮೀನು ಇದ್ದು, ಸದರೀ 23.00 ಎಕರೆ ಜಾಗದಲ್ಲಿ 20 x 30 ಅಳತೆಯ ಆಶ್ರಯ ನಿವೇಶನಗಳನ್ನು ರಚಿಸುವ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಇಂದಾವರ ಮತ್ತು ಉಪ್ಪಳ್ಳಿ ಗ್ರಾಮಗಳ ವಿವಿದ ಸರ್ವೆ ನಂಬರುಗಳಲ್ಲಿನ ಒಟ್ಟು 200 ಎಕರೆ ಜಮೀನನ್ನು ಇತ್ತೀಚಿಗೆ ಸರ್ಕಾರವು ಜಾರಿಗೆ ತಂದಿರುವ 40 : 60 ಅನುಪಾತದ ಪಾಲುಗಾರಿಕೆ ಯೋಜನೆಯಲ್ಲಿ ಅಭಿವೃದ್ದಿಪಡಿಸಿ ವಸತಿ ಬಡಾವಣೆ ನಿರ್ಮಾಣ ಮಾಡಲು ಉದ್ದೇಶಿಸಿರುವ ಭೂಮಿಯ ಮಧ್ಯಭಾಗದಲ್ಲಿ 23.00 ಎಕರೆ ಸರ್ಕಾರಿ ಜಮೀನು ಇದ್ದು ಸದರಿ ಭೂಮಿಯಲ್ಲೂ ಸಹ ಪ್ರಾಧಿಕಾರದ 40 : 60 ಪಾಲುಗಾರಿಕೆ ಯೋಜನೆಯಂತೆ ಶೇಕಡ 40 ರಷ್ಟು 20 x 30 ಅಳತೆಯ ನಿವೇಶನಗಳನ್ನು ರಚಿಸಿ, ಪೂರ್ಣ ಮೂಲಭೂತ ಸೌಲಭ್ಯಗಳೊಂದಿಗೆ ಆಶ್ರಯ ಯೋಜನೆಯ ಉದ್ದೇಶಕ್ಕಾಗಿ ಹಸ್ತಾಂತರಿಸಬಹುದಾಗಿದೆ. ಸದರಿ ಭೂಮಿಯು ಬಡಜನರಿಗೆ ಹಂಚುವ ಸಲುವಾಗಿ ಮೀಸಲಿಡುವಂತೆ ಮಾನ್ಯ ಶಾಸಕರು ಚಿಕ್ಕಮಗಳೂರು ರವರು ಸಹ ಸೂಚನೆ ನೀಡಿರುತ್ತಾರೆ. ಸದರಿ ಜಮೀನು 200 ಎಕರೆ ಪ್ರದೇಶದ ಮಧ್ಯ ಭಾಗದಲ್ಲಿರುವುದರಿಂದ ಪ್ರಾಧಿಕಾರದಿಂದಲೇ ಅಭಿವೃದ್ದಿಪಡಿಸಿ 40 : 60 ರ ಅನುಪಾತದಲ್ಲಿ ಹಂಚಿಕೆ ಮಾಡಲು ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಇಂದಾವರ ಮತ್ತು ಉಪ್ಪಳ್ಳಿ ಗ್ರಾಮಗಳ ವಿವಿದ ಸರ್ವೆ ನಂಬರುಗಳಲ್ಲಿನ ಒಟ್ಟು 200 ಎಕರೆ ಜಮೀನನ್ನು ಇತ್ತೀಚಿಗೆ ಸರ್ಕಾರವು ಜಾರಿಗೆ ತಂದಿರುವ 40 : 60 ಅನುಪಾತದ ಪಾಲುಗಾರಿಕೆ ಯೋಜನೆಯಲ್ಲಿ ಅಭಿವೃದ್ದಿಪಡಿಸಿ ವಸತಿ ಬಡಾವಣೆ ನಿರ್ಮಾಣ ಮಾಡಲು ಉದ್ದೇಶಿಸಿರುವ ಭೂಮಿಯ ಮಧ್ಯಭಾಗದಲ್ಲಿ 23.00 ಎಕರೆ ಸರ್ಕಾರಿ ಜಮೀನು ಇದ್ದು ಸದರಿ ಭೂಮಿಯಲ್ಲೂ ಸಹ ಪ್ರಾಧಿಕಾರದ 40 : 60 ಪಾಲುಗಾರಿಕೆ ಯೋಜನೆಯಂತೆ ಶೇಕಡ 40 ರಷ್ಟು 20 x 30 ಅಳತೆಯ ನಿವೇಶನಗಳನ್ನು ರಚಿಸಿ, ಪೂರ್ಣ ಮೂಲಭೂತ ಸೌಲಭ್ಯಗಳೊಂದಿಗೆ ಆಶ್ರಯ ಯೋಜನೆಯ ಉದ್ದೇಶಕ್ಕಾಗಿ ಹಸ್ತಾಂತರಿಸಬಹುದಾಗಿದೆ. ಸದರಿ ಭೂಮಿಯು ಬಡಜನರಿಗೆ ಹಂಚುವ ಸಲುವಾಗಿ ಮೀಸಲಿಡುವಂತೆ ಮಾನ್ಯ ಶಾಸಕರು ಚಿಕ್ಕಮಗಳೂರು ರವರು ಸಹ ಸೂಚನೆ ನೀಡಿರುತ್ತಾರೆ. ಸದರಿ ಜಮೀನು 200 ಎಕರೆ ಪ್ರದೇಶದ ಮಧ್ಯ ಭಾಗದಲ್ಲಿರುವುದರಿಂದ ಪ್ರಾಧಿಕಾರದಿಂದಲೇ ಅಭಿವೃದ್ದಿಪಡಿಸಿ 40 : 60 ರ ಅನುಪಾತದಲ್ಲಿ ಹಂಚಿಕೆ ಮಾಡಬಹುದೆಂದು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ವಿಷಯ ನಂ 7.**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯಲ್ಲಿನ ಹಿರೇಮಗಳೂರು ಗ್ರಾಮದ ಸರ್ವೆ ನಂ. 498 ರಲ್ಲಿನ 00 ಎಕರೆ 39 ಗುಂಟೆ ಲ್ಯಾಂಡ್ ಬ್ಯಾಂಕ್ ಜಾಗವನ್ನು ಹರಾಜು ಮಾಡುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯಲ್ಲಿನ ಹಿರೇಮಗಳೂರು ಗ್ರಾಮದ ಸರ್ವೆ ನಂ. 498 ರಲ್ಲಿನ 00 ಎಕರೆ 39 ಗುಂಟೆ ಲ್ಯಾಂಡ್ ಬ್ಯಾಂಕ್ ಜಾಗದಲ್ಲಿ ನಿವೇಶನಗಳನ್ನು ರಚನೆ ಮಾಡಿ ಅಭಿವೃದ್ದಿಪಡಿಸಿ ಹಂಚಿಕೆ ಮಾಡುವ ಬಗ್ಗೆ ದಿನಾಂಕ: 30-10-2009 ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ. 06 ರಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗಿತ್ತು, ಆದರಂತೆ ನಿವೇಶನಗಳನ್ನು ವಿಂಗಡಿಸಿದಲ್ಲಿ ಸುಮಾರು 20.00 ಲಕ್ಷದಷ್ಟು ಮೊತ್ತವನ್ನು ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಬೇಕಾಗುತ್ತದೆ ಮತ್ತು ಒಟ್ಟು ಸುಮಾರು 42000 ಚದರ ಅಡಿಯ ಈ ಭೂಮಿಯಲ್ಲಿ ರಸ್ತೆ ಮತ್ತು ಹಳ್ಳದ ಬಫರ್ ಹೊರತುಪಡಿಸಿದರೆ ಕೇವಲ ಸುಮಾರು 30000 ಚದರ ಅಡಿ ಮಾತ್ರ ಉಳಿಯುತ್ತದೆ. ಆದ್ದರಿಂದ ಸದರಿ ಖರ್ಚನ್ನು ಭರಿಸುವ ಬದಲು ಒಟ್ಟು ಭೂಮಿಯನ್ನು ಹರಾಜು ಮಾಡಬಹುದಾಗಿರುತ್ತದೆ. ಒಟ್ಟು ಭೂಮಿಯನ್ನು ಹರಾಜು ಮಾಡುವ ಅಥವಾ ಸಣ್ಣ ನಿವೇಶನಗಳನ್ನಾಗಿ ವಿಂಗಡಿಸಿ ಹರಾಜು ಮಾಡುವ ಬಗ್ಗೆ ತೀರ್ಮಾನ ಕೈಗೊಳ್ಳಲು ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯಲ್ಲಿನ ಹಿರೇಮಗಳೂರು ಗ್ರಾಮದ ಸರ್ವೆ ನಂ. 498 ರಲ್ಲಿನ 00 ಎಕರೆ 39 ಗುಂಟೆ ಲ್ಯಾಂಡ್ ಬ್ಯಾಂಕ್ ಜಾಗದಲ್ಲಿ ನಿವೇಶನಗಳನ್ನು ರಚನೆ ಮಾಡಿ ಅಭಿವೃದ್ದಿಪಡಿಸಿ ಹಂಚಿಕೆ ಮಾಡುವ ಬಗ್ಗೆ ದಿನಾಂಕ: 30-10-2009 ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ. 06 ರಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗಿತ್ತು, ಆದರಂತೆ ನಿವೇಶನಗಳನ್ನು ವಿಂಗಡಿಸಿದಲ್ಲಿ ಸುಮಾರು 20.00 ಲಕ್ಷದಷ್ಟು ಮೊತ್ತವನ್ನು ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಬೇಕಾಗುತ್ತದೆ ಮತ್ತು ಒಟ್ಟು ಸುಮಾರು 42000 ಚದರ ಅಡಿಯ ಈ ಭೂಮಿಯಲ್ಲಿ ರಸ್ತೆ ಮತ್ತು ಹಳ್ಳದ ಬಫರ್ ಹೊರತುಪಡಿಸಿದರೆ ಕೇವಲ ಸುಮಾರು 30000 ಚದರ ಅಡಿ ಮಾತ್ರ ಉಳಿಯುತ್ತದೆ ಎಂಬ ಟಿಪ್ಪಣಿ ಬಗ್ಗೆ ಚರ್ಚಿಸಲಾಯಿತು. ಸದರಿ ಖರ್ಚನ್ನು ಭರಿಸುವ ಬದಲು ಒಟ್ಟು ಭೂಮಿಯನ್ನು ಹರಾಜು ಮಾಡಬಹುದಾಗಿರುತ್ತದೆ. ಒಟ್ಟು ಭೂಮಿಯನ್ನು ಪ್ರಥಮವಾಗಿ ಹರಾಜು ಮಾಡಲು, ನಿರೀಕ್ಷಿತ ದರ ಬರದಿದ್ದಲ್ಲಿ ವಿಭಜಿಸಿ ನಿವೇಶನ ರಚಿಸಿ ಹರಾಜು ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ 8.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಇಂದಾವರ ಮತ್ತು ಉಪ್ಪಳ್ಳಿ ಗ್ರಾಮದ ವಿವಿದ ಸರ್ವೆ ನಂಬರುಗಳಲ್ಲಿನ ಒಟ್ಟು 200 ಎಕರೆ ಜಮೀನಿನಲ್ಲಿ ರಚಿಸಲು ಉದ್ದೇಶಿಸಿರುವ ಬಡಾವಣೆಗೆ ನಗರಸಭೆಯ ವತಿಯಿಂದ ಹಿರೇಕೊಳಲೆ ಕೆರೆಯಿಂದ ಆರಂಭಿಸುತ್ತಿರುವ ಕುಡಿಯುವ ನೀರು ಸರಬರಾಜು ಯೋಜನೆಯಲ್ಲಿ ಸಬ್ ಲೈನ್ ಮೂಲಕ ನೀರು ಸರಬರಾಜಿಗೆ, ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯ ಮತ್ತು ನಗರಸಭೆಯ ಒಪ್ಪಿಗೆ ಮತ್ತು ಅನುಮತಿ ಪಡೆಯುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಇಂದಾವರ ಮತ್ತು ಉಪ್ಪಳ್ಳಿ ಗ್ರಾಮದ ವಿವಿದ ಸರ್ವೆ ನಂಬರುಗಳಲ್ಲಿನ ಒಟ್ಟು 200 ಎಕರೆ ಜಮೀನಿನಲ್ಲಿ ಭೂಸ್ವಾಧೀನ ಪಡಿಸಿಕೊಂಡು 40 : 60 ಅನುಪಾತದ ಪಾಲುಗಾರಿಕೆ ಯೋಜನೆಯಲ್ಲಿ ಅಭಿವೃದ್ದಿಪಡಿಸಿ ವಸತಿ ಬಡಾವಣೆ ರಚಿಸುವ ಪ್ರದೇಶಕ್ಕೆ ಹಿರೇಕೊಳಲೆ ಕೆರೆಯಿಂದ ಕುಡಿಯುವ ನೀರು ಸರಬರಾಜು ಯೋಜನೆಗೆ ನಗರ ನೀರು ಸರಬರಾಜು ಮಂಡಳಿ ಮತ್ತು ನಗರ ಸಭೆಯು ಅನುಮತಿ ನೀಡಿದಲ್ಲಿ ಸದರಿ ಬಡಾವಣೆಯ ರಚನೆಯು ಸುಗಮವಾಗುತ್ತದೆ. ಈ ಬಗ್ಗೆ ಈಗಾಗಲೇ ನಗರಸಭೆಗೆ ಪತ್ರ ಬರೆದಿದ್ದು ತುರ್ತಾಗಿ ಸದರಿ ಅನುಮತಿ ಪಡೆಯಲು ಚರ್ಚೆಗಾಗಿ ವಿಷಯವನ್ನು ಸಭೆಗೆ ಮಂಡಿಸಲಾಗಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಸಭೆಯಲ್ಲಿದ್ದ ನಗರಸಭಾ ಅಧ್ಯಕ್ಷರು ಸದರಿ ಯೋಜನೆಗೆ ಅನುಮತಿ ನೀಡುವುದಾಗಿ ಹಾಗೂ ಹಿರೇಕೊಳಲೆ ನೀರು ಸರಬರಾಜು ಯೋಜನೆಯಲ್ಲಿ ಸಬ್‌ಲೈನ್ ನೀಡಲು ಸೂಕ್ತ ಒಪ್ಪಿಗೆ ದೊರಕಿಸಿಕೊಡಲಾಗುವುದು ಎಂದು ತಿಳಿಸಿದರು, ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಮತ್ತು ಸಂಬಂದಿಸಿದಂತೆ ಯಾವ ರೀತಿ ಯೋಜನೆ ಸಿದ್ದಪಡಿಸಬಹುದು ಎಂಬ ಬಗ್ಗೆ ಹಾಜರಿದ್ದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಪೂರ್ಣ ವಿವರಗಳೊಂದಿಗೆ ಪತ್ರ ನೀಡಲು ಒಪ್ಪಿದರು. ಅದರಂತೆ ಯೋಜನೆ ಸಿದ್ದಪಡಿಸಲು ಸಭೆ ತೀರ್ಮಾನಿಸಿತು.

**ವಿಷಯ ನಂ 9.**

ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರವು ರಚಿಸಲು ಉದ್ದೇಶಿಸಿರುವ ಉಪ್ಪಳ್ಳಿ ಇಂದಾವರ ಭಾಗದ 200 ಎಕರೆ ಬಡಾವಣೆಗೆ ರಾಜ್ಯ ಮತ್ತು ರಾಷ್ಟ್ರೀಯ ಮಾಲೀನ್ಯ ನಿಯಂತ್ರಣ ಮಂಡಳಿಯಿಂದ (ಪರಿಸರ ಇಲಾಖೆ) ನಿರಾಕ್ಷೇಪಣಾ ಪತ್ರ ಪಡೆಯುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರವು ರಚಿಸಲು ಉದ್ದೇಶಿಸಿರುವ ಉಪ್ಪಳ್ಳಿ ಇಂದಾವರ ಭಾಗದ 200 ಎಕರೆ ಬಡಾವಣೆಗೆ ರಾಜ್ಯ ಮತ್ತು ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ (ಪರಿಸರ ಇಲಾಖೆ) ನಿರಾಕ್ಷೇಪಣಾ ಪತ್ರ ಪಡೆಯಬೇಕಾಗಿರುತ್ತದೆ. ಸದರಿ ನಿರಾಕ್ಷೇಪಣಾ ಪತ್ರ ಪಡೆಯಲು ಅರ್ಹ ಸಂಸ್ಥೆಗೆ ಟೆಂಡರ್ ಮೂಲಕ ಕಾರ್ಯದೇಶ ನೀಡಬೇಕಾಗಿರುತ್ತದೆ. ಸದರಿ ವಿಷಯದಲ್ಲಿ ಟೆಂಡರ್ ಕರೆಯಲು ಹಾಗೂ ಕಾರ್ಯಾದೇಶ ನೀಡಲು ಸಭೆಗೆ ವಿಷಯವನ್ನು ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರವು ರಚಿಸಲು ಉದ್ದೇಶಿಸಿರುವ ಉಪ್ಪಳ್ಳಿ ಇಂದಾವರ ಗ್ರಾಮದ ವಿವಿದ ಸರ್ವೆ ನಂಬರುಗಳಲ್ಲಿನ 200 ಎಕರೆ ಪ್ರದೇಶದಲ್ಲಿ ನಿರ್ಮಿಸಲಿರುವ ಬಡಾವಣೆಗೆ ರಾಜ್ಯ ಮತ್ತು ರಾಷ್ಟ್ರೀಯ ಮಾಲಿನ್ಯ ಮಂಡಳಿಯಿಂದ (ಪರಿಸರ ಇಲಾಖೆ) ನಿರಾಕ್ಷೇಪಣಾ ಪತ್ರ ಪಡೆಯುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಈ ಬಗ್ಗೆ ಚಿಕ್ಕಮಗಳೂರು ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಯು ಸದರಿ ವಿಷಯದ ಬಗ್ಗೆ ಪೂರ್ಣ ವಿವರಗಳೊಂದಿಗೆ ಪ್ರಾಧಿಕಾರಕ್ಕೆ ವರದಿ ನೀಡಲು ಒಪ್ಪಿದರು ಅದರಂತೆ ಯೋಜನೆ ಸಿದ್ದಪಡಿಸಿ ನಿಯಮಾನುಸಾರ ಟೆಂಡರ್ ಮೂಲಕ ಏಜೆನ್ಸಿ ನೇಮಿಸಿ ಸೂಕ್ತ ಅನುಮತಿ / ನಿರಾಕ್ಷೇಪಣಾ ಪತ್ರ ಪಡೆಯಲು ತೀರ್ಮಾನಿಸಲಾಯಿತು, ಈ ಅನುಮತಿ ಪಡೆಯಲು ಅಗತ್ಯ ಕ್ರಮವಹಿಸಿ ಖರ್ಚು ಭರಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ 10.**

ಚಿಕ್ಕಮಗಳೂರು ನಗರದ ಮಹಾಯೋಜನೆ 2021 (ಪರಿಷ್ಕೃತ –1) ರ (ಅಂತಿಮ) ನಕ್ಷೆಯನ್ನು ದಿನಾಂಕ: 12-04-2010 ರ ಸಭೆಯ ನಿರ್ಣಯದಂತೆ ಮಾರ್ಪಡಿಸಿರುವ ನಕ್ಷೆ ಮತ್ತು ವರದಿಯನ್ನು ಸರ್ಕಾರದ ಅನುಮೋದನೆ ಪಡೆಯಲು ನಕ್ಷೆ ತಯಾರಿಕೆಗೆ ಹಣ ಪಾವತಿಸುವ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ನಗರದ ಮಹಾಯೋಜನೆ 2021 (ಪರಿಷ್ಕೃತ –1) ರ (ಅಂತಿಮ) ನಕ್ಷೆಯನ್ನು ದಿನಾಂಕ: 12-04-2010 ರಲ್ಲಿ ಕೈಗೊಂಡ ನಿರ್ಣಯದಂತೆ ಮಹಾಯೋಜನಾ ನಕ್ಷೆಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಲಾಗಿದ್ದು, ಮಾರ್ಪಾಡು ಮಾಡಲಾದ ನಕ್ಷೆ ಮತ್ತು ವರದಿಯ ನಾಲ್ಕು ಪ್ರತಿಗಳನ್ನು ತಯಾರಿಸಿ ಸಲ್ಲಿಸಿದ್ದರ ಬಾಬ್ತು ರೂ. 103173.00 ಗಳ ಮೊತ್ತಕ್ಕೆ ಮೆ., ವಿಷನ್ ಸಲೂಷನ್ಸ್ ಹುಬ್ಬಳ್ಳಿ ಇವರು ದಿನಾಂಕ: 10-05-2010 ರ ರಲ್ಲಿ ಬಿಲ್ಲನ್ನು ಸಲ್ಲಿಸಿರುತ್ತಾರೆ, ಆದರೆ ನಗರ ಯೋಜನಾ ಸದಸ್ಯರು ಸದರಿ ನಕ್ಷೆ ಮತ್ತು ವರದಿಯ ಬಾಪ್ತು ರೂ. 74473.00 ಗಳನ್ನು ಪಾವತಿಸಬಹುದೆಂದು ತಿಳಿಸಿರುತ್ತಾರೆ. ಆದುದರಿಂದ ಈಗಾಗಲೇ ಪರಿಷ್ಕರಿಸಿರುವ ಮಹಾಯೋಜನೆ 2021 (ಪರಿಷ್ಕೃತ–1) ರ (ಅಂತಿಮ) ನಕ್ಷೆಯನ್ನು ತಯಾರಿಸಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರುವುದರಿಂದ ಸದರಿ ಮೊತ್ತವನ್ನು ಪಾವತಿಸಲು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರದ ಮಹಾಯೋಜನೆ 2021 (ಪರಿಷ್ಕೃತ –1) ರ (ಅಂತಿಮ) ನಕ್ಷೆಯನ್ನು ದಿನಾಂಕ: 12-04-2010 ರ ಸಭೆಯ ನಿರ್ಣಯದಂತೆ ಮಾರ್ಪಡಿಸಿರುವ ನಕ್ಷೆ ಮತ್ತು ವರದಿಯ ನಾಲ್ಕು ಪ್ರತಿಗಳನ್ನು ತಯಾರಿಸಿದ್ದರ ಬಗ್ಗೆ ಮೆ., ವಿಷನ್ ಸಲ್ಯೂಷನ್ಸ್ ಹುಬ್ಬಳ್ಳಿ ರವರು ರೂ. 103173.00 ಗಳಿಗೆ ಬಿಲ್ ಪಾವತಿಸುವಂತೆ ಕೋರಿದ್ದು, ನಗರ ಯೋಜನಾ ಸದಸ್ಯರು ನಕ್ಷೆ ಮತ್ತು ವರದಿಗೆ ಸಂಬಂದಿಸಿದಂತೆ ಮುದ್ರಣಾ ವೆಚ್ಚದ ಬಾಬ್ತು ರೂ 74473.00 ಗಳನ್ನು ಮಾತ್ರ ಪಾವತಿಸಬಹುದೆಂದು ತಿಳಿಸಿರುವಂತೆ ಮೆ., ವಿಷನ್ ಸಲ್ಯೂಷನ್ಸ್ ಹುಬ್ಬಳ್ಳಿ ಸಂಸ್ಥೆಗೆ ಪಾವತಿಸಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ 11.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 53 / 1, 2 ರಲ್ಲಿನ 3103.52 ಚದರ ಮೀಟರ್ ವಿಸ್ತೀರ್ಣದ ಪ್ರದೇಶದಲ್ಲಿನ ಏಕ ನಿವೇಶನ ಅನುಮೋದನೆಯನ್ನು ವಿಭಜಿಸಿ ಬಹುನಿವೇಶನಗಳನ್ನಾಗಿ ವಿಂಗಡಿಸಿ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 53 / 1, 2 ರಲ್ಲಿನ 3103.50 ಚದರ ಮೀಟರ್ ಪ್ರದೇಶಕ್ಕೆ ವಸತಿಗಾಗಿ ಅನ್ಯಕ್ರಾಂತ ಆದೇಶವಾಗಿದ್ದು, ಈ ಕಛೇರಿಯ ಪತ್ರ ಸಂಖ್ಯೆ:ನಅಪ್ರಾಚಿ : ನಯೋಸ : ರೂರೇ : 165 / 16 : 2008 - 09, ದಿನಾಂಕ: 20-04-2009 ರಲ್ಲಿ ಏಕ ನಿವೇಶನ ರೂಪು ರೇಖೆ ನಕ್ಷೆಗೆ ಅನುಮೋದನೆ ನೀಡಲಾಗಿದೆ, ಆದರೆ ಅರ್ಜಿದಾರರು ದಿನಾಂಕ: 13-09-2010 ರಂದು ಅರ್ಜಿ ಸಲ್ಲಿಸಿ ಈಗಾಗಲೇ ಅನುಮೋದನೆ ನೀಡಿರುವ ಏಕ ನಿವೇಶನವನ್ನು ವಿಂಗಡಿಸಿ ಬಹು ನಿವೇಶನಗಳನ್ನಾಗಿ ಮಾಡಿ ಅನುಮೋದಿಸಿಕೊಡಲು ಕೋರಿರುತ್ತಾರೆ, ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡುವ ಸಂಬಂದ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 53 / 1, 2 ರಲ್ಲಿನ 3103.50 ಚದರ ಮೀಟರ್ ಪ್ರದೇಶಕ್ಕೆ ವಸತಿಗಾಗಿ ಅನ್ಯಕ್ರಾಂತ ಆದೇಶವಾಗಿದ್ದು, ಈ ಕಛೇರಿಯ ಪತ್ರ ಸಂಖ್ಯೆ:ನಅಪ್ರಾಚಿ : ನಯೋಸ : ರೂರೇ : 165 / 16 : 2008 - 09, ದಿನಾಂಕ: 20-04-2009 ರಲ್ಲಿ ಏಕ ನಿವೇಶನ ರೂಪು ರೇಖೆ ನಕ್ಷೆಗೆ ಅನುಮೋದನೆ ನೀಡಲಾಗಿದೆ, ಆದರೆ ಅರ್ಜಿದಾರರು ದಿನಾಂಕ: 13-09-2010 ರಂದು ಅರ್ಜಿ ಸಲ್ಲಿಸಿ ಈಗಾಗಲೇ ಅನುಮೋದನೆ ನೀಡಿರುವ ಏಕ ನಿವೇಶನವನ್ನು ವಿಂಗಡಿಸಿ ಬಹು ನಿವೇಶನಗಳನ್ನಾಗಿ ಮಾಡಿ ಅನುಮೋದಿಸಿಕೊಡಲು ಕೋರಿರುತ್ತಾರೆ, ಒಟ್ಟು ವಿಸ್ತೀರ್ಣವು 4000 ಚದರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ಸಿ. ಎ. ಪ್ರದೇಶಗಳ ವಿನಾಯಿತಿ ನೀಡಿ ವಿನ್ಯಾಸ ಅನುಮೋದನೆ ನೀಡಲು ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ಪ್ರಸ್ತಾಪಿಸಿರುತ್ತಾರೆ.

ಸರ್ಕಾರದ ಅಧಿಸೂಚನೆಯಂತೆ ಈ ಬಗ್ಗೆ ಅವಕಾಶವಿದೆ, ಶೇಕಡ 55 ಕ್ಕಿಂತ ಹೆಚ್ಚಿಗೆ ವಸತಿಗೆ ನೀಡುವ ವಿನ್ಯಾಸಕ್ಕೆ ಮಾರುಕಟ್ಟೆ ಬೆಲೆಯನ್ನು ಪಾವ್ತಿಸಿಕೊಳ್ಳಬೇಕಾಗಿದೆ ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದಾಗಿದೆ, ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ತೀರ್ಮಾನ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 53 / 1, 2 ರಲ್ಲಿನ 3103.50 ಚದರ ಮೀಟರ್ ಪ್ರದೇಶಕ್ಕೆ ವಸತಿಗಾಗಿ ಅನ್ಯಕ್ರಾಂತ ಆದೇಶವಾಗಿದ್ದು, ಈ ಕಛೇರಿಯ ಪತ್ರ ಸಂಖ್ಯೆ.ನಅಪ್ರಾಚಿ : ನಯೋಸ : ರೂರೇ : 165 / 16 : 2008 - 09, ದಿನಾಂಕ: 20-04-2009 ರಲ್ಲಿ ಏಕ ನಿವೇಶನ ರೂಪು ರೇಖೆ ನಕ್ಷೆಗೆ ಅನುಮೋದನೆ ನೀಡಲಾಗಿದೆ, ಆದರೆ ಅರ್ಜಿದಾರರು ದಿನಾಂಕ: 13-09-2010 ರಂದು ಅರ್ಜಿ ಸಲ್ಲಿಸಿ ಈಗಾಗಲೇ ಅನುಮೋದನೆ ನೀಡಿರುವ ಏಕ ನಿವೇಶನವನ್ನು ವಿಂಗಡಿಸಿ ಬಹು ನಿವೇಶನಗಳನ್ನಾಗಿ ಮಾಡಿ ಅನುಮೋದಿಸಿಕೊಡಲು ಕೋರಿರುತ್ತಾರೆ, ಒಟ್ಟು ವಿಸ್ತೀರ್ಣವು 4000 ಚದರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ಸಿ. ಎ. ಪ್ರದೇಶಗಳ ವಿನಾಯಿತಿ ನೀಡಿ ವಿನ್ಯಾಸ ಅನುಮೋದನೆ ನೀಡಲು ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ಪ್ರಸ್ತಾಪಿಸಿರುತ್ತಾರೆ, ಸರ್ಕಾರದ ಅಧಿಸೂಚನೆಯಂತೆ ಈ ಬಗ್ಗೆ ಅವಕಾಶವಿದೆ, ಶೇಕಡ 55 ಕ್ಕಿಂತ ಹೆಚ್ಚಿಗೆ ವಸತಿಗೆ ನೀಡುವ ವಿನ್ಯಾಸಕ್ಕೆ ಮಾರುಕಟ್ಟೆ ಬೆಲೆಯನ್ನು ಪಾವ್ತಿಸಿಕೊಳ್ಳಬೇಕಾಗಿದೆ ವಲಯ ನಿಯಮಾನುಸಾರ ಪಾರ್ಕ್ ವಿನಾಯಿತಿ ಶುಲ್ಕವನ್ನು ಪಾವತಿಸಿಕೊಂಡು ಅನುಮೋದನೆ ನೀಡಲು ಸಭೆಯು ತೀರ್ಮಾನಿಸಿತು.

**ವಿಷಯ ನಂ 12.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 178 / 1 ಮತ್ತು 180 / 1 ರಲ್ಲಿನ 01 ಎಕರೆ 20 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಶಾಲಾ ಉದ್ದೇಶಕ್ಕೆ ಭೂ ಪರಿವರ್ತನೆ ಕೋರಿರುವ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 178 / 1 ಮತ್ತು 180 / 1 ರಲ್ಲಿನ 01 ಎಕರೆ 20 ಗುಂಟೆ ಪ್ರದೇಶಕ್ಕೆ ಶಾಲಾ ಉದ್ದೇಶಕ್ಕೆ ಭೂ ಪರಿವರ್ತನೆಗೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ, ಸದರಿ ಪ್ರದೇಶಕ್ಕೆ ಕಡೂರು ಮಂಗಳೂರು ರಾಜ್ಯ ಹೆದ್ದಾರಿ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ, ಸದರಿ ಪ್ರದೇಶವು ಮಹಾಯೋಜನೆಯಂತೆ ಕೃಷಿ ವಲಯದಲ್ಲಿದೆ, ಸದರಿ ಪ್ರದೇಶವು ಕೃಷಿ ವಲಯದಲ್ಲಿದ್ದು ವಲಯ ನಿಯಮಾವಳಿ ಪ್ರಕಾರ ಶಾಲಾ ಉಪಯೋಗಕ್ಕೆ ಅನುಮೋದನೆ ನೀಡಲು ಅವಕಾಶ ಇರುವುದರಿಂದ ವಿಷಯವನ್ನು ಪ್ರಾಧಿಕಾರದ ಸಭೆಯ ಘಟನೋತ್ತರ ಮಂಜೂರಾತಿ ನಿರೀಕ್ಷೆಯ ಮೇರೆಗೆ ದಿನಾಂಕ: 15-07-2010 ರಂದು ಮಾನ್ಯ ಜಿಲ್ಲಾಧಿಕಾರಿಗಳವರಿಗೆ ತಾಂತ್ರಿಕ ವರದಿಯನ್ನು ಸಲ್ಲಿಸಲಾಗಿದ್ದು, ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 178 / 1 ಮತ್ತು 180 / 1 ರಲ್ಲಿನ 01 ಎಕರೆ 20 ಗುಂಟೆ ಪ್ರದೇಶಕ್ಕೆ ಶಾಲಾ ಉದ್ದೇಶಕ್ಕೆ ಭೂ ಪರಿವರ್ತನೆಗೆ ಕೋರಿ ಸಲ್ಲಿಸಿರುವ ಪ್ರದೇಶವು ಕಡೂರು–ಮಂಗಳೂರು ರಾಜ್ಯ ಹೆದ್ದಾರಿ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ, ಸದರಿ ಪ್ರದೇಶವು ಮಹಾಯೋಜನೆಯಂತೆ ಕೃಷಿ ವಲಯದಲ್ಲಿರುವುದರಿಂದ ವಲಯ ನಿಯಮಾವಳಿ ಪ್ರಕಾರ ಶಾಲಾ ಉಪಯೋಗಕ್ಕೆ ಅನುಮೋದನೆ ನೀಡಲು ಅವಕಾಶ ಇರುವುದರಿಂದ ವಲಯ ನಿಯಮಾವಳಿಯನ್ವಯ ಅನುಮೋದಿಸಬಹುದಾಗಿದೆ, ಅದರಂತೆ ಮಾನ್ಯ ಜಿಲ್ಲಾಧಿಕಾರಿಗಳವರಿಗೆ ಸಭೆಯ ಘಟನೋತ್ತರ ಮಂಜೂರಾತಿ ನಿರೀಕ್ಷೆಯ ಮೇರೆಗೆ ತಾಂತ್ರಿಕ ವರದಿಯನ್ನು ಸಲ್ಲಿಸಲಾಗಿದೆ, ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 178 / 1 ಮತ್ತು 180 / 1 ರಲ್ಲಿನ 01 ಎಕರೆ 20 ಗುಂಟೆ ಪ್ರದೇಶಕ್ಕೆ ಶಾಲಾ ಉದ್ದೇಶಕ್ಕೆ ಭೂ ಪರಿವರ್ತನೆಗೆ ಕೋರಿ ಸಲ್ಲಿಸಿರುವ ಪ್ರದೇಶವು ಕಡೂರು–ಮಂಗಳೂರು ರಾಜ್ಯ ಹೆದ್ದಾರಿ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ, ಸದರಿ ಪ್ರದೇಶವು ಮಹಾಯೋಜನೆಯಂತೆ ಕೃಷಿ ವಲಯದಲ್ಲಿರುವುದರಿಂದ ವಲಯ ನಿಯಮಾವಳಿ ಪ್ರಕಾರ ಶಾಲಾ ಉಪಯೋಗಕ್ಕೆ ಅನುಮೋದನೆ ನೀಡಲು ಅವಕಾಶ ಇರುವುದರಿಂದ ವಲಯ ನಿಯಮಾವಳಿಯನ್ವಯ ಅನುಮೋದಿಸಬಹುದಾಗಿದೆ, ಆದರಂತೆ ಮಾನ್ಯ ಜಿಲ್ಲಾಧಿಕಾರಿಗಳವರಿಗೆ ಈಗಾಗಲೇ ವರದಿ ಸಲ್ಲಿಸಿರುವುದರಿಂದ ಸಭೆಯ ಘಟನೋತ್ತರ ಅನುಮೋದನೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ 13.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 114 / 2 ರಲ್ಲಿನ 00 ಎಕರೆ 28¾ ಗುಂಟೆ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ನೀಡಲು ಕೋರಿ ಶ್ರೀ ಶಂಕರ ಶೆಟ್ಟಿ ಕೆ. ಬಿನ್ ಶ್ರೀ ಕರಿಶೆಟ್ಟಿ, ವಿಜಯಪುರ, ಚಿಕ್ಕಮಗಳೂರು ರವರು ಕೋರಿರುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 114 / 2 ರಲ್ಲಿನ 00 ಎಕರೆ 28¾ ಗುಂಟೆ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ನೀಡಲು ಕೋರಿರುವ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್ಎನ್ : ಸಿಆರ್ : 14 : 2009 - 10, ದಿನಾಂಕ: 16-04-2010 ರಂತೆ 00 ಎಕರೆ 28¾ ಗುಂಟೆ ಪ್ರದೇಶವು ವಸತಿಗೆ ಭೂ ಪರಿವರ್ತನೆ ಹೊಂದಿದೆ, ಅರ್ಜಿದಾರರು ಬಹು ನಿವೇಶನ ವಿನ್ಯಾಸ ಅನುಮೋದನೆ ಕೋರಿರುತ್ತಾರೆ ಆದುದರಿಂದ ಸದರಿ ರೂಪ ರೇಖಾ ವಿನ್ಯಾಸ ನಕ್ಷೆಯನ್ನು ಅನುಮೋದನೆ ನೀಡುವ ಸಂಬಂದ ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 114 / 2 ರಲ್ಲಿನ 00 ಎಕರೆ 28¾ ಗುಂಟೆ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್ಎನ್ : ಸಿಆರ್ : 14 : 2009 - 10, ದಿನಾಂಕ: 16-04-2010 ರಂತೆ ವಸತಿಗೆ ಭೂ ಪರಿವರ್ತನೆ ಹೊಂದಿದೆ, ಸದರಿ ಪ್ರದೇಶಕ್ಕೆ ಸಾರ್ವಜನಿಕ ರಸ್ತೆ ಸಂಪರ್ಕ ಇರುತ್ತದೆ. ಅರ್ಜಿದಾರರು ಬಹುನಿವೇಶನ ವಿನ್ಯಾಸ ಅನುಮೋದನೆ ಕೋರಿದ್ದು ಒಟ್ಟು ವಿಸ್ತೀರ್ಣವು 4000 ಚದರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ಸಿ. ಎ. ಪ್ರದೇಶಗಳ ವಿನಾಯಿತಿ ನೀಡಿ ವಿನ್ಯಾಸ ಅನುಮೋದನೆ ನೀಡಲು ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ಪ್ರಸ್ತಾಪಿಸಿರುತ್ತಾರೆ, ಸರ್ಕಾರದ ಅಧಿಸೂಚನೆಯಂತೆ ಈ ಬಗ್ಗೆ ಅವಕಾಶವಿದೆ, ಶೇಕಡ 55 ಕ್ಕಿಂತ ಹೆಚ್ಚಿಗೆ ವಸತಿಗೆ ನೀಡುವ ವಿನ್ಯಾಸಕ್ಕೆ ಮಾರುಕಟ್ಟೆ ಬೆಲೆಯನ್ನು ಪಾವತಿಸಿಕೊಳ್ಳಬೇಕಾಗಿದೆ ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದಾಗಿದೆ, ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿಷಯ ನಂ 14.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 114 / 2 ಮತ್ತು 116 / 2 ರಲ್ಲಿನ 00 ಎಕರೆ 28¾ ಗುಂಟೆ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ನೀಡಲು ಕೋರಿ ಶ್ರೀ ಗುರುಮೂರ್ತಿ ಕೆ. ಬಿನ್ ಶ್ರೀ ಕರಿಶೆಟ್ಟಿ, ವಿಜಯಪುರ, ಚಿಕ್ಕಮಗಳೂರು ರವರು ಕೋರಿರುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 114 / 2 ಮತ್ತು 116 / 2 ರಲ್ಲಿನ 00 ಎಕರೆ 28¾ ಗುಂಟೆ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ನೀಡಲು ಕೋರಿರುವ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್ಎನ್ : ಸಿಆರ್ : 12 : 2009 - 10, ದಿನಾಂಕ: 29-03-2010 ರಂತೆ 00 ಎಕರೆ 28¾ ಗುಂಟೆ ಪ್ರದೇಶವು ವಸತಿಗೆ ಭೂ ಪರಿವರ್ತನೆ ಹೊಂದಿದೆ, ಅರ್ಜಿದಾರರು ಬಹು ನಿವೇಶನ ವಿನ್ಯಾಸ ಅನುಮೋದನೆ ಕೋರಿರುತ್ತಾರೆ ಆದುದರಿಂದ ಸದರಿ ರೂಪ ರೇಖಾ ವಿನ್ಯಾಸ ನಕ್ಷೆಯನ್ನು ಅನುಮೋದನೆ ನೀಡುವ ಸಂಬಂದ ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 114 / 2 ಮತ್ತು 116 / 2 ರಲ್ಲಿನ 00 ಎಕರೆ 28¾ ಗುಂಟೆ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ನೀಡಲು ಕೋರಿರುವ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್ಎನ್ : ಸಿಆರ್ : 12 : 2009 - 10, ದಿನಾಂಕ: 29-03-2010 ರಂತೆ ವಸತಿಗೆ ಭೂ ಪರಿವರ್ತನೆ ಹೊಂದಿದೆ, ಸದರಿ ಪ್ರದೇಶಕ್ಕೆ ಸಾರ್ವಜನಿಕ ರಸ್ತೆ ಸಂಪರ್ಕ ಇರುತ್ತದೆ, ಅರ್ಜಿದಾರರು ಬಹುನಿವೇಶನ ವಿನ್ಯಾಸ ಅನುಮೋದನೆ ಕೋರಿದ್ದು ಒಟ್ಟು ವಿಸ್ತೀರ್ಣವು 4000 ಚದರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ಸಿ. ಎ. ಪ್ರದೇಶಗಳ ವಿನಾಯಿತಿ ನೀಡಿ ವಿನ್ಯಾಸ ಅನುಮೋದನೆ ನೀಡಲು ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ಪ್ರಸ್ತಾಪಿಸಿರುತ್ತಾರೆ, ಸರ್ಕಾರದ ಅಧಿಸೂಚನೆಯಂತೆ ಈ ಬಗ್ಗೆ ಅವಕಾಶವಿದೆ, ಶೇಕಡ 55 ಕ್ಕಂತ ಹೆಚ್ಚಿಗೆ ವಸತಿಗೆ ನೀಡುವ ವಿನ್ಯಾಸಕ್ಕೆ ಮಾರುಕಟ್ಟೆ ಬೆಲೆಯನ್ನು ಪಾವತಿಸಿಕೊಳ್ಳಬೇಕಾಗಿದೆ ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದಾಗಿದೆ, ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿಷಯ ನಂ 15.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 114 / 2 ರಲ್ಲಿನ 00 ಎಕರೆ 28¾ ಗುಂಟೆ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ನೀಡಲು ಕೋರಿ ಶ್ರೀ ಶ್ರೀನಿವಾಸ ಕೆ. ಬಿನ್ ಶ್ರೀ ಕರಿಶೆಟ್ಟಿ, ವಿಜಯಪುರ, ಚಿಕ್ಕಮಗಳೂರು ರವರು ಕೋರಿರುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 114 / 2 ರಲ್ಲಿನ 00 ಎಕರೆ 28¾ ಗುಂಟೆ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ನೀಡಲು ಕೋರಿರುವ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್ಎನ್ : ಸಿಆರ್ : 11 : 2009 - 10, ದಿನಾಂಕ: 29-03-2010 ರಂತೆ 00 ಎಕರೆ 28¾ ಗುಂಟೆ ಪ್ರದೇಶವು ವಸತಿಗೆ ಭೂ ಪರಿವರ್ತನೆ ಹೊಂದಿದೆ, ಅರ್ಜಿದಾರರು ಬಹು ನಿವೇಶನ ವಿನ್ಯಾಸ ಅನುಮೋದನೆ ಕೋರಿರುತ್ತಾರೆ ಆದುದರಿಂದ ಸದರಿ ರೂಪ ರೇಖಾ ವಿನ್ಯಾಸ ನಕ್ಷೆಯನ್ನು ಅನುಮೋದನೆ ನೀಡುವ ಸಂಬಂದ ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 114 / 2 ರಲ್ಲಿನ 00 ಎಕರೆ 28¾ ಗುಂಟೆ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್ಎನ್ : ಸಿಆರ್ : 11 : 2009 - 10, ದಿನಾಂಕ: 29-03-2010 ರಂತೆ ವಸತಿಗೆ ಭೂ ಪರಿವರ್ತನೆ ಹೊಂದಿದೆ, ಸದರಿ ಪ್ರದೇಶಕ್ಕೆ ಸಾರ್ವಜನಿಕ ರಸ್ತೆ ಸಂಪರ್ಕ ಇರುತ್ತದೆ.

ಅರ್ಜಿದಾರರು ಬಹುನಿವೇಶನ ವಿನ್ಯಾಸ ಅನುಮೋದನೆ ಕೋರಿದ್ದು ಒಟ್ಟು ವಿಸ್ತೀರ್ಣವು 4000 ಚದರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ಸಿ. ಎ. ಪ್ರದೇಶಗಳ ವಿನಾಯಿತಿ ನೀಡಿ ವಿನ್ಯಾಸ ಅನುಮೋದನೆ ನೀಡಲು ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ಪ್ರಸ್ತಾಪಿಸಿರುತ್ತಾರೆ, ಸರ್ಕಾರದ ಅಧಿಸೂಚನೆಯಂತೆ ಈ ಬಗ್ಗೆ ಅವಕಾಶವಿದೆ, ಶೇಕಡ 55 ಕ್ಕಿಂತ ಹೆಚ್ಚಿಗೆ ವಸತಿಗೆ ನೀಡುವ ವಿನ್ಯಾಸಕ್ಕೆ ಮಾರುಕಟ್ಟೆ ಬೆಲೆಯನ್ನು ಪಾವ್ತಿಸಿಕೊಳ್ಳಬೇಕಾಗಿದೆ ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದಾಗಿದೆ, ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ತೀರ್ಮಾನ :**

ವಿಷಯ ಸಂಖ್ಯೆ. 13, 14 ಮತ್ತು 15 ರ ಬಗ್ಗೆ ಚರ್ಚಿಸಲಾಯಿತು, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 114 / 2 ರಲ್ಲಿನ 00 ಎಕರೆ 28¾ ಗುಂಟೆ ಪ್ರದೇಶ, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 114 / 2 ಮತ್ತು 116 / 2 ರಲ್ಲಿನ 00 ಎಕರೆ 28¾ ಗುಂಟೆ ಪ್ರದೇಶ, ಮತ್ತು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 114 / 2 ರಲ್ಲಿನ 00 ಎಕರೆ 28¾ ಗುಂಟೆ ಪ್ರದೇಶಗಳು ಸೇರಿದಂತೆ ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳವರಿಂದ ವಸತಿಗೆ ಭೂ ಪರಿವರ್ತನೆ ಹೊಂದಿದೆ, ಸದರಿ ಪ್ರದೇಶಕ್ಕೆ ಸಾರ್ವಜನಿಕ ರಸ್ತೆ ಸಂಪರ್ಕ ಇರುತ್ತದೆ, ಅರ್ಜಿದಾರರು ಬಹುನಿವೇಶನ ವಿನ್ಯಾಸ ಅನುಮೋದನೆ ಕೋರಿದ್ದು ಒಟ್ಟು ವಿಸ್ತೀರ್ಣವು 4000 ಚದರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ಸಿ. ಎ. ಪ್ರದೇಶಗಳ ವಿನಾಯಿತಿ ನೀಡಿ ವಿನ್ಯಾಸ ಅನುಮೋದನೆ ನೀಡಲು ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ಪ್ರಸ್ತಾಪಿಸಿರುತ್ತಾರೆ, ಸರ್ಕಾರದ ಅಧಿಸೂಚನೆಯಂತೆ ಈ ಬಗ್ಗೆ ಅವಕಾಶವಿದೆ, ಶೇಕಡ 55 ಕ್ಕಿಂತ ಹೆಚ್ಚಿಗೆ ವಸತಿಗೆ ನೀಡುವ ವಿನ್ಯಾಸಕ್ಕೆ ಮಾರುಕಟ್ಟೆ ಬೆಲೆಯನ್ನು ಪಾವ್ತಿಸಿಕೊಳ್ಳಬೇಕಾಗಿದೆ ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದೆಂದು ನಗರ ಯೋಜನಾ ಸದಸ್ಯರು ಅಭಿಪ್ರಾಯ ನೀಡಿರುತ್ತಾರೆ, ಎಂದು ಆಯುಕ್ತರು ತಿಳಿಸಿದರು ಈ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಈ ಹಿಂದಿನ ಸಭೆಯಲ್ಲಿ ಒಂದೇ ಸರ್ವೆ ನಂಬರ್‌ನ ಭೂಮಿಯನ್ನು ವಿಭಜಿಸಿ ಅನ್ಯಕ್ರಾಂತವಾಗಿದ್ದರೂ ಸಾರ್ವಜನಿಕರ ಹಿತ ದೃಷ್ಟಿಯಿಂದ ಪ್ರತ್ಯೇಕವಾಗಿ ಲೇಔಟ್ ಅನುಮೋದನೆ ನೀಡಬಾರದೆಂದು ತೀರ್ಮಾನಿಸಲಾಗಿರುವ ಬಗ್ಗೆಯೂ ಚರ್ಚಿಸಲಾಯಿತು, ನಗರ ಯೋಜನಾ ಸದಸ್ಯರು ನಿಯಮಾನುಸಾರ ಅನುಮೋದನೆ ನೀಡಲು ಅವಕಾಶವಿದೆ ಎಂದು ತಿಳಿಸಿದರು, ಆಯುಕ್ತರು ಮಾತನಾಡಿ ಕಂದಾಯ ಇಲಾಖೆಯು ಈಗಾಗಲೇ ವಿಭಜಿಸಿ ಅನ್ಯಕ್ರಾಂತ ಮಾಡಿರುವುದನ್ನು ಪ್ರಾಧಿಕಾರ ತಿರಸ್ಕರಿಸಲು ಕಾನೂನಿನಲ್ಲಿ ಅವಕಾಶವಿಲ್ಲ ಆದ್ದರಿಂದ ಅನುಮೋದನೆ ನೀಡಬಹುದು ಎಂದು ತಿಳಿಸಿದರು, ವಿಷಯದ ಬಗ್ಗೆ ದೀರ್ಘ ಚರ್ಚೆಯ ನಂತರ ಸದರಿ ಪ್ರಕರಣಗಳು ನಿಯಮಾನುಸಾರ ಇರುವುದರಿಂದ ಅಗತ್ಯ ಶುಲ್ಕ ಪಾವತಿಸಿಕೊಂಡು ಅನುಮೋದನೆ ನೀಡಲು ತೀರ್ಮಾನಿಸಿತು, ಈ ಹಿಂದೆ ಇದೇ ರೀತಿಯ ವಿಷಯಗಳಲ್ಲಿ ತಡೆ ಹಿಡಿದಿರುವ ಪ್ರಕರಣಗಳಲ್ಲೂ ಸಹ ತಡೆ ತೆರವುಗೊಳಿಸಿ ಅನುಮೋದನೆ ನೀಡಲು ಸಭೆಯು ತೀರ್ಮಾನಿಸಿತು.

**ವಿಷಯ ನಂ 16.**

ಶ್ರೀ ಎಂ. ಪ್ರಕಾಶ್ ಕುಮಾರ್, ಟಿ. ಡಿ. ಸತ್ಯನ್, ಶ್ರೀ ಎಸ್. ಎಲ್. ಬೋಜೇಗೌಡ, ಇವರು ಬೀಕನಹಳ್ಳಿ ಗ್ರಾಮದ ಸರ್ವೆ ನಂ. 35 / 2A, 35 / 2B, 35 / 2C ಮತ್ತು 35 / 2E ರಲ್ಲಿನ 6 ಎಕರೆ 03 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಣಿಜ್ಯ ವಿನ್ಯಾಸ ಕರಡು ಅನುಮೋದನೆಗೊಂಡಿದ್ದು ಸದರಿ ಪ್ರದೇಶದಲ್ಲಿ ವಾಣಿಜ್ಯ ಕರಡು ವಿನ್ಯಾಸ ನಕ್ಷೆ ರದ್ದುಪಡಿಸಿ, ವಸತಿ ಉದ್ದೇಶಕ್ಕೆ ವಿನ್ಯಾಸ ನಕ್ಷೆ ಅನುಮೋದನೆಗೆ ಕೋರಿರುವ ಬಗ್ಗೆ.

**ಟಿಪ್ಪಣಿ:**

ಸದರಿ ಪ್ರದೇಶ ಒಟ್ಟು 6 ಎಕರೆ 04 ಗುಂಟೆ ಪ್ರದೇಶಕ್ಕೆ ಪ್ರಾಧಿಕಾರದ ಸಭೆ ದಿನಾಂಕ: 04-02-2000 ವಿಷಯ ಸಂಖ್ಯೆ 8 ರಂತೆ ತೀರ್ಮಾನಿಸಿದೆ, ವಾಣಿಜ್ಯ ಉದ್ದೇಶಕ್ಕೆ ಕರಡು ವಿನ್ಯಾಸ ನಕ್ಷೆ ಅನುಮೋದನೆ ಆಗಿರುತ್ತದೆ. ಸದರಿ ವಿನ್ಯಾಸ ನಕ್ಷೆಯನ್ನು ರದ್ದುಪಡಿಸಿ ವಸತಿ ಉದ್ದೇಶಕ್ಕೆ ವಿನ್ಯಾಸ ನಕ್ಷೆ ಅನುಮೋದನೆ ಕೋರಿರುತ್ತಾರೆ.

ಆದರೆ ದಿನಾಂಕ: 07-07-2010 ರ ಪ್ರಾಧಿಕಾರದ ಸಭೆಯ ನಿರ್ಣಯದಂತೆ ಶ್ರೀ ಎಂ. ಪ್ರಕಾಶ್ ಕುಮಾರ್, ಶ್ರೀ ಟಿ. ಡಿ. ಸತ್ಯನ್, ಶ್ರೀ ಎಸ್. ಎಲ್. ಬೋಜೇಗೌಡ ಇವರು ಬೀಕನಹಳ್ಳಿ ಗ್ರಾಮದ ಸರ್ವೆ ನಂ. 35 / 2A, 35 / 2B, 35 / 2C ಮತ್ತು 35 / 2E ರಲ್ಲಿನ 06 ಎಕರೆ 03 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಣಿಜ್ಯ ವಿನ್ಯಾಸ ಕರಡು ಅನುಮೋದನೆಯಾಗಿದ್ದ ವಿನ್ಯಾಸ ನಕ್ಷೆಯನ್ನು ವಸತಿ ಉದ್ದೇಶಕ್ಕೆ ಅನುಮೋದನೆ ಕೋರಿದ್ದ ಬಗ್ಗೆ ನಗರ ಯೋಜನಾ ಸದಸ್ಯರ ಅಭಿಪ್ರಾಯದಂತೆ ಹಾಲೀ ಭೂಮಾಲೀಕರುಗಳಿಂದ ಸದರೀ ಭೂ ಪ್ರದೇಶವನ್ನು ಯಾರಿಗೂ ಮಾರಾಟ ಮಾಡಿರುವುದಿಲ್ಲ ಎಂಬ ಬಗ್ಗೆ ನಿರಾಕ್ಷೇಪಣಾ ಪತ್ರ, ಹಾಗೂ ಇ.ಸಿ. ಪಡೆಯಲು ಹಾಗೂ ವಾಣಿಜ್ಯ ವಲಯದಿಂದ ನಿಯಮಾನುಸಾರ ವಸತಿ ವಲಯಕ್ಕೆ ಭೂ ಬದಲಾವಣೆ ಮಾಡಿ ನಂತರ ಈ ಬಗ್ಗೆ ಅಗತ್ಯ ಅನುಮೋದನೆಗೆ ಮಂಡಿಸಲು ತೀರ್ಮಾನಿಸಲಾಗಿತ್ತು. ಆದರಂತೆ ಅರ್ಜಿದಾರರು ನೋಂದಣಾಧಿಕಾರಿಗಳಿಂದ ಪಡೆದಿರುವ ಇಲ್ಲಿಯವರೆಗಿನ ಇ. ಸಿ. ಮತ್ತು ಖಾತೆ ಮಾಡದಿರುವ ಬಗ್ಗೆ ನಗರಸಭೆಯಿಂದ ದೃಡೀಕರಣ ಪತ್ರ ಹಾಗೂ ವಲಯ ನಿಯಮಾವಳಿಯನ್ವಯ ನಕ್ಷೆಯನ್ನು ತಯಾರಿಸಿ ಸಲ್ಲಿಸಿರುತ್ತಾರೆ, ಸದರಿ ವಿನ್ಯಾಸ ನಕ್ಷೆಯನ್ನು ಅನುಮೋದನೆ ನೀಡುವ ಸಂಬಂದ ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ದಿನಾಂಕ: 07-07-2010 ರ ಪ್ರಾಧಿಕಾರದ ಸಭೆಯ ನಿರ್ಣಯದಂತೆ ಬೀಕನಹಳ್ಳಿ ಗ್ರಾಮದ ಸರ್ವೆ ನಂ. 35 / 2A, 35 / 2B, 35 / 2C ಮತ್ತು 35 / 2E ರಲ್ಲಿನ 06 ಎಕರೆ 03 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಹಾಲೀ ಭೂಮಾಲೀಕರುಗಳಿಂದ ಸದರೀ ಭೂ ಪ್ರದೇಶವನ್ನು ಯಾರಿಗೂ ಮಾರಾಟ ಮಾಡಿರುವುದಿಲ್ಲ ಎಂಬ ಬಗ್ಗೆ ನಿರಾಕ್ಷೇಪಣಾ ಪತ್ರ, ಹಾಗೂ ಇ.ಸಿ. ಪಡೆದು ಸಲ್ಲಿಸಲು ತಿಳಿಸಲಾಗಿತ್ತು. ಆದರಂತೆ ಅರ್ಜಿದಾರರು ನಿವೇಶನಗಳು ಮಾರಾಟವಾಗಿರದ ಬಗ್ಗೆ ನೋಂದಣಾದಿಕಾರಿಗಳಿಂದ ಪಡೆದಿರುವ ಇಲ್ಲಿಯವರೆಗಿನ ಇ. ಸಿ. ಮತ್ತು ಖಾತೆ ಮಾಡದಿರುವ ಬಗ್ಗೆ ನಗರಸಭೆಯಿಂದ ದೃಡೀಕರಣ ಪತ್ರ ಸಲ್ಲಿಸಿರುತ್ತಾರೆ. ವಾಣಿಜ್ಯ ವಿನ್ಯಾಸವನ್ನು ಮಹಾಯೋಜನೆಯಲ್ಲಿನ ರಸ್ತೆ ಪರಿಚಲನೆಯನ್ನು ಅನುಸರಿಸಿ ವಸತಿ ವಿನ್ಯಾಸಕ್ಕಾಗಿ ಮಾರ್ಪಡಿಸಿ ಸಲ್ಲಿಸಿರುತ್ತಾರೆ, ಹಾಗೂ ಈಗಾಗಲೇ 13-09-2000 ರಲ್ಲಿ ನೋಂದಾಯಿತ ಪತ್ರ ಮುಖೇನ ಪ್ರಾಧಿಕಾರಕ್ಕೆ ವಾಣಿಜ್ಯ ವಿನ್ಯಾಸದಲ್ಲಿನ ರಸ್ತೆ, ಉದ್ಯಾನವನ ಹಾಗೂ ವಾಹನ ನಿಲುಗಡೆಯ ಪ್ರದೇಶಗಳನ್ನು ವಹಿಸಿಕೊಟ್ಟಿರುತ್ತಾರೆ, ಆದರೆ ಈಗ ಪರಿಷ್ಕರಿಸಿದ ವಿನ್ಯಾಸದ ಬಡಾವಣೆಯಲ್ಲಿನ ರಸ್ತೆ, ಉದ್ಯಾನವನ ಪ್ರದೇಶ ಹಾಗೂ ನಾಗರೀಕ ಸೌಕರ್ಯದ ಪ್ರದೇಶ ಪ್ರಸ್ತಾಪಿಸಿದ್ದು, ಇವುಗಳನ್ನು ಪ್ರಾಧಿಕಾರಕ್ಕೆ ವಹಿಸಿಕೊಡಬೇಕಾಗಿರುತ್ತದೆ, ಈ ಹಿಂದೆ ದಿನಾಂಕ: 13-09-2000 ಕ್ಕೆ ನೋಂದಾಯಿತವಾಗಿರುವ ಪರಿತ್ಯಜನಾ ಪತ್ರವನ್ನು ಪರಿಷ್ಕರಿಸಬೇಕಾಗಿದ್ದು ಈ ಬಗ್ಗೆ ನಿರ್ಣಯಿಸಬೇಕಾಗಿರುತ್ತದೆ, ದಿನಾಂಕ: 13-09-2000 ರಲ್ಲಿ ನೋಂದಾಯಿಸಿದ ಪರಿತ್ಯಜನಾ ಪತ್ರ ಪರಿಷ್ಕರಿಸಿ ಹೊಸದಾದ ವಸತಿ ವಿನ್ಯಾಸದ ರಸ್ತೆ, ಉದ್ಯಾನವನ, ನಾಗರೀಕ ಸೌಲಭ್ಯದ ಪ್ರದೇಶಗಳನ್ನು ಪರಿತ್ಯಜನಾ ಪತ್ರದ ಮುಖಾಂತರ ಪ್ರಾಧಿಕಾರಕ್ಕೆ ವಹಿಸಿಕೊಳ್ಳಲು ಪ್ರಾಧಿಕಾರವು ನಿರ್ಣಯಿಸಿದಲ್ಲಿ ನಿಯಮಾವಳಿ ಪ್ರಕಾರ ನಿಗದಿತ ಶುಲ್ಕವನ್ನು ಪಾವತಿಸಿಕೊಂಡು ಪರಿಷ್ಕೃತ ವಸತಿ ವಿನ್ಯಾಸಕ್ಕೆ ಅನುಮೋದನೆ ನೀಡಬಹುದಾಗಿದೆ ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ದಿನಾಂಕ: 07-07-2010 ರ ಪ್ರಾಧಿಕಾರದ ಸಭೆಯ ನಿರ್ಣಯದಂತೆ ಬೀಕನಹಳ್ಳಿ ಗ್ರಾಮದ ಸರ್ವೆ ನಂ. 35 / 2A, 35 / 2B, 35 / 2C ಮತ್ತು 35 / 2E ರಲ್ಲಿನ 06 ಎಕರೆ 03 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಹಾಲೀ ಭೂಮಾಲೀಕರುಗಳಿಂದ ಸದರೀ ಭೂ ಪ್ರದೇಶವನ್ನು ಯಾರಿಗೂ ಮಾರಾಟ ಮಾಡಿರುವುದಿಲ್ಲ ಎಂಬ ಬಗ್ಗೆ ನಿರಾಕ್ಷೇಪಣಾ ಪತ್ರ, ಹಾಗೂ ಇ.ಸಿ. ಪಡೆದು ಸಲ್ಲಿಸಲು ತಿಳಿಸಲಾಗಿತ್ತು. ಆದರಂತೆ ಅರ್ಜಿದಾರರು ನಿವೇಶನಗಳು ಮಾರಾಟವಾಗಿರದ ಬಗ್ಗೆ ನೋಂದಣಾದಿಕಾರಿಗಳಿಂದ ಪಡೆದಿರುವ ಇಲ್ಲಿಯವರೆಗಿನ ಇ. ಸಿ. ಮತ್ತು ಖಾತೆ ಮಾಡದಿರುವ ಬಗ್ಗೆ ನಗರಸಭೆಯಿಂದ ದೃಡೀಕರಣ ಪತ್ರ ಸಲ್ಲಿಸಿರುತ್ತಾರೆ. ವಾಣಿಜ್ಯ ವಿನ್ಯಾಸವನ್ನು ಮಹಾಯೋಜನೆಯಲ್ಲಿನ ರಸ್ತೆ ಪರಿಚಲನೆಯನ್ನು ಅನುಸರಿಸಿ ವಸತಿ ವಿನ್ಯಾಸಕ್ಕಾಗಿ ಮಾರ್ಪಡಿಸಿ ಸಲ್ಲಿಸಿರುತ್ತಾರೆ, ಹಾಗೂ ಈಗಾಗಲೇ 13-09-2000 ರಲ್ಲಿ ನೋಂದಾಯಿತ ಪತ್ರ ಮುಖೇನ ಪ್ರಾಧಿಕಾರಕ್ಕೆ ವಾಣಿಜ್ಯ ವಿನ್ಯಾಸದಲ್ಲಿನ ರಸ್ತೆ, ಉದ್ಯಾನವನ ಹಾಗೂ ವಾಹನ ನಿಲುಗಡೆಯ ಪ್ರದೇಶಗಳನ್ನು ವಹಿಸಿಕೊಟ್ಟಿರುತ್ತಾರೆ.

ಈ ಹಿಂದೆ ದಿನಾಂಕ: 13-09-2000 ಕ್ಕೆ ನೋಂದಾಯಿತವಾಗಿರುವ ನಿವೇಶನ, ರಸ್ತೆ ಹಾಗೂ ಉದ್ಯಾನವನ ಪ್ರದೇಶ ಉಳಿಸಿಕೊಂಡು ಹೆಚ್ಚುವರಿಯಾಗಿ ನಿಗದಿಪಡಿಸುವ ರಸ್ತೆ, ನಾಗರೀಕ ಸೌಲಭ್ಯದ ನಿವೇಶನ ಹಾಗೂ ಉದ್ಯಾನವನದ ಪ್ರದೇಶವನ್ನು ಪ್ರಾಧಿಕಾರಕ್ಕೆ ನೋಂದಣಿ ಮಾಡಿಸಿ ನಿಯಮಾನುಸಾರ ಅನುಮೋದನೆ ನೀಡಬಹುದೆಂದು ಸಭೆ ತೀರ್ಮಾನಿಸಿತು.

**ವಿಷಯ ನಂ 17.**

ಮಾನ್ಯ ನಗರಾಭಿವೃದ್ಧಿ ಸಚಿವರ ಸೂಚನೆ ಮೇರೆಗೆ ಪ್ರಾಧಿಕಾರದ ಸಾಧನೆ ಮತ್ತು ಮುಂದಿನ ಯೋಜನೆಗಳ ಬಗ್ಗೆ ಸರ್ಕಾರಕ್ಕೆ ವರದಿ ಮಾಡುವ ಬಗ್ಗೆ.

**ಟಿಪ್ಪಣಿ :**

ದಿನಾಂಕ: 24-08-2010 ರಂದು ಸನ್ಮಾನ್ಯ ನಗರಾಭಿವೃದ್ಧಿ ಸಚಿವರು ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ರಾಜ್ಯದ ಕೆಲವು ನಗರಭಿವೃದ್ಧಿ ಪ್ರಾಧಿಕಾರಗಳು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಅಸಮರ್ಥವಾಗಿದ್ದು ಅವುಗಳನ್ನು ರದ್ದುಪಡಿಸಲು ಯೋಜಿಸಲಾಗಿದೆ ಎಂದು ತಿಳಿಸಿದರು ಇದಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರದ ಇದುವರೆಗೆ ಕೈಗೊಂಡಿರುವ ಕಾರ್ಯಕ್ರಮಗಳು, ಆರ್ಥಿಕ ಪರಿಸ್ಥಿತಿ, ಈಗ ಪ್ರಸ್ತುತ ಚಾಲನೆಯಲ್ಲಿರುವ ಕಾರ್ಯಕ್ರಮಗಳು, ಹಾಗೂ ಮುಂದಿನ ವರ್ಷಗಳಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾರ್ಯಕ್ರಮಗಳು ಮತ್ತು ಆರ್ಥಿಕ ಸ್ವಾವಲಂಭನೆಯ ಬಗ್ಗೆ ಪ್ರಾಧಿಕಾರದಲ್ಲಿ ವಿಷಯವನ್ನು ಮಂಡಿಸಿ ಸೂಕ್ತ ನಿರ್ಣಯವನ್ನು ಮಾಡಿ ಸಲ್ಲಿಸಲು ಸೂಚಿಸಿರುತ್ತಾರೆ. ನಿರ್ಣಯದ ಆದಾರದಲ್ಲಿ ಸದರಿ ಪ್ರಾಧಿಕಾರವನ್ನು ರದ್ದುಗೊಳಿಸುವ ಅಥವಾ ಮುಂದುವರೆಸುವ ಕ್ರಮ ಕೈಗೊಳ್ಳಬೇಕಾಗಿರುತ್ತದೆ ಎಂದು ಸೂಚಿಸಿರುತ್ತಾರೆ. ಸದರಿ ವಿಷಯದ ಬಗ್ಗೆ ಪ್ರಾಧಿಕಾರದ ಇದುವರೆಗಿನ ಸಾದನೆ, ಈಗ ಚಾಲನೆಯಲ್ಲಿರುವ ಕಾರ್ಯಕ್ರಮಗಳು ಹಾಗೂ ಮುಂದಿನ ವರ್ಷಗಳಿಗೆ ರೂಪಿಸಲು ಉದ್ದೇಶಿಸಿರುವ ಯೋಜನೆಗಳ ಸಂಕ್ಷಿಪ್ತ ವಿವರಗಳನ್ನು ಸಭೆಗೆ ಮಂಡಿಸಲಾಗುತ್ತಿದೆ. ಈ ಬಗ್ಗೆ ಚರ್ಚಿಸಿ ಸಭೆಯಲ್ಲಿ ನಿರ್ಣಯ ಕೈಗೊಂಡು ಸರ್ಕಾರಕ್ಕೆ ಕಳುಹಿಸಿಕೊಡಬೇಕಾಗಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ದಿನಾಂಕ: 24-08-2010 ರಂದು ಸನ್ಮಾನ್ಯ ನಗರಾಭಿವೃದ್ಧಿ ಸಚಿವರು ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ರಾಜ್ಯದ ಕೆಲವು ನಗರಾಭಿವೃದ್ಧಿ ಪ್ರಾಧಿಕಾರಗಳು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಅಸಮರ್ಥವಾಗಿದ್ದು ಅವುಗಳನ್ನು ರದ್ದುಪಡಿಸಲು ಯೋಜಿಸಲಾಗಿದೆ ಎಂದು ತಿಳಿಸಿದರು ಇದಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರದ ಇದುವರೆಗೆ ಕೈಗೊಂಡಿರುವ ಕಾರ್ಯಕ್ರಮಗಳು, ಆರ್ಥಿಕ ಪರಿಸ್ಥಿತಿ, ಈಗ ಪ್ರಸ್ತುತ ಚಾಲನೆಯಲ್ಲಿರುವ ಕಾರ್ಯಕ್ರಮಗಳು ಹಾಗೂ ಮುಂದಿನ ವರ್ಷಗಳಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾರ್ಯಕ್ರಮಗಳು ಮತ್ತು ಆರ್ಥಿಕ ಸ್ವಾವಲಂಭನೆಯ ಬಗ್ಗೆ ಪ್ರಾಧಿಕಾರದಲ್ಲಿ ವಿಷಯವನ್ನು ಮಂಡಿಸಿ ಸೂಕ್ತ ನಿರ್ಣಯವನ್ನು ಮಾಡಿ ಸಲ್ಲಿಸಲು ಸೂಚಿಸಿರುತ್ತಾರೆ. ನಿರ್ಣಯದ ಆದಾರದಲ್ಲಿ ಸದರಿ ಪ್ರಾಧಿಕಾರವನ್ನು ರದ್ದುಗೊಳಿಸುವ ಅಥವಾ ಮುಂದುವರೆಸುವ ಕ್ರಮ ಕೈಗೊಳ್ಳಬೇಕಾಗಿರುತ್ತದೆ ಎಂದು ಸೂಚಿಸಿರುತ್ತಾರೆ. ಸದರಿ ವಿಷಯದ ಬಗ್ಗೆ ಪ್ರಾಧಿಕಾರದ ಇದುವರೆಗಿನ ಸಾದನೆ, ಈಗ ಚಾಲನೆಯಲ್ಲಿರುವ ಕಾರ್ಯಕ್ರಮಗಳು ಹಾಗೂ ಮುಂದಿನ ವರ್ಷಗಳಿಗೆ ರೂಪಿಸಲು ಉದ್ದೇಶಿಸಿರುವ ಯೋಜನೆಗಳ ಸಂಕ್ಷಿಪ್ತ ವಿವರಗಳನ್ನು ಆಯುಕ್ತರು ಸಭೆಗೆ ನೀಡಿದ ವರದಿಯನ್ನು (ಅನುಬಂಧ – 1) ರಲ್ಲಿ ಲಗತ್ತಿಸಿದೆ, ಸದರಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆ ಒಪ್ಪಿ ತೀರ್ಮಾನಿಸಿತು.

**ವಿಷಯ ನಂ 18.**

ಹಿರೇಮಗಳೂರು ಹಳೇ ವಸತಿ ಬಡಾವಣೆ ಸರ್ವೆ ನಂ. 433, 434 ಮತ್ತಿತರೆ ಸರ್ವೆ ನಂಬರುಗಳ 06 ಎಕರೆ 10 ಗುಂಟೆ ಭೂಮಿಯ ಬದಲಾಗಿ ಸದರೀ ಹಿರೇಮಗಳೂರು ಸರ್ವೆ ನಂ. 495, 496 ಮತ್ತು 586 ರಲ್ಲಿನ 06 ಎಕರೆ 09 ಗುಂಟೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ.

**ಟಿಪ್ಪಣಿ:**

ದಿನಾಂಕ: 06-03-2010 ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ. 08 ರಲ್ಲಿ ಹಿರೇಮಗಳೂರು ಹಳೇ ವಸತಿ ಬಡಾವಣೆ, ಸರ್ವೆ ನಂ. 433, 465 ಮತ್ತು 434 ರಲ್ಲಿ 06 ಎಕರೆ 10 ಗುಂಟೆ ಪ್ರದೇಶವನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಆಗಿದ್ದ ದಿನಾಂಕ: 05-10-2007 ರ ನಿರ್ಣಯವನ್ನು ರದ್ದುಗೊಳಿಸಿ ಅದರ ಬದಲಿಗೆ ಬೇರೆ 06 ಎಕರೆ 02 ಗುಂಟೆ ಭೂಮಿಯನ್ನು ಕಡ್ಡಾಯವಾಗಿ ಭೂಸ್ವಾಧೀನ ಪಡಿಸಿಕೊಳ್ಳುವಂತೆ ಆಗಿದ್ದ ನಿರ್ಣಯದಂತೆ ಸದರೀ ಪ್ರಾಧಿಕಾರದ ಹಳೇ ವಸತಿ ಬಡಾವಣೆಗೆ ಹೊಂದಿಕೊಂಡಂತೆ ಹಿರೇಮಗಳೂರು ಗ್ರಾಮದ ಸರ್ವೆ ನಂ. 495, 496 ಮತ್ತು 586 ರಲ್ಲಿನ 06 ಎಕರೆ 09 ಗುಂಟೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ದಿನಾಂಕ: 07-07-2010 ರ ನಿರ್ಣಯದಂತೆ ವಿವರಗಳನ್ನು ಪರಿಶೀಲಿಸಲಾಯ್ತು, ಸದರಿ ಭೂಮಿಯ ಮಾಲೀಕರು ಸಹ ಸಣ್ಣ ಮತ್ತು ಅತೀಸಣ್ಣ ರೈತರಾಗಿರುತ್ತಾರೆ, ಆದ್ದರಿಂದ ಭೂ ಸ್ವಾಧೀನದ ಬಗ್ಗೆ ನಿರ್ಣಯಕ್ಕಾಗಿ ವಿಷಯವನ್ನು ಸಭೆಗೆ ಮಂಡಿಸಲಾಗಿದೆ.

**ತೀರ್ಮಾನ :**

ದಿನಾಂಕ: 06-03-2010 ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ. 08 ರಲ್ಲಿ ಹಿರೇಮಗಳೂರು ಹಳೇ ವಸತಿ ಬಡಾವಣೆ, ಸರ್ವೆ ನಂ. 433, 465 ಮತ್ತು 434 ರಲ್ಲಿ 06 ಎಕರೆ 10 ಗುಂಟೆ ಪ್ರದೇಶವನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಆಗಿದ್ದ ದಿನಾಂಕ: 05-10-2007 ರ ನಿರ್ಣಯವನ್ನು ರದ್ದುಗೊಳಿಸಿ, ಅದರ ಬದಲಿಗೆ ಬೇರೆ 06 ಎಕರೆ 02 ಗುಂಟೆ ಭೂಮಿಯನ್ನು ಕಡ್ಡಾಯವಾಗಿ ಭೂಸ್ವಾಧೀನ ಪಡಿಸಿಕೊಳ್ಳುವಂತೆ ಆಗಿದ್ದ ನಿರ್ಣಯದಂತೆ ಸದರೀ ಪ್ರಾಧಿಕಾರದ ಹಳೇ ವಸತಿ ಬಡಾವಣೆಗೆ ಹೊಂದಿಕೊಂಡಂತೆ ಹಿರೇಮಗಳೂರು ಗ್ರಾಮದ ಸರ್ವೆ ನಂ. 495, 496 ಮತ್ತು 586 ರಲ್ಲಿನ 06 ಎಕರೆ 09 ಗುಂಟೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ದಿನಾಂಕ: 07-07-2010 ರ ನಿರ್ಣಯದಂತೆ ವಿವರಗಳನ್ನು ಪರಿಶೀಲಿಸಲಾಯ್ತು, ಸದರಿ ಭೂಮಿಯ ಮಾಲೀಕರು ಸಹ ಸಣ್ಣ ಮತ್ತು ಅತೀಸಣ್ಣ ರೈತರಾಗಿರುತ್ತಾರೆ, ಆದ್ದರಿಂದ ಭೂ ಸ್ವಾಧೀನದ ಬಗ್ಗೆ ಈಗಾಗಲೇ ಸರ್ಕಾರ ಅನುಮೋದನೆ ನೀಡಿರುವ ಭೂಮಿಯನ್ನು ಸ್ವಾಧೀನಕ್ಕೆ ಪಡೆಯಲು ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ವಿಷಯ ನಂ 19.**

2010-11 ನೇ ಸಾಲಿನ ಮೈಸೂರು ವಿಭಾಗ ಮಟ್ಟದ ದಸರಾ ಕ್ರೀಡಾಕೂಟಕ್ಕೆ ರೂ. 10,000=00 ವಂತಿಕೆ ನೀಡುವ ಬಗ್ಗೆ.

**ಟಿಪ್ಪಣಿ :**

2010 - 11 ನೇ ಸಾಲಿನ ಮೈಸೂರು ವಿಭಾಗ ಮಟ್ಟದ ದಸರಾ ಕ್ರೀಡಾಕೂಟದ ಪೂರ್ವಭಾವಿ ಸಭೆಯು ಮಾನ್ಯ ಜಿಲ್ಲಾಧಿಕಾರಿಗಳವರ ಅಧ್ಯಕ್ಷತೆಯಲ್ಲಿ ದಿನಾಂಕ: 23-09-2010 ರಂದು ನಡೆಯಿತು ಸದರಿ ಸಭೆಯಲ್ಲಿ ಸ್ಥಳೀಯ ಸಂಸ್ಥೆಗಳಿಂದ (ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ಸಿ.ಡಿ.ಎ) ಕಛೇರಿಗಳಿಂದ ವಂತಿಕೆ ನೀಡಲು ತಿಳಿಸಿರುವುದರಿಂದ, ದಸರಾ ಕ್ರೀಡಾಕೂಟಕ್ಕೆ ಪ್ರಾಧಿಕಾರದಿಂದ ರೂ. 10,000=00 ಗಳ ವಂತಿಕೆ ನೀಡುವ ಬಗ್ಗೆ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

2010 - 11 ನೇ ಸಾಲಿನ ಮೈಸೂರು ವಿಭಾಗ ಮಟ್ಟದ ದಸರಾ ಕ್ರೀಡಾಕೂಟದ ಪೂರ್ವಭಾವಿ ಸಭೆಯು ಮಾನ್ಯ ಜಿಲ್ಲಾಧಿಕಾರಿಗಳವರ ಅಧ್ಯಕ್ಷತೆಯಲ್ಲಿ ದಿನಾಂಕ: 23-09-2010 ರಂದು ನಡೆಯಿತು ಸದರಿ ಸಭೆಯಲ್ಲಿ ಸ್ಥಳೀಯ ಸಂಸ್ಥೆಗಳಿಂದ (ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ಸಿ.ಡಿ.ಎ) ಕಛೇರಿಗಳಿಂದ ವಂತಿಕೆ ನೀಡಲು ತಿಳಿಸಿರುವುದರಿಂದ, ದಸರಾ ಕ್ರೀಡಾಕೂಟಕ್ಕೆ ಪ್ರಾಧಿಕಾರದಿಂದ ರೂ. 10,000=00 ಗಳ ವಂತಿಕೆ ನೀಡುವ ಬಗ್ಗೆ ಜಿಲ್ಲಾ ಆಡಳಿತದಿಂದ ಯಾವುದೇ ಪತ್ರ ಅಥವಾ ಆಹ್ವಾನ ಬಂದಿಲ್ಲ ಪತ್ರ ಬಂದಲ್ಲಿ ಅಧ್ಯಕ್ಷರ ಒಪ್ಪಿಗೆ ಪಡೆದು ಅನುಮೋದನೆ ನೀಡಲು ಸಭೆ ಒಪ್ಪಿಗೆ ನೀಡಿತು.

**ವಿಷಯ ನಂ 20.**

ಶ್ರೀಮತಿ ದೀಪಾ ಕುಮಾರಸ್ವಾಮಿ ಕೊಂ ಡಾ., ಕುಮಾರಸ್ವಾಮಿ ಮತ್ತು ಶ್ರೀ ಡಾ., ನಂದೀಶ್ವರ ಬಿನ್ ರಾಯಪ್ಪ ಕೆ/ಂ ಕಡೂರು ಕ್ಲಿನಿಕ್, ಕೆ. ಎಂ. ರಸ್ತೆ, ಚಿಕ್ಕಮಗಳೂರು ಇವರು ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6 ರಲ್ಲಿನ ಸುಮಾರು 15 ಎಕರೆ – 00 ಗುಂಟೆ ವಿಸ್ತೀರ್ಣದಲ್ಲಿನ ರೂಪ ರೇಖೆಗೆ ಅಂತಿಮ ಅನುಮೋದನೆ ನೀಡುವ ಕುರಿತು.

**ಟಿಪ್ಪಣಿ:**

ಶ್ರೀಮತಿ ದೀಪಾ ಕುಮಾರಸ್ವಾಮಿ ಕೊಂ ಡಾ., ಕುಮಾರಸ್ವಾಮಿ ಮತ್ತು ಶ್ರೀ ಡಾ., ನಂದೀಶ್ವರ ಬಿನ್ ರಾಯಪ್ಪ ಕೆ/ಂ ಕಡೂರು ಕ್ಲಿನಿಕ್, ಕೆ. ಎಂ. ರಸ್ತೆ, ಚಿಕ್ಕಮಗಳೂರು ಇವರು ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6 ರಲ್ಲಿನ ಸುಮಾರು 15 ಎಕರೆ – 00 ಗುಂಟೆ ವಿಸ್ತೀರ್ಣದಲ್ಲಿನ ಪರಿಷ್ಕೃತ ವಿನ್ಯಾಸ ನಕ್ಷೆಯ ಅನುಮೋದನೆಯನ್ನು ದಿನಾಂಕ: 05-09-2009 ರ ಸಭೆಯಲ್ಲಿ ಮಂಡಿಸಿ, ಪರಿಷ್ಕೃತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ಶೇಕಡ 60 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ, ಹಾಗೂ ದಿನಾಂಕ: 18-11-2009 ರಂದು ನಾಗರೀಕ ಸೌಲಭ್ಯದ ನಿವೇಶನ, ಉದ್ಯಾನವನ ಹಾಗೂ ರಸ್ತೆ ಮತ್ತು ಚರಂಡಿಗಳನ್ನು ಪ್ರಾಧಿಕಾರಕ್ಕೆ ವಹಿಸಿಕೊಟ್ಟಿರುತ್ತಾರೆ ಅದರಂತೆ ಲೇಔಟ್‌ನಲ್ಲಿ ಬರುವಂತಹ ರಸ್ತೆ, ಚರಂಡಿ, ಮೋರಿ ಮತ್ತು ವಿದ್ಯುತ್ ಸಂಪರ್ಕ ಹಾಗೂ ನೀರು ಸರಬರಾಜು ಮತ್ತಿತರೆ ಮೂಲಭೂತ ಸೌಕರ್ಯಗಳನ್ನು ಅಳವಡಿಸಿರುವುದನ್ನು ಪರಿಶೀಲಿಸಿ, ಅದರಂತೆ ಸದರಿ ಲೇಔಟ್‌ನ ಅಂತಿಮ ಅನುಮೋದನೆಗಾಗಿ ದಿನಾಂಕ: 29-08-2010 ರಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ವಿನ್ಯಾಸದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರಗಳಾದ ಮೆಸ್ಕಾಂ ಚಿಕ್ಕಮಗಳೂರು ರವರು ವಿದ್ಯುತ್ ಸಂಪರ್ಕ ಕಲ್ಪಿಸಿರುವ ಬಗ್ಗೆ, ಸಹಾಯಕ ಕಾರ್ಯಪಾಲಕ ಅಭಿಯಂತರರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಚಿಕ್ಕಮಗಳೂರು ರವರಿಂದ ನೀರು ಸರಬರಾಜು ವ್ಯವಸ್ಥೆಯನ್ನು ಕಲ್ಪಿಸಿರುವ ಬಗ್ಗೆ ದೃಡೀಕರಣ ಪತ್ರ ಸಲ್ಲಿಸಿರುತ್ತಾರೆ ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಸಂಬಂದ ಅಂದಾಜು ಪಟ್ಟಿಯನ್ವಯ ರೂ. 24,15,000=00 ರೂಗಳನ್ನು ರಶೀದಿ ಸಂಖ್ಯೆ. 354 ದಿನಾಂಕ: 03-07-2010 ರನ್ವಯ ಪಾವತಿಸಿರುತ್ತಾರೆ, ಸಹಾಯಕ ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಚಿಕ್ಕಮಗಳೂರು ರವರು ನೀಡಿರುವ ಪೂರ್ಣಗೊಂಡ ಕಾಮಗಾರಿ ಬಗ್ಗೆ ದೃಡೀಕರಣ ಪತ್ರ ಪಡೆದು ಸಲ್ಲಿಸಿದ ನಂತರ ಪರಿಶೀಲಿಸಿ ಅಂತಿಮ ರೂಪ ರೇಖಾ ನಕ್ಷೆಗೆ ಅನುಮೋದನೆ ನೀಡುವ ಬಗ್ಗೆ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6 ರಲ್ಲಿನ ಸುಮಾರು 15 ಎಕರೆ – 00 ಗುಂಟೆ ವಿಸ್ತೀರ್ಣದಲ್ಲಿನ ಪರಿಷ್ಕೃತ ವಿನ್ಯಾಸ ನಕ್ಷೆಯ ಅನುಮೋದನೆಯನ್ನು ದಿನಾಂಕ: 05-09-2009 ರ ಸಭೆಯಲ್ಲಿ ಮಂಡಿಸಿ ಪರಿಷ್ಕೃತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ಶೇಕಡ 60 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ, ಅದರಂತೆ ಲೇಔಟ್‌ನಲ್ಲಿ ಬರುವಂತಹ ರಸ್ತೆ, ಚರಂಡಿ, ಮೋರಿ ಮತ್ತು ವಿದ್ಯುತ್ ಸಂಪರ್ಕ ಹಾಗೂ ನೀರು ಸರಬರಾಜು ಮತ್ತಿತರೆ ಮೂಲಭೂತ ಸೌಕರ್ಯಗಳನ್ನು ಅಳವಡಿಸಿರುವುದನ್ನು ಪರಿಶೀಲಿಸಿ, ಅದರಂತೆ ಸದರಿ ಲೇಔಟ್‌ನ ಅಂತಿಮ ಅನುಮೋದನೆಗಾಗಿ ದಿನಾಂಕ: 29-08-2010 ರಲ್ಲಿ ಅರ್ಜಿದಾರರು ಅರ್ಜಿ ಸಲ್ಲಿಸಿರುವ ಮೇರೆಗೆ ಸದರಿ ವಿನ್ಯಾಸದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರಗಳಾದ ಮೆಸ್ಕಾಂ ಚಿಕ್ಕಮಗಳೂರು, ಸಹಾಯಕ ಕಾರ್ಯಪಾಲಕ ಅಭಿಯಂತರರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಚಿಕ್ಕಮಗಳೂರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಚಿಕ್ಕಮಗಳೂರು, ಮತ್ತು ತೋಟಗಾರಿಕಾ ಇಲಾಖೆ ಚಿಕ್ಕಮಗಳೂರು ಇವರಿಂದ ಕಾಮಗಾರಿ ನಿರ್ವಹಿಸಿರುವ ಬಗ್ಗೆ ದೃಡೀಕರಣ ಪತ್ರ ಪಡೆದ ನಂತರ ರೂಪ ರೇಖಾ ನಕ್ಷೆಗೆ ಅಂತಿಮ ಅನುಮೋದನೆ ನೀಡಬಹುದಾಗಿದೆ, ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6 ರಲ್ಲಿನ ಸುಮಾರು 15 ಎಕರೆ – 00 ಗುಂಟೆ ವಿಸ್ತೀರ್ಣದಲ್ಲಿನ ಪರಿಷ್ಕೃತ ವಿನ್ಯಾಸ ನಕ್ಷೆಯ ಅನುಮೋದನೆಯನ್ನು ದಿನಾಂಕ: 05-09-2009 ರ ಸಭೆಯಲ್ಲಿ ಮಂಡಿಸಿ ಪರಿಷ್ಕೃತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ಶೇಕಡ 60 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ, ಅದರಂತೆ ಲೇಔಟ್‌ನಲ್ಲಿ ಬರುವಂತಹ ರಸ್ತೆ, ಚರಂಡಿ, ಮೋರಿ ಮತ್ತು ವಿದ್ಯುತ್ ಸಂಪರ್ಕ ಹಾಗೂ ನೀರು ಸರಬರಾಜು ಮತ್ತಿತರೆ ಮೂಲಭೂತ ಸೌಕರ್ಯಗಳನ್ನು ಅಳವಡಿಸಿರುವುದನ್ನು ಪರಿಶೀಲಿಸಿ ಅದರಂತೆ ಸದರಿ ಲೇಔಟ್‌ನ ಅಂತಿಮ ಅನುಮೋದನೆಗಾಗಿ ದಿನಾಂಕ: 29-08-2010 ರಲ್ಲಿ ಅರ್ಜಿದಾರರು ಅರ್ಜಿ ಸಲ್ಲಿಸಿರುವ ಮೇರೆಗೆ ಸದರಿ ವಿನ್ಯಾಸದಲ್ಲಿ ಅಭಿವೃದ್ದಿ ಕಾಮಗಾರಿಗಳನ್ನು ನಿರ್ವಹಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರಗಳಾದ ಮೆಸ್ಕಾಂ ಚಿಕ್ಕಮಗಳೂರು, ಸಹಾಯಕ ಕಾರ್ಯಪಾಲಕ ಅಭಿಯಂತರರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಚಿಕ್ಕಮಗಳೂರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಚಿಕ್ಕಮಗಳೂರು, ಮತ್ತು ತೋಟಗಾರಿಕಾ ಇಲಾಖೆ ಚಿಕ್ಕಮಗಳೂರು ಇವರಿಂದ ಕಾಮಗಾರಿ ನಿರ್ವಹಿಸಿರುವ ಬಗ್ಗೆ ದೃಡೀಕರಣ ಪತ್ರ ಪಡೆದ ನಂತರ ರೂಪ ರೇಖಾ ನಕ್ಷೆಗೆ ಅಂತಿಮ ಅನುಮೋದನೆ ನೀಡಬಹುದಾಗಿದೆ, ಈ ಬಗ್ಗೆ ವಿಷಯವನ್ನು ಆಯುಕ್ತರು ಓದಿದರು ನಗರ ಯೋಜನಾ ಸದಸ್ಯರು ಮಾತನಾಡಿ ವಿವಿದ ಸಿವಿಲ್ ಕಾಮಗಾರಿಗಳ ಬಗ್ಗೆ ಲೋಕೋಪಯೋಗಿ ಇಲಾಖೆ, ತೋಟಗಾರಿಕಾ ಇಲಾಖೆ, ಮತ್ತು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಯವರು ತೃಪ್ತಿಕರವಾಗಿ ಪೂರ್ಣಗೊಂಡಿರುವ ಬಗ್ಗೆ ಪತ್ರ ನೀಡಿದ್ದಾರೆ ಎಂದು ತಿಳಿಸಿದರು. ಈ ಬಗ್ಗೆ ಆಕ್ಷೇಪ ಮಾಡಿದ ಪ್ರಾಧಿಕಾರದ ಸದಸ್ಯರಾದ ಶ್ರೀ ರಾಜು ರವರು ಇಲಾಖೆಗಳು ನೀಡಿರುವ ವರದಿಯ ಆದಾರದಲ್ಲಿ ಹೇಗೆ ಅಂತಿಮ ಅನುಮೋದನೆ ನೀಡಲು ಸಾದ್ಯ ಎಂದರು, ನಗರ ಯೋಜನಾ ಸದಸ್ಯರು ಮಾತನಾಡಿ ಸರ್ವೆ ನಕ್ಷೆಯನ್ನು ಅಳತೆಯೊಂದಿಗೆ ದೃಡೀಕರಿಸಿ ಪಡೆಯಬೇಕಿದೆ ಎಂದರು, ಆಯುಕ್ತರು ಮಾತನಾಡಿ ಪ್ರಾಧಿಕಾರದ ಸಿವಿಲ್ ವಿಭಾಗದಿಂದ ಕಾಮಗಾರಿಗಳ ಬಗ್ಗೆ ವರದಿ ಪಡೆದು ಅಳತೆಗಳನ್ನು ಪರಿಶೀಲಿಸಿ ನಂತರ ಅಳತೆಯೊಂದಿಗೆ ನಕ್ಷೆ ತಯಾರಿಸಿ ಅಂತಿಮ ಅನುಮೋದನೆಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ವಿವರಿಸಿದರು ಅದರಂತೆ ಕ್ರಮವಹಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

## ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಬಹುದಾದ ಇತರೆ ವಿಷಯಗಳು

**ವಿಷಯ:–1.**

ಲ್ಯಾಂಡ್ ಸ್ಕೇಪಿಂಗ್ ತಜ್ಞರ ಪಟ್ಟಿಗೆ ಸೇರಲು (Land Scaping Empanelment) ಆಸಕ್ತಿ ವ್ಯಕ್ತಪಡಿಸಲು ಅರ್ಜಿ ಆಹ್ವಾನಿಸಲಾಗಿದ್ದು ಅದರಂತೆ ನಿಯಮಾನುಸಾರ ನಿಗದಿ ಪಡಿಸಿದ ಅವಧಿಯೊಳಗೆ ಅರ್ಜಿ ಸಲ್ಲಿಸಿರುವವರನ್ನು ಲೀಸ್ಟ್ ಮಾಡಿ ಪ್ರಾಧಿಕಾರದ ಪ್ಯಾನಲ್‌ಗೆ ತೆಗೆದುಕೊಳ್ಳುವ ಬಗ್ಗೆ.

**ಟಿಪ್ಪಣಿ :**

ನಗರಾಭಿವೃದ್ಧಿ ಪ್ರಾಧಿಕಾರವು ನಗರದಲ್ಲಿ ಹಲವು ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಪ್ರಾಧಿಕಾರದಿಂದ ಲ್ಯಾಂಡ್ ಸ್ಕೇಪಿಂಗ್ ತಜ್ಞರ ಪಟ್ಟಿಗೆ ಸೇರಲು ಆಸಕ್ತಿ ವ್ಯಕ್ತಪಡಿಸಲು ಅರ್ಜಿ ಆಹ್ವಾನಿಸಿದಾಗ ನಿಗದಿತ ಅವದಿಯಲ್ಲಿ 1)ಶ್ರೀ ಎ. ಆರ್. ರವೀಂದ್ರ ಕ್ಲಾಸ್ ಒಂದನೆ ಸಿವಿಲ್ ಕಂಟ್ರಾಕ್ಟರ್ ನರುಗನಹಳ್ಳಿ ತಮಕೂರು ಜಿಲ್ಲೆ ಮತ್ತು 2) ಶ್ರೀ ಎ. ಕುಮಾರ್ / ಶ್ರೀಕಾಂತ್ ಜಿ. ಪಿ. ಸಹ್ಯಾದ್ರಿ ನರ್ಸರಿ ಗಾರ್ಡನ್ ಕಡದಕಟ್ಟ, ಭದ್ರಾವತಿ ತಾಲ್ಲೂಕು ಶಿವಮೊಗ್ಗ ಜಿಲ್ಲೆ, ಶ್ರೀ ಮಂಜುನಾಥ್ ಚಿಕ್ಕಮಗಳೂರು ಇವರುಗಳು ಒಟ್ಟು ಮೂರು ಅರ್ಜಿ ಹಾಗೂ ಸಂಬಂಧಿಸಿದ ಅನುಭವದ ಬಗ್ಗೆ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಅವರನ್ನು ಪ್ರಾಧಿಕಾರದ ಪ್ಯಾನಲ್‌ಗೆ ತೆಗೆದುಕೊಳ್ಳುವ ಬಗ್ಗೆ ವಿಷಯವನ್ನು ಸಭೆ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ನಗರಾಭಿವೃದ್ಧಿ ಪ್ರಾಧಿಕಾರವು ನಗರದಲ್ಲಿ ಹಲವು ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಪ್ರಾಧಿಕಾರದಿಂದ ಲ್ಯಾಂಡ್ ಸ್ಕೇಪಿಂಗ್ ತಜ್ಞರ ಪಟ್ಟಿಗೆ ಸೇರಲು ಆಸಕ್ತಿ ವ್ಯಕ್ತಪಡಿಸಲು ಅರ್ಜಿ ಆಹ್ವಾನಿಸಲಾಗಿದ್ದು ಅದರಂತೆ ಮೂರು ಜನ ಗುತ್ತಿಗೆದಾರರು ಅರ್ಜಿ ಸಲ್ಲಿಸಿದ್ದು ಅದರೊಂದಿಗೆ ತಮ್ಮ ಅನುಭವದ ಬಗ್ಗೆ ದಾಖಲಾತಿಗಳನ್ನು ಸಹ ಸಲ್ಲಿಸಿರುತ್ತಾರೆ ಆದ್ದರಿಂದ ಆ ಮೂರು ಜನ ಗುತ್ತಿಗೆದಾರರನ್ನು ಪ್ರಾಧಿಕಾರದ ಪ್ಯಾನಲ್‌ಗೆ ತೆಗೆದುಕೊಳ್ಳುವಂತೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ವಿಷಯ:–2.**

ಪ್ರಾಧಿಕಾರದಲ್ಲಿ ಖಾಲಿ ಇರುವ ಸಹಾಯಕ ಇಂಜಿನಿಯರ್ ಹುದ್ದೆ ಹಾಗೂ ಅವಶ್ಯವಿರುವ ಸರ್ವೆಯರ್ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ತಾತ್ಕಾಲಿಕವಾಗಿ ಭರ್ತಿ ಮಾಡಿಕೊಳ್ಳುವ ಬಗ್ಗೆ.

**ಟಿಪ್ಪಣಿ :**

ಪ್ರಾಧಿಕಾರದ ವತಿಯಿಂದ ನಿರ್ಮಾಣವಾಗುತ್ತಿರುವ 17.37½ ಎಕರೆ ಬಡಾವಣೆ, ಉದ್ದೇಶಿತ 200 ಎಕರೆ ಬಡಾವಣೆ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ 135 ಎಕರೆ ಬಡಾವಣೆಯಲ್ಲಿನ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಸಂಬಂಧಿತ ಸಿವಿಲ್ ಕಾಮಗಾರಿಗಳ ನಿರ್ವಹಣೆ ದೃಷ್ಟಿಯಿಂದ ಸಹಾಯಕ ಇಂಜಿನಿಯರ್ ಹುದ್ದೆ ನೇಮಕಾತಿ ಅವಶ್ಯವಿರುತ್ತದೆ. ಸರ್ಕಾರದಿಂದ ನೇಮಕಾತಿಯಾಗುವವರೆಗೂ ಸದರಿ ಹುದ್ದೆಯನ್ನು ಹೊರಗುತ್ತಿಗೆ ಆದಾರದಲ್ಲಿ ನೇಮಕ ಮಾಡಿಕೊಳ್ಳಬಹುದಾಗಿದೆ. ಬಡಾವಣೆಗಳ ರಚನೆಗೆ ಸರ್ವೆಯರ್‌ರ ಅವಶ್ಯಕತೆ ಇರುತ್ತದೆ. ಸದರಿ ಹುದ್ದೆಯನ್ನು ಸೃಷ್ಟಿಸಿ ತಾತ್ಕಾಲಿಕವಾಗಿ ಹೊರಗುತ್ತಿಗೆ ಆದಾರದಲ್ಲಿ ನೇಮಕ ಮಾಡಿಕೊಳ್ಳಬಹುದಾಗಿರುತ್ತದೆ. ಈ ಬಗ್ಗೆ ಸರ್ಕಾರದ ಅನುಮತಿಯನ್ನು ನಿರೀಕ್ಷಿಸಿ ನೇಮಿಸಿಕೊಳ್ಳಲು ಸಭೆಗೆ ವಿಷಯವನ್ನು ತಿಳಿಸಲಾಗಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಪ್ರಾಧಿಕಾರದ ವತಿಯಿಂದ ನಿರ್ಮಾಣವಾಗುತ್ತಿರುವ 17.37½ ಎಕರೆ ಬಡಾವಣೆ, ಉದ್ದೇಶಿತ 200 ಎಕರೆ ಬಡಾವಣೆ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ 135 ಎಕರೆ ಬಡಾವಣೆಯಲ್ಲಿನ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಸಂಬಂಧಿತ ಸಿವಿಲ್ ಕಾಮಗಾರಿಗಳ ನಿರ್ವಹಣೆ ದೃಷ್ಟಿಯಿಂದ ಸಹಾಯಕ ಇಂಜಿನಿಯರ್ ಹುದ್ದೆ ಮತ್ತು ಸರ್ವೆಯರ್ ಹುದ್ದೆಗಳಿಗೆ ಹೊರಗುತ್ತಿಗೆ ಆದಾರದ ಮೂಲಕ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು, ಪ್ರಾಧಿಕಾರದ ವತಿಯಿಂದ ರಚಿಸುತ್ತಿರುವ ಹೊಸ ಬಡಾವಣೆಗಳು ಮತ್ತು ಸದರಿ ಬಡಾವಣೆಯಲ್ಲಿಯ ಸಿವಿಲ್ ಕಾಮಗಾರಿಗಳಿಗೆ ಸಹಾಯಕ ಇಂಜಿನಿಯರ್ ಮತ್ತು ಸರ್ವೆಯರ್ ಹುದ್ದೆ ಅವಶ್ಯವಾಗಿರುತ್ತದೆ, ಸಹಾಯಕ ಇಂಜಿನಿಯರ್ ಹುದ್ದೆಗೆ ಮಾಸಿಕ ರೂ. 15000.00 ಮತ್ತು ಸರ್ವೆಯರ್ ಹುದ್ದೆಗೆ ಮಾಸಿಕ ರೂ. 8000.00 ಗಳನ್ನು ನೀಡಬಹುದಾಗಿದೆ, ಸದರಿ ಹುದ್ದೆಯನ್ನು ಸರ್ಕಾರದಿಂದ ನೇಮಕಾತಿಯಾಗುವವರೆಗೆ ಅಥವಾ ಒಂದು ಬಡಾವಣೆ ರಚನೆಗೆ ಸೀಮಿತವಾಗುವವರೆಗೆ ಅಥವಾ ಕನಿಷ್ಠ ಎರಡು ವರ್ಷಗಳವರೆಗೆ ಜಿಲ್ಲಾಧಿಕಾರಿಗಳ ಮೂಲಕ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಅಥವಾ ಹೊರಗುತ್ತಿಗೆ ಮೂಲಕ ನೇಮಕಾತಿ ಮಾಡಿಕೊಳ್ಳಲು ಸರ್ಕಾರದ ಘಟನೋತ್ತರ ಮಂಜೂರಾತಿ ನಿರೀಕ್ಷಿಸಿ ಸರ್ವಾನುಮತದಿಂದ ಅನುಮತಿ ನೀಡಿತು.

**ವಿಷಯ:–3.**

ಪ್ರಾಧಿಕಾರದ ಹಿರೇಮಗಳೂರು ಬಡಾವಣೆಯಲ್ಲಿ ಕೆಲವು ಚರಂಡಿ ಮತ್ತು ಡೆಕ್‌ಸ್ಲಾಬ್ ಮೋರಿಗಳು ಕೆಲವು ಕಡೆ ಹಾಳಾಗಿದ್ದು, ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ.

**ಟಿಪ್ಪಣಿ :**

ಪ್ರಾಧಿಕಾರದವತಿಯಿಂದ ನಿರ್ಮಾಣವಾಗಿರುವ ಹಿರೇಮಗಳೂರು ಬಡಾವಣೆಯ ವಿವಿಧ ರಸ್ತೆಗಳ, ಚರಂಡಿ ಮತ್ತು ಡೆಕ್‌ಸ್ಲಾಬ್ ಮೋರಿಗಳು ಹಾಳಾಗಿದ್ದು, ನೀರು ಸರಾಗವಾಗಿ ಹರಿಯದೆ ಸದರಿ ರಿಪೇರಿಗಾಗಿ ಸಾಕಷ್ಟು ದೂರುಗಳು ಬಂದಿರುತ್ತವೆ. ಸದರಿ ರಿಪೇರಿಗಾಗಿ ಸಿವಿಲ್ ವಿಭಾಗದಿಂದ ಅಂದಾಜು ಪಟ್ಟಿ ಸಿದ್ದಪಡಿಸಿ ಟೆಂಡರ್ ಕರೆಯುವ ಮೂಲಕ ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿದ್ದು, ವಿಷಯವನ್ನು ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು ಪ್ರಾಧಿಕಾರದವತಿಯಿಂದ ನಿರ್ಮಾಣವಾಗಿರುವ ಹಿರೇಮಗಳೂರು ವಸತಿ ಬಡಾವಣೆಯಲ್ಲಿನ ವಿವಿಧ ರಸ್ತೆಗಳ, ಚರಂಡಿ ಮತ್ತು ಡೆಕ್‌ಸ್ಲಾಬ್ ಮೋರಿಗಳು ಹಾಳಾಗಿದ್ದು, ನೀರು ಸರಾಗವಾಗಿ ಹರಿಯದೆ ಇರುವುದರಿಂದ ಸದರಿ ರಿಪೇರಿಗಾಗಿ ಸಾಕಷ್ಟು ದೂರುಗಳು ಬಂದಿರುತ್ತವೆ.

ಸದರಿ ಚರಂಡಿ ಮತ್ತು ಮೋರಿ ರಿಪೇರಿ ಅಥವಾ ಹೊಸದಾಗಿ ನಿರ್ಮಾಣ ಮಾಡಬೇಕಾಗಿರುವ ಕಡೆ ಪರಿಶೀಲಿಸಿ ಸಿವಿಲ್ ವಿಭಾಗದಿಂದ ಅಂದಾಜು ಪಟ್ಟಿ ಸಿದ್ದಪಡಿಸಿ ನಿಯಮಾನುಸಾರ ಟೆಂಡರ್ ಕರೆಯುವ ಮೂಲಕ ಕಾಮಗಾರಿಗಳನ್ನು ಕೈಗೊಳ್ಳಬಹುದೆಂದು, ಅದಕ್ಕೆ ತಗಲುವ ವೆಚ್ಚವನ್ನು ಪ್ರಾಧಿಕಾರದಿಂದ ಭರಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 4.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಇಂದಾವರ ಮತ್ತು ಉಪ್ಪಳ್ಳಿ ಗ್ರಾಮಗಳ ವಿವಿದ ಸರ್ವೆ ನಂಬರುಗಳಲ್ಲಿನ ಒಟ್ಟು 200 ಎಕರೆ ಜಮೀನನ್ನು ಪ್ರಾಧಿಕಾರದಿಂದ 40 : 60 ಅನುಪಾತದ ಪಾಲುಗಾರಿಕೆ ಯೋಜನೆಯಲ್ಲಿ ಅಭಿವೃದ್ದಿಪಡಿಸಿ ವಸತಿ ಬಡಾವಣೆ ನಿರ್ಮಾಣ ಮಾಡಲು ಉದ್ದೇಶಿಸಿರುವ ಭೂಮಿಗೆ ಪರಸ್ಪರ ಒಡಂಬಡಿಕೆ ಪತ್ರದ ಮೂಲಕ ಹಸ್ತಾಂತರಿಸುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಇಂದಾವರ ಮತ್ತು ಉಪ್ಪಳ್ಳಿ ಗ್ರಾಮಗಳ ವಿವಿದ ಸರ್ವೆ ನಂಬರುಗಳಲ್ಲಿನ ಒಟ್ಟು 200 ಎಕರೆ ಜಮೀನನ್ನು ಪ್ರಾಧಿಕಾರದಿಂದ 40 : 60 ಅನುಪಾತದ ಪಾಲುಗಾರಿಕೆ ಯೋಜನೆಯಲ್ಲಿ ಅಭಿವೃದ್ದಿಪಡಿಸಿ ವಸತಿ ಬಡಾವಣೆ ನಿರ್ಮಾಣ ಮಾಡಲು ಉದ್ದೇಶಿಸಿರುವ ಭೂಮಿಗೆ ಪರಸ್ಪರ ಒಡಂಬಡಿಕೆ ಪತ್ರದ ಮೂಲಕ ಹಸ್ತಾಂತರಿಸುವ ಭೂಮಿಗೆ ನ್ಯಾಯವಾದಿಗಳಿಂದ ಕಾನೂನು ಸಲಹೆ / ಸೂಚನೆಯನ್ನು ಪಡೆದು ಈ ಕೆಳಕಂಡಂತೆ ತಯಾರಿಸಿರುವ ಪರಸ್ಪರ ಒಡಂಬಡಿಕೆ ಪತ್ರವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

## ::: ಪರಸ್ಪರ ಒಡಂಬಡಿಕೆ ಪತ್ರ :::

### (MEMORANDUM OF UNDERSTANDING)

ಸನ್ ಎರಡು ಸಾವಿರದ _ _ _ _ _ _ _ _ _ ನೇ ಇಸವಿಯ _ _ _ _ _ _ _ _ ತಿಂಗಳು _ _ _ _ _ _ _ ದಿನಾಂಕದಂದು ಭೂ ಮಾಲೀಕನೂ / ಳೂ ಆದ ಶ್ರೀ / ಶ್ರೀಮತಿ _ _ _ _ _ _ _ _ _ _ _ _ _ _ _ _ _ _ _ _ _ _ _ ಎಂಬ ಹೆಸರು ವಿಳಾಸ ಉಳ್ಳವರಾದ ಇವರು ಮೊದಲನೇ ಪಾರ್ಟಿಯಾಗಿಯೂ ಆಯುಕ್ತರು ಮತ್ತು ಅಧ್ಯಕ್ಷರು ನಗಾರಾಭಿವೃದ್ದಿ ಪ್ರಾಧಿಕಾರ ಚಿಕ್ಕಮಗಳೂರು, ಇವರು ಎರಡನೇ ಪಾರ್ಟಿಯಾಗಿಯೂ ಈ ಒಡಂಬಡಿಕೆಗೆ ಪರಸ್ಪರ (MOU) ಒಪ್ಪಿ ಸಹಿ ಮಾಡುತ್ತಿದ್ದೇವೆ.

ಕರ್ನಾಟಕ ಸರ್ಕಾರದ ರಾಜ್ಯ ಪತ್ರದ ಸಂಖ್ಯೆಯಡಿ ಎ ಫಾರಂ / ನಿಯಮ 4 (1) ರನ್ವಯ ದಿನಾಂಕ: 30-07-2009 ರಂತೆ (ಭೂಸ್ವಾಧೀನಗೊಂಡ ಜಮೀನಿಗೆ ಬದಲಾಗಿ ನಿವೇಶನಗಳನ್ನು ನೀಡುವ ಬಗ್ಗೆ) ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ (ಎರಡನೇ ಪಾರ್ಟಿಯ) ವತಿಯಿಂದ 40 : 60 ರ ನಿವೇಶನದ ಹಂಚಿಕೆಯ ಭೂ ಮಾಲೀಕರು / ರೈತರ ಸಹಭಾಗಿತ್ವದಲ್ಲಿ ವಸತಿ ಬಡಾವಣೆ ರಚಿಸುವ ಉದ್ದೇಶಕ್ಕಾಗಿ ಈ ಕೆಳಕಂಡ ಷರತ್ತುಗಳನ್ನು ಪರಸ್ಪರ ಒಪ್ಪಿ ಒಡಂಬಡಿಕೆ ಮಾಡಿಕೊಂಡು ಸಹಿ ಮಾಡಿ ನೋಂದಣಿ ಮಾಡಲಾಗಿದೆ.

1. ಷಡ್ಯೂಲ್ ಸ್ವತ್ತಿಗೆ ಕ್ರಯದ ಪ್ರತಿಫಲದ ಬದಲು 40 : 60 ರ ಅನುಪಾತದಲ್ಲಿ 2 ನೇ ಪಾರ್ಟಿಯವರು ತಮ್ಮ ಸ್ವಂತ ಖರ್ಚಿನಲ್ಲಿ ಸುಸಜ್ಜಿತವಾದ ವಸತಿ ಬಡಾವಣೆ ರಚಿಸಿ ಅಂದರೆ ಅಗತ್ಯ ರಸ್ತೆ, ಚರಂಡಿ, ನೀರು ಸರಬರಾಜು, ಒಳಚರಂಡಿ ಮತ್ತು ವಿದ್ಯುತ್ ಕಾಮಗಾರಿಗಳನ್ನು ನಿರ್ವಹಿಸಿ ವಾಸಕ್ಕೆ ಯೋಗ್ಯವಾಗುವಂತೆ ರಚಿಸುವ ನಿವೇಶನಗಳಲ್ಲಿ ಶೇಕಡ 40 ರಷ್ಟು ಅಧಿಕೃತ ನಿವೇಶನಗಳನ್ನು ಒಂದನೇ ಪಾರ್ಟಿಯವರ ಸ್ವಾಧೀನಕ್ಕೆ ನೀಡಲು ಎರಡನೇ ಪಾರ್ಟಿಯವರು ಒಪ್ಪಿರುತ್ತಾರೆ.
2. ಎರಡನೇ ಪಾರ್ಟಿಯು ರಚಿಸಲು ಹಾಗೂ ನಿವೇಶನ ಹಂಚಲು ಉದ್ದೇಶಿಸಿರುವ ವಸತಿ ಬಡಾವಣೆ ಉದ್ದೇಶಕ್ಕೆ ಮಾತ್ರ ಸೀಮಿತವಾಗಿರುತ್ತದೆ.

3. ಒಂದನೇ ಪಾರ್ಟಿಯು ಷೆಡ್ಯೂಲ್ ಸ್ವತ್ತಿನ ಖುದ್ದ ಸ್ವಾಧೀನವನ್ನು ಈ ದಿನ ಎರಡನೇ ಪಾರ್ಟಿಯವರಿಗೆ ವಸತಿ ಬಡಾವಣೆಗಳನ್ನು ರಚಿಸುವ ಉದ್ದೇಶಕ್ಕಾಗಿ ವರ್ಗಾಯಿಸಿದ್ದಾರೆ. ಷೆಡ್ಯೂಲ್ ಆಸ್ತಿಯಲ್ಲಿ ಎರಡನೇ ಪಾರ್ಟಿಯವರು ಈ ದಿನದಿಂದ ಕಾನೂನುಬದ್ದವಾಗಿ ಸ್ವಾಧೀನ ಹೊಂದಿ ಬಡಾವಣೆಯನ್ನು ರಚಿಸಲು ಹಕ್ಕುಉಳ್ಳವರಾಗಿರುತ್ತಾರೆ.

4. ಒಂದನೇ ಪಾರ್ಟಿಯು ಷೆಡ್ಯೂಲ್ ಸ್ವತ್ತಿನಲ್ಲಿ ಬಡಾವಣೆಗಳಲ್ಲಿ ರಚಿಸಿರುವ ಜಾಗದಲ್ಲಿ ಉಳಿಯುವ ನಿವೇಶನಗಳಲ್ಲಿ ಒಂದನೇ ಪಾರ್ಟಿಗೆ ನಿವೇಶನಗಳನ್ನು ಒದಗಿಸಲು ಪ್ರಥಮ ಆದ್ಯತೆ ನೀಡಲು ಅಥವಾ ಇತರೆ ಯಾವುದೇ ಭಾಗದಲ್ಲಿ ತನ್ನ ಪಾಲಿನ ನಿವೇಶನಗಳನ್ನು ಪಡೆಯಲು ಆದ್ಯತೆ ನೀಡಲು (ವಾಣಿಜ್ಯ ಮತ್ತು ಮೂಲೆ ನಿವೇಶನಗಳನ್ನು ಹೊರತುಪಡಿಸಿ) ಎರಡನೇ ಪಾರ್ಟಿಯು ಒಪ್ಪಿಗೆ ನೀಡಿರುತ್ತಾರೆ.

5. 40 : 60 ರ ಅನುಪಾತದಂತೆ ಒಂದನೇ ಪಾರ್ಟಿಯು ಹಾಗೂ ಎರಡನೇ ಪಾರ್ಟಿಯು ಷೆಡ್ಯೂಲ್ ಸ್ವತ್ತಿನಲ್ಲಿ ಈ ಮುಂದೆ ರಚಿಸಬಹುದಾಗಿ ನಿವೇಶನಗಳನ್ನು ಹಂಚಿಕೊಳ್ಳುವ ಯೋಜನೆಯ ಉದ್ದೇಶಕ್ಕಾಗಿ ಒಂದನೇ ಪಾರ್ಟಿಯವರು ಷೆಡ್ಯೂಲ್ ಸ್ವತ್ತಿನ ಸ್ವಾಧೀನವನ್ನು ಎರಡನೇ ಪಾರ್ಟಿಯವರಿಗೆ ವಹಿಸಿಕೊಟ್ಟಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಮೇಲೆ ತಿಳಿಸಿರುವ ಅಭಿವೃದ್ಧಿ ಕಾಮಗಾರಿಗಳನ್ನು ಹಾಗೂ ನಿವೇಶನಗಳನ್ನು ಎರಡನೇ ಪಾರ್ಟಿಯು ತಮ್ಮ ಸ್ವಂತ ಖರ್ಚಿನಲ್ಲಿ ಮಾಡಲು ಬದ್ದರಾಗಿರುತ್ತಾರೆ. ಈ ವಿಚಾರದಲ್ಲಿ ಒಂದನೇ ಪಾರ್ಟಿಯು ಯಾವುದೇ ಖರ್ಚನ್ನು ಭರಿಸುವಂತಿರುವುದಿಲ್ಲ.

6. ಒಂದನೇ ಪಾರ್ಟಿಯು ಷೆಡ್ಯೂಲ್ ಆಸ್ತಿಯ ಖುದ್ದು ಸ್ವಾಧೀನವನ್ನು ಈ ದಿನ ವರ್ಗಾಯಿಸಿರುವುದರಿಂದ ಈ ದಿನಾಂಕದಿಂದ ಗರಿಷ್ಠ 2 ವರ್ಷದ ಒಳಗೆ 2 ನೇ ಪಾರ್ಟಿಯು ತಮ್ಮ ಸ್ವಂತ ಖರ್ಚಿನಲ್ಲಿ ಬಡಾವಣೆ ರಚನೆ ಪೂರ್ಣಗೊಳಿಸಿ ಒಂದನೇ ಪಾರ್ಟಿಗೆ ಶೇ 40 ರಷ್ಟು ನಿವೇಶನಗಳನ್ನು ಯಾವುದೇ ದರ ಪಾವತಿಸಿಕೊಳ್ಳದೇ ತನ್ನ ಭೂಮಿಗೆ ಪರಿಹಾರವಾಗಿ ಕ್ರಯ ಪತ್ರ ನೋಂದಣಿ ಮಾಡಿಕೊಡಲು ಉಭಯ ಪಾರ್ಟಿಗಳು ಒಪ್ಪಿರುತ್ತಾರೆ.

7. ಒಂದನೇ ಪಾರ್ಟಿಯು ಬಯಸಿದಲ್ಲಿ ನಿವೇಶನಗಳ ಬದಲಾಗಿ 2 ನೇ ಪಾರ್ಟಿಯು ಸಾರ್ವಜನಿಕರ ಹಂಚಿಕೆಗೆ ನಿಗಧಿಪಡಿಸುವ ನಿವೇಶನದ ಮೌಲ್ಯ (ಹಂಚಿಕೆ ಬೆಲೆಯನ್ನು) ಪಾವತಿಸಲು ಎರಡನೇ ಪಾರ್ಟಿಯು ಒಪ್ಪಿರುತ್ತಾರೆ.

8. ಒಂದನೇ ಪಾರ್ಟಿಯು ಬಯಸಿದಲ್ಲಿ ಪರಿಹಾರವಾಗಿ ಪಡೆದ ನಿವೇಶನಗಳನ್ನು ಎರಡನೇ ಪಾರ್ಟಿಯು ಸಾರ್ವಜನಿಕವಾಗಿ ಹರಾಜು ಮಾಡಿ ಬರುವ ಮೊತ್ತವನ್ನು (ಶೇ 5 ರಷ್ಟು ಹರಾಜು ಖರ್ಚನ್ನು ಮುರಿದು) ಒಂದನೇ ಪಾರ್ಟಿಗೆ ಪಾವತಿಸಲು ಎರಡನೇ ಪಾರ್ಟಿಯು ಒಪ್ಪಿರುತ್ತಾರೆ.

9. ಒಂದನೇ ಪಾರ್ಟಿಯು ಪರಿಹಾರವಾಗಿ ಪಡೆಯುವ ಶೇ 40 ರಷ್ಟು ನಿವೇಶನಗಳನ್ನು ಯಾವುದೇ ಸಂದರ್ಭದಲ್ಲಿ ಯಾರಿಗೇ ಬೇಕಾದರೂ ಮಾರಲು ಎರಡನೇ ಪಾರ್ಟಿಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ.

10. ಒಂದನೇ ಪಾರ್ಟಿಯ ಮಾಲೀಕತ್ವದಲ್ಲಿ ಇರುವ ಷೆಡ್ಯೂಲ್ ಆಸ್ತಿಯು ಯಾವುದೇ ತಂಟೆ, ತಕರಾರು, ಕೋರ್ಟ್ ವ್ಯಾಜ್ಯ ಬಂದಲ್ಲಿ ಅಧಿಕೃತ ಇಲಾಖೆ. ಕೋರ್ಟ್ ತೀರ್ಪುಗಳನ್ನು ಅನುಸರಿಸಿ ಅಂತವರಿಗೆ ಪರಿಹಾರದ ನಿವೇಶಗಳನ್ನು ನೀಡಲು ಉಭಯತ್ರರು ಒಪ್ಪಿರುತ್ತಾರೆ.

11. ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಕಂದಾಯ, ವಗೈರೆ, ಬಾಕಿಯನ್ನು ಕ್ರಯಪತ್ರ ನೋಂದಣಿ ದಿನಾಂಕದವರೆಗೂ ಒಂದನೇ ಪಾರ್ಟಿ ಭರಿಸತಕ್ಕದ್ದು.

12. ಈ ಕೆಳಕಂಡ ಷಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಋಣಭಾರಗಳು ಇರುವುದಿಲ್ಲ. ಒಂದು ವೇಳೆ ಅಂತಹ ಋಣಭಾರಗಳು ಇದ್ದಲ್ಲಿ ಅವುಗಳನ್ನು ಕ್ರಯ ನೋಂದಣಿ / ನಿವೇಶನ ಹಂಚಿಕೆ ಆಗುವುದಕ್ಕೆ ಮುಂಚೆ ಪರಿಹರಿಸಿಕೊಡುವ ಜವಾಬ್ದಾರಿ ಒಂದನೇ ಪಾರ್ಟಿಯವರದ್ದಾಗಿರುತ್ತದೆ.

13. ಷಡ್ಯೂಲ್ ಸ್ವತ್ತಿನ ಕ್ರಯ ನೋಂದಾವಣೆಗೆ ಇನ್ಯಾರದೇ ವ್ಯಕ್ತಿಯ ಸಹಿ ಅಗತ್ಯವಿದ್ದಲ್ಲಿ ಅಂತಹ ಸಹಿಗಳನ್ನು ಮಾಡಿಸಿಕೊಡುವ ಜವಾಬ್ದಾರಿ ಒಂದನೇ ಪಾರ್ಟಿಯವರದ್ದಾಗಿರುತ್ತದೆ.

14. ಒಂದನೇ ಪಾರ್ಟಿಯವರು ಈ ದಿನದವರೆಗೂ ಷೆಡ್ಯೂಲ್ ಆಸ್ತಿಯನ್ನು ಮಾರಾಟ ಮಾಡಲು ಯಾವುದೇ ಒಡಂಬಡಿಕೆ ಮಾಡಿಕೊಂಡಿರುವುದಿಲ್ಲ. ಇನ್ನು ಮುಂದೆಯೂ ಸಹ ಒಂದನೇ ಪಾರ್ಟಿಯು ಷೆಡ್ಯೂಲ್ ಆಸ್ತಿಯನ್ನು ಯಾವುದೇ ರೀತಿ ಮಾರಾಟ / ಅಲಿನೇಷನ್ ಮಾಡುವಂತಿಲ್ಲ.

15. ಒಂದನೇ ಪಾರ್ಟಿಯು ಬಿಟ್ಟುಕೊಡುವ ಭೂಮಿಗೆ ಪರಿಹಾರವಾಗಿ ನೀಡುವ ಅಭಿವೃದ್ದಿ ಪಡಿಸಿದ ನಿವೇಶನಗಳನ್ನು ಈ ದಿನಾಂಕದಿಂದ 2 ವರ್ಷಗಳ ಗರಿಷ್ಠ ಅವಧಿಯೊಳಗೆ ನೀಡದಿದ್ದಲ್ಲಿ ನಂತರದ ಅವಧಿಗೆ ಅವರಿಗೆ ಸಲ್ಲಬೇಕಾದ ನಿವೇಶನಗಳ ಒಟ್ಟು ಮೌಲ್ಯದ (ಹಂಚಿಕೆ ದರ ಆಧರಿಸಿ) ವಾರ್ಷಿಕ ಶೇಕಡ 6 ರಷ್ಟು ಹಣವನ್ನು ಹೆಚ್ಚುವರಿ ಪರಿಹಾರವಾಗಿ
ನೀಡಲು ಎರಡನೇ ಪಾರ್ಟಿಯು ಒಪ್ಪಿಗೆ ಸೂಚಿಸಿರುತ್ತಾರೆ. (ಈ ಸಂಧರ್ಭದಲ್ಲಿ ಭೂಮಿಯ ಮಾಲೀಕತ್ವ ಅಥವಾ ಇತರೆ ಯಾವುದೇ ವ್ಯಾಜ್ಯ / ಹಕ್ಕುಗಳಿಂದ ವಿಳಂಬ ಆದಲ್ಲಿ ಹೊರತು ಪಡಿಸಿ)

16. ಈ ದಿನಾಂಕದಿಂದ ಷಡ್ಯೂಲ್ ಆಸ್ತಿಯನ್ನು ಎರಡನೇ ಪಾರ್ಟಿಯವರು ಅಭಿವೃದ್ಧಿ ಪಡಿಸಲು ಸ್ವಾಧೀನ ಹೊಂದಿ ಪೂರ್ಣ ಅಧಿಕಾರ ಹೊಂದಿದ್ದು, ಯಾವುದೇ ದಿನಾಂಕದಿಂದ ಕ್ರಯ ಪತ್ರ ನೋಂದಣಿ ಮಾಡಿಕೊಟ್ಟು ಶೇ 40 ರಷ್ಟು ನಿವೇಶನ ನೋಂದಣಿ ಮಾಡಿಸಿಕೊಳ್ಳಲು ಒಂದನೇ ಪಾರ್ಟಿಯವರು ತಮ್ಮ ಒಪ್ಪಿಗೆ ಸೂಚಿಸಿರುತ್ತಾರೆ.

17. ಈ ಒಡಂಬಡಿಕೆಯಲ್ಲಿ ಆಗಿರುವ ವಿಷಯಗಳು ತಂಟೆ ತಕರಾರುಗಳು, ದಾವೆಗಳನ್ನು ಚಿಕ್ಕಮಗಳೂರು ನ್ಯಾಯಾಲಯದ ವ್ಯಾಪ್ತಿಗೆ ಬರುತ್ತದೆ ಎಂದು ಉಭಯತ್ರರು ಒಪ್ಪಿಗೆ ಸೂಚಿಸಿರುತ್ತಾರೆ.

18. ಷೆಡ್ಯೂಲ್ ಆಸ್ತಿಯ ಬೆಲೆಯನ್ನು ಸ್ಟಾಂಪ್ ಶುಲ್ಕಕ್ಕೆ ರೂ._ _ _ _ _ _ _ _ ಗಳೆಂದು ಪರಿಗಣಿಸಿ ಅದರಂತೆ ರೂ._ _ _ _ _ _ _ _ ಗಳನ್ನು ಚಿಕ್ಕಮಗಳೂರು _ _ _ _ _ _ _ _ _ ಬ್ಯಾಂಕ್ ಡಿ.ಡಿ. ಸಂಖ್ಯೆ._ _ _ _ _ _ ದಿನಾಂಕ:_ _ _ _ _ _ _ ರಂತೆ ಚಿಕ್ಕಮಗಳೂರು ಉಪನೋಂದಣಾದಿಕಾರಿಗಳಿಗೆ ನೀಡಲಾಗಿದೆ.

19. ಈ ಒಡಂಬಡಿಕೆಗೆ ಸಂಬಂಧಪಟ್ಟ ಭೂಮಿಯ ಚಕ್ಕು ಬಂದಿಯು ಈ ಕೆಳಕಂಡಂತಿರುತ್ತದೆ.

ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ, ಉಪ್ಪಳ್ಳಿ / ಇಂದಾವರ ಗ್ರಾಮದ ಸರ್ವೆ ನಂಬರುಗಳಾದ _ _ _ _ _ _ _ _ _ _ ರಲ್ಲಿನ _ _ _ _ _ _ _ _ ಎಕರೆ _ _ _ _ _ _ _ _ _ _ _ _ ಗುಂಟೆ ವಿಸ್ತೀರ್ಣ ಪ್ರದೇಶದ ಚಕ್ಕು ಬಂದಿ.

ಪೂರ್ವಕ್ಕೆ : _ _ _ _ _ _,
ಪಶ್ಚಿಮಕ್ಕೆ : _ _ _ _ _ _,
ಉತ್ತರಕ್ಕೆ : _ _ _ _ _ _,
ದಕ್ಷಿಣಕ್ಕೆ : _ _ _ _ _ _,

ಸದರಿ ಪರಸ್ಪರ ಒಡಂಬಡಿಕೆ ಪತ್ರವನ್ನು ಓದಿ ಸರಿಯಾಗಿದೆ ಎಂದು ಒಪ್ಪಿ ಆತ್ಮ ಸಂತೋಷದಿಂದ ಈ ಕೆಳಕಂಡ ಸಮಕ್ಷಮ ರುಜು ಮಾಡಿರುತ್ತಾರೆ.

| | | |
|---|---|---|
| ಭೂಮಿಯ ಮಾಲೀಕರು | ಆಯುಕ್ತರು<br>ನಗರಾಭಿವೃದ್ಧಿ ಪ್ರಾಧಿಕಾರ<br>ಚಿಕ್ಕಮಗಳೂರು | ಅಧ್ಯಕ್ಷರು<br>ನಗರಾಭಿವೃದ್ಧಿ ಪ್ರಾಧಿಕಾರ<br>ಚಿಕ್ಕಮಗಳೂರು. |

ಸಾಕ್ಷಿಗಳು :

1.

2.

**ತೀರ್ಮಾನ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಇಂದಾವರ ಮತ್ತು ಉಪ್ಪಳ್ಳಿ ಗ್ರಾಮಗಳ ವಿವಿದ ಸರ್ವೆ ನಂಬರುಗಳಲ್ಲಿನ ಒಟ್ಟು 200 ಎಕರೆ ಜಮೀನನ್ನು ಪ್ರಾಧಿಕಾರದಿಂದ 40 : 60 ಅನುಪಾತದ ಪಾಲುಗಾರಿಕೆ ಯೋಜನೆಯಲ್ಲಿ ಅಭಿವೃದ್ಧಿಪಡಿಸಿ ವಸತಿ ಬಡಾವಣೆ ನಿರ್ಮಾಣ ಮಾಡಲು ಉದ್ದೇಶಿಸಿರುವ ಭೂಮಿಗೆ ಪರಸ್ಪರ ಒಡಂಬಡಿಕೆ ಪತ್ರದ ಮೂಲಕ ಹಸ್ತಾಂತರಿಸುವ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು ಅದರಂತೆ ಭೂಮಾಲೀಕರು ಹಾಗೂ ಪ್ರಾಧಿಕಾರದ ವತಿಯಿಂದ ರಚಿಸಲು ಉದ್ದೇಶಿಸಿರುವ ಭೂಮಿಗೆ ನ್ಯಾಯವಾದಿಗಳಿಂದ ಕಾನೂನು ಸಲಹೆ / ಸೂಚನೆಯೊಂದಿಗೆ ತಯಾರಿಸಿರುವ ಒಡಂಬಡಿಕೆ ಪತ್ರದನ್ವಯ ಹಸ್ತಾಂತರಿಸಿಕೊಳ್ಳಲು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ವಿಷಯ ನಂ 5.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಇಂದಾವರ ಮತ್ತು ಉಪ್ಪಳ್ಳಿ ಗ್ರಾಮದ ವಿವಿದ ಸರ್ವೆ ನಂಬರುಗಳಲ್ಲಿನ ಒಟ್ಟು 200 ಎಕರೆ ಬಡಾವಣೆಯಲ್ಲಿ ರಚನೆಯಾಗುವ ನಿವೇಶನಗಳಿಗೆ ಪ್ರತಿ ಚದರ ಅಡಿಗೆ ದರ ನಿಗದಿಪಡಿಸುವ ಬಗ್ಗೆ.

**ಟಿಪ್ಪಣಿ :**

ಪ್ರಾಧಿಕಾರವು ರಚಿಸಲು ಉದ್ದೇಶಿಸಿರುವ ಬಡಾವಣೆಯ ರೂಪು ರೇಷೆಗಳು ಮತ್ತು ಅಂದಾಜು ಖರ್ಚುಗಳು ಹಾಗೂ ಪ್ರತಿ ಚದರ ಅಡಿಗೆ ರೂ. 200.00 ಅಥವಾ ರೂ. 250.00 ಅಥವಾ ರೂ. 300.00 ನಿಗದಿಪಡಿಸಿದಲ್ಲಿ ನಿರೀಕ್ಷಿಸುವ ಅಂದಾಜು ಲಾಭ ನಷ್ಟ ಈ ಕೆಳಕಂಡಂತಿದೆ.

## 200 ಎಕರೆ ಬಡಾವಣೆಯ ಅಂದಾಜು ವಿವರಗಳು:

| | | |
|---|---|---|
| 1. ಒಟ್ಟು 200 ಎಕರೆ | = | 8700000 ಚದರ ಅಡಿ |
| 2. ನಿವೇಶನಕ್ಕೆ ಲಭ್ಯವಾಗುವ ಭೂಮಿ | = | 4350000 ಚದರ ಅಡಿ. |
| 3. ಪಾಲುಗಾರಿಕೆಯಲ್ಲಿ ಶೇಕಡ 40 ರಂತೆ ಮಾಲೀಕರಿಗೆ ಲಭ್ಯವಾಗುವ ನಿವೇಶನ. | = | 1740000 ಚದರ ಅಡಿ. |
| 4. ಪ್ರಾಧಿಕಾರಕ್ಕೆ ಲಭ್ಯವಾಗುವ ನಿವೇಶನ | = | 2610000 ಚಡರ ಅಡಿ. |
| 5. ಪ್ರತಿ ಎಕರೆ ಅಭಿವೃದ್ಧಿಗೆ ತಗಲುವ ಅಂದಾಜು ವೆಚ್ಚ | = | ರೂ. 30,00,000=00. |
| 6. 200 ಎಕರೆಗೆ ಅಭಿವೃದ್ಧಿ ವೆಚ್ಚ | = | ರೂ. 6,00,00,000=00. |

## :: ಸಾರ್ವಜನಿಕರಿಗೆ ನಿವೇಶನ ಹಂಚಿಕೆ ಮತ್ತು ಮೂಲೆ ನಿವೇಶನಗಳ ಹರಾಜಿನಿಂದ ಬರಬಹುದಾದ ಮೊತ್ತ ::

1.ಪ್ರತಿ ಚದರ ಅಡಿಗೆ ರೂ.200=00 ನಿಗದಿಪಡಿಸಿದಲ್ಲಿ,
(2610000 x 200) = 52,20,00000=00.
(ಅಂದಾಜು ಏಳು ಕೋಟಿ ಎಂಬತ್ತು ಲಕ್ಷ ನಷ್ಠ).

2.ಪ್ರತಿ ಚದರ ಅಡಿಗೆ ರೂ.250=00 ನಿಗದಿಪಡಿಸಿದಲ್ಲಿ
(2610000 x 250) = 65,25,00,000=00.
(ಅಂದಾಜು ಐದು ಕೋಟಿ ಇಪ್ಪತ್ತೈದು ಲಕ್ಷ ಲಾಭ).

3.ಪ್ರತಿ ಚದರ ಅಡಿಗೆ ರೂ.300=00 ನಿಗದಿಪಡಿಸಿದಲ್ಲಿ
(2610000 x 300) = 78,30,00,000=00
(ಅಂದಾಜು ಹದಿನೆಂಟು ಕೋಟಿ ಲಾಭ).

ಮೇಲ್ಕಂಡ ವಿವರಗಳ ಬಗ್ಗೆ ಚರ್ಚಿಸಿ ದರ ನಿಗದಿಗೆ ನಿರ್ಣಯಕ್ಕೆ ವಿಷಯ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಹೊಸದಾಗಿ ರಚಿಸಲು ಉದ್ದೇಶಿಸಿರುವ ಬಡಾವಣೆಗೆ ವಿದ್ಯುತ್ ಸಂಪರ್ಕಕ್ಕಾಗಿ ಯು.ಜಿ. ಕೇಬಲ್ ಅಳವಡಿಸಲು ಇರುವ ಸಾಧ್ಯತೆಗಳ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಸಾಮಾನ್ಯ ವಿದ್ಯುತ್ ಸಂಪರ್ಕಕ್ಕೆ ಮತ್ತು ಯು. ಜಿ. ಕೇಬಲ್ ಮೂಲಕ ವಿದ್ಯುತ್ ಸಂಪರ್ಕ ಕಾಮಗಾರಿಗೂ ಎಷ್ಟು ಖರ್ಚು ಹೆಚ್ಚುವರಿಯಾಗಲಿದೆ ಎಂಬ ಬಗ್ಗೆ ಕಾರ್ಯಪಾಲಕ ಅಭಿಯಂತರರು ಮೆಸ್ಕಾಂ ರವರು ಒಂದು ಯೋಜನಾ ವರದಿ ಸಲ್ಲಿಸಲು ಒಪ್ಪಿದರು, ಆದ್ದರಿಂದ ಹಂಚಿಕೆ ದರವನ್ನು ರೂ. 250.00 ರಿಂದ ರೂ. 350.00 ರ ಮಧ್ಯೆ ಬಡಾವಣೆಯ ಒಟ್ಟು ಖರ್ಚುಗಳನ್ವಯ ನಿರ್ಧರಿಸಬಹುದಾಗಿದೆ ಎಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

## ಅಧ್ಯಕ್ಷರ ಅಪ್ಪಣೆ ಪಡೆದು ಸಭೆಯು ಮುಕ್ತಾಯವಾಯಿತು.

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

# ದಿನಾಂಕ: 07-01-2011 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ತುರ್ತು ಸಭೆಯ ತೀರ್ಮಾನಗಳು.

## ಸಭೆಯಲ್ಲಿ ಹಾಜರಿದ್ದ ಸದಸ್ಯರು.

| | | |
|---|---|---|
| 1 | ಶ್ರೀ ಬಿ. ಹೆಚ್. ಶ್ರೀಕಾಂತ್ ಪೈ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಅಧ್ಯಕ್ಷರು |
| 2 | ಶ್ರೀ ರಾಜು<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 3 | ಶ್ರೀ ಶ್ರೀನಿವಾಸ್<br>ಅಧ್ಯಕ್ಷರು ನಗರಸಭೆ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 4 | ಶ್ರೀಮತಿ ವೀಣಾ ಶೆಟ್ಟಿ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 5 | ಸಹಾಯಕ ನಿರ್ದೇಶಕರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |
| 6 | ಕಾರ್ಯಪಾಲಕ ಅಭಿಯಂತರರು,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 7 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 8 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಹಾಸನ.<br>(ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 9 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |
| 10 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು. | ಸದಸ್ಯರು |
| 11 | ಪರಿಸರ ಮಾಲಿನ್ಯ ಅಧಿಕಾರಿಗಳು,<br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>ಚಿಕ್ಕಮಗಳೂರು. | ಸದಸ್ಯರು |
| 12 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಆಹ್ವಾನಿತರು |

## ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.

| | | |
|---|---|---|
| 1 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 2 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |

| | | |
|---|---|---|
| 3 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 4 | ಶ್ರೀ ಮಧು ಕುಮಾರ್‌ರಾಜ್ ಅರಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 5 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |

**ವಿಷಯ ನಂ 1.**

ಚಿಕ್ಕಮಗಳೂರು ನಗರದ ಹಿರೇಮಗಳೂರು ಬೈಪಾಸ್ ರಸ್ತೆಯಿಂದ ದೀಪಾನರ್ಸಿಂಗ್ ಹೋಂ ರಸ್ತೆ ನಿರ್ಮಾಣಕ್ಕಾಗಿ ಶ್ರೀಮತಿ ಲಲಿತಮ್ಮ ರವರಿಗೆ ಸಂಬಂಧಿಸಿದ ಬಸವನಹಳ್ಳಿ ಸರ್ವೆ ನಂ. 101 / P8 ರಲ್ಲಿನ 28314 ಚದರ ಅಡಿ ಜಮೀನಿಗೆ ಪರಿಹಾರ ಮೊತ್ತ ನೀಡುವಂತೆ ಘನ ಉಚ್ಛನ್ಯಾಯಾಲಯದ ರಿಟ್ ಪೆಟಿಷನ್ ನಂ.18755 / 2007 ದಿನಾಂಕ: 14-06-2010 ರ ತೀರ್ಪಿನ ಬಗ್ಗೆ ಚರ್ಚಿಸಿ ಸಭೆ ತೀರ್ಮಾನ ಪಡೆಯುವ ಕುರಿತು.

**ಟಿಪ್ಪಣಿ:**

ಚಿಕ್ಕಮಗಳೂರು ನಗರದ ಹಿರೇಮಗಳೂರು ಬೈಪಾಸ್ ರಸ್ತೆಯಿಂದ ದೀಪಾನರ್ಸಿಂಗ್ ಹೋಂ ರಸ್ತೆ ನಿರ್ಮಾಣ ಮಾಡುವಾಗ ಶ್ರೀಮತಿ ಲಲಿತಮ್ಮ ರವರಿಗೆ ಸಂಬಂಧಿಸಿದ ಬಸವನಹಳ್ಳಿ ಸರ್ವೆ ನಂ.101 / P8 ರಲ್ಲಿನ 2 ಎಕರೆ 08 ಗುಂಟೆ ಜಮೀನಿನಲ್ಲಿ 28314 ಚದರ ಅಡಿ ಭೂಮಿಯನ್ನು ಭೂಸ್ವಾಧೀನ ಪ್ರಕ್ರಿಯೆ ನಡೆಸದೆ ಬಳಸಲಾಗಿದೆ ಎಂದು ಭೂಮಾಲೀಕರಾದ ಶ್ರೀಮತಿ ಲಲಿತಮ್ಮ ರವರು ಘನ ಉಚ್ಛನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂ.18755 / 2007 ರಲ್ಲಿ ಪ್ರಕರಣ ದಾಖಲಿಸಿದ್ದು ಘನ ಉಚ್ಛನ್ಯಾಯಾಲಯವು ದಿನಾಂಕ: 14-06-2010 ರಂದು ತೀರ್ಪು ನೀಡಿ ಚದರ ಅಡಿ ಒಂದಕ್ಕೆ ರೂ. 350.00 ನಂತೆ ಭೂಪರಿಹಾರ ಮೊತ್ತ ಪಾವತಿಸುವಂತೆ ಆದೇಶ ನೀಡಿರುತ್ತದೆ. ಪುನಃ ಪ್ರಾಧಿಕಾರದಿಂದ ನಿಗದಿತ ಅವಧಿಯೊಳಗೆ ಮೇಲ್ಮನವಿ ಸಲ್ಲಿಸಿದ್ದು, ದಿನಾಂಕ: 05-01-2011 ರಂದು ಸದರೀ ಮೇಲ್ಮನವಿಯನ್ನು ಘನ ಉಚ್ಛನ್ಯಾಯಾಲಯವು ರದ್ದುಗೊಳಿಸಿದೆ ಹಾಗು ಒಂದು ವಾರ ಕಾಲವಕಾಶದೊಳಗೆ ಮರು ಪರಿಶೀಲನೆಗಾಗಿ ಮನವಿ ಸಲ್ಲಿಸುವಂತೆ ಹಾಗೂ ದಿನಾಂಕ: 14-06-2010 ರ ತೀರ್ಪಿನ ಅನ್ವಯ ಪರಿಹಾರ ಮೊತ್ತ ಪಾವತಿಸುವಂತೆ ಆದೇಶಿಸಿದ್ದು, ಈ ಬಗ್ಗೆ ನ್ಯಾಯಾಲಯ ನಿಂದನೆ ಪ್ರಕರಣವನ್ನು ಸಹ ದಾಖಲಿಸಲಾಗಿದೆ. ಆದ್ದರಿಂದ ಈ ಬಗ್ಗೆ ವಿವರವಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳುವ ಸಲುವಾಗಿ ವಿಷಯವನ್ನು ಸಭೆಗೆ ಮಂಡಿಸಿದೆ.

ವಿಷಯದ ಬಗ್ಗೆ ವಿವರಿಸಲು ಆಯುಕ್ತರನ್ನು ಅಧ್ಯಕ್ಷರು ಕೇಳಿದರು ಆಯುಕ್ತರು ಈ ಕೆಳಕಂಡಂತೆ ಸಭೆಗೆ ವಿವರಿಸಿದರು.

2005 - 06 ನೇ ಸಾಲಿನಲ್ಲಿ ದೀಪಾ ನರ್ಸಿಂಗ್ ಹೋಂ ರಸ್ತೆಯಿಂದ ಹಿರೇಮಗಳೂರು ಬೈ–ಪಾಸ್ ರಸ್ತೆಗೆ ಸಂಪರ್ಕಿಸುವ ಲಿಂಕ್ ರಸ್ತೆ ನಿರ್ಮಾಣವನ್ನು ನಗರಾಭಿವೃದ್ಧಿ ಪ್ರಾಧಿಕಾರ ಕೈಗೆತ್ತಿಕೊಂಡಿತ್ತು, ರಸ್ತೆ ಭಾಗದ ಮಾಲೀಕರು (ಸರ್ವೆ ನಂ. 101 / P ರ 28314.00 ಚದರ ಅಡಿ ಭೂ ಪರಿವರ್ತಿತ ಭೂಮಿಯನ್ನು ಹೊರತುಪಡಿಸಿ) ಪ್ರಾಧಿಕಾರಕ್ಕೆ ಸದರಿ ಭೂಮಿಯನ್ನು ಉಚಿತವಾಗಿ ರಸ್ತೆಗಾಗಿ ನೋಂದಣಿ ಮಾಡಿಕೊಟ್ಟಿದ್ದರು, ಅದಕ್ಕೆ ಪ್ರತಿಯಾಗಿ ಅವರ ಉಳಿದ ಭೂಮಿಯಲ್ಲಿ ಬಡಾವಣೆ ನಿರ್ಮಾಣಕ್ಕೆ ಕೆಲವು ರಿಯಾಯಿತಿಗಳನ್ನು ನೀಡಿತ್ತು, ಈ ಪೈಕಿ ಶ್ರೀಮತಿ ಲಲಿತಮ್ಮ ಕೊಂ ಶಿವಣ್ಣ ಎನ್ನುವವರ ಬಸವನಹಳ್ಳಿ ಗ್ರಾಮದ ಸರ್ವೆ ನಂ.101 / P ರಲ್ಲಿನ 02 ಎಕರೆ 08 ಗುಂಟೆ ಭೂಮಿಯಲ್ಲಿ 28314.00 ಚದರ ಅಡಿ ಭೂಮಿಯನ್ನು ರಸ್ತೆಗಾಗಿ ಬಳಸಿಕೊಳ್ಳಲಾಗಿತ್ತು, ಆದರೆ ಈ ಮಾಲೀಕರು ಸ್ವಯಂ ಪ್ರೇರಿತರಾಗಿ ಭೂಮಿಯನ್ನು ಬಿಟ್ಟುಕೊಡಲು ಒಪ್ಪಿರುವುದಿಲ್ಲ, ಆದರೂ ಯವುದೇ ಒಪ್ಪಿಗೆ ಇಲ್ಲದೇ ಹಾಗೂ ನಿಯಮಾನುಸಾರ ಭೂ ಸ್ವಾಧೀನ ಸಹ ಮಾಡದೇ ಸದರಿ ಭೂಮಿಯನ್ನು ರಸ್ತೆಗಾಗಿ ಬಳಸಿಕೊಳ್ಳಲಾಗಿತ್ತು.

ಸದರಿ ವಿಷಯದ ಬಗ್ಗೆ ಪ್ರಾಧಿಕಾರದ ಕ್ರಮದ ವಿರುದ್ಧ ರಾಜ್ಯ ಹೈಕೋರ್ಟ್‌ನಲ್ಲಿ ಭೂಮಿಯ ಮಾಲೀಕರು ರಿಟ್ ಅರ್ಜಿ (18755 / 2007) ಸಲ್ಲಿಸಿದ್ದರು, ದಿನಾಂಕ: 14-06-2010 ರಂದು ಪ್ರಾಧಿಕಾರದ ಕ್ರಮದ ವಿರುದ್ಧ ಹೈಕೋರ್ಟ್ ತೀರ್ಪು ನೀಡಿ ಭೂ ಮಾಲೀಕರಿಗೆ ಪ್ರತಿ ಚದರ ಅಡಿಗೆ ರೂ. 350=00 ಪರಿಹಾರ ಪಾವತಿಸುವಂತೆ ಸೂಚಿಸಿದೆ, ಸದರಿ ಆದೇಶವು ಒಂದು ತಿಂಗಳ ನಂತರ ಈ ಕಛೇರಿಗೆ ತಲುಪಿದ್ದು ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವಂತೆ ಪ್ರಾಧಿಕಾರದ ನೂತನ ವಕೀಲರಿಗೆ ವಹಿಸಲಾಗಿತ್ತು, ಈ ಬಗ್ಗೆ ಮೇಲ್ಮನವಿ ಅರ್ಜಿ ಸಲ್ಲಿಸಲಾಗಿದ್ದು ಅದು ವಿಚಾರಣೆಗೆ ಬರುವ ಮುನ್ನ ಶ್ರೀಮತಿ ಲಲಿತಮ್ಮ ಕೊಂ ಶಿವಣ್ಣ ಇವರು ಪ್ರಾಧಿಕಾರದ ಆಯುಕ್ತರಾದ ನಾನು ತೀರ್ಪಿನಂತೆ ಪರಿಹಾರ ಹಣ ನೀಡಿಲ್ಲ ಎಂದು ನನ್ನ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿರುತ್ತಾರೆ, ಸದರಿ ಅರ್ಜಿ ದಿನಾಂಕ: 05-01-2011 ರಂದು ವಿಚಾರಣೆಗೆ ಬಂದಿದ್ದು ಅದೇ ದಿನ ಮೇಲ್ಮನವಿ ಅರ್ಜಿ ಬಂದಿದ್ದರಿಂದ ನ್ಯಾಯಾಲಯದ ಆದೇಶ ಒಂದು ವಾರದೊಳಗೆ ಪಾಲಿಸಲು ತಿಳಿಸಿ ನ್ಯಾಯಾಂಗ ನಿಂದನೆ ಅರ್ಜಿಗೆ ಒಂದು ವಾರ ಸಮಯಾವಕಾಶ ನೀಡಿ ಮುಂದೂಡಿರುತ್ತಾರೆ, ಅದೇ ದಿನ ಮೇಲ್ಮನವಿ ಅರ್ಜಿ ವಿಚಾರಣೆಗೆ ಬಂದು ಮೇಲ್ಮನವಿ ವಜಾ ಮಾಡಿರುತ್ತಾರೆ, ಪ್ರತಿ ಚದರ ಅಡಿಗೆ ರೂ. 350=00 ನಿಗದಿಪಡಿಸಿರುವುದು ಅವೈಜ್ಞಾನಿಕ ಆಗಿರುವುದರಿಂದ ಸರ್ಕಾರಿ ಮಾರ್ಗದರ್ಶಿ ಬೆಲೆ ನಿಗದಿಪಡಿಸಲು ನ್ಯಾಯಾಲಯವನ್ನು ಕೋರಿದಾಗ ಮರು ಪರಿಶೀಲನಾ ಅರ್ಜಿಯನ್ನು ಸಲ್ಲಿಸಲು (Review Petition) ಅವಕಾಶ ನೀಡಲಾಗಿದೆ, ಅದರಂತೆ ದಿನಾಂಕ: 14-06-2010 ರ ಆದೇಶದ ಮೇಲೆ ಈ ಕೆಳಕಂಡ ಅಂಶಗಳನ್ನು ಪರಿಗಣಿಸಲು ಮರು ಪರಿಶೀಲನಾ ಅರ್ಜಿ ಸಲ್ಲಿಸಲಾಗಿದೆ. (ದಿನಾಂಕ: 06-01-2011)

1. ಭೂಮಿಯ ಮೇಲೆ ರಸ್ತೆ ನಿರ್ಮಿಸುವಾಗ ಇದ್ದ ಸರ್ಕಾರಿ ಬೆಲೆ ಪ್ರತಿ ಚದರ ಅಡಿ ಭೂ ಪರಿವರ್ತಿತ ಭೂಮಿಗೆ ರೂ. 60.00 ಪರಿಹಾರವಾಗಿ ನಿಗದಿಪಡಿಸುವುದು.
2. ಈಗಿನ ಸರ್ಕಾರಿ ಮಾರ್ಗದರ್ಶಿ ಬೆಲೆ ಪ್ರತಿ ಚದರ ಅಡಿ ಭೂ ಪರಿವರ್ತಿತ ಭೂಮಿಗೆ ರೂ. 120.00 ಪರಿಹಾರವಾಗಿ ನಿಗದಿಪಡಿಸುವುದು, ಅಥವಾ
3. ಮಾಲೀಕರ ಭೂಮಿಯನ್ನು ಅವರಿಗೆ ಹಿಂತಿರುಗಿಸುವುದು.

ಈ ಅರ್ಜಿಯ ವಿಚಾರಣೆ ನಂತರ ಮೇಲಿನ ಅಂಶಗಳ ಆದಾರದಲ್ಲಿ ತೀರ್ಪು ಬಂದಲ್ಲಿ ಪ್ರಾಧಿಕಾರ ಅದರಂತೆ ಅನುಷ್ಠಾನ ಮಾಡಬೇಕಾಗಿದೆ ಆದರೆ ಮರು ಪರಿಶೀಲನಾ ಅರ್ಜಿ ತಿರಸ್ಕರಿಸಿದಲ್ಲಿ ದಿನಾಂಕ: 14-01-2010 ರ ತೀರ್ಪಿನ ಅನುಷ್ಠಾನಕ್ಕೆ ನ್ಯಾಯಾಲಯಕ್ಕೆ ಒಪ್ಪಿಗೆ ನೀಡಬೇಕಾಗುತ್ತದೆ ಎಂದು ಸಭೆಗೆ ವಿವರಗಳನ್ನು ಹೇಳಿದರು.

**ತೀರ್ಮಾನ :**

ಆಯುಕ್ತರು ಮಂಡಿಸಿದ ವಿವರಗಳ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು ನ್ಯಾಯಾಲಯದ ತೀರ್ಪನ್ನು ಗೌರವಿಸಲು ತೀರ್ಮಾನಿಸಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಸಹ ತೀರ್ಮಾನಿಸಲಾಯಿತು.
1. ನ್ಯಾಯಾಲಯದ ಅಂತಿಮ ಆದೇಶ / ತೀರ್ಪು ಆದರಿಸಿ ಅದರಂತೆ ಕ್ರಮವಹಿಸುವುದು.
2. 2005 - 06 ನೇ ಸಾಲಿನಲ್ಲಿ ರಸ್ತೆ ನಿರ್ಮಾಣಕ್ಕೆ ಅಗತ್ಯ ಕಾನೂನು ಕ್ರಮಗಳನ್ನು ವಹಿಸದೇ ಇರುವ ಅಧಿಕಾರಿ / ನೌಕರರ ಬಗ್ಗೆ ಸೂಕ್ತ ಶಿಸ್ತು ಕ್ರಮ ವಹಿಸಲು ಸಂಬಂಧಪಟ್ಟವರಿಗೆ ನೋಟೀಸ್ ನೀಡಿ ಆಗಿರುವ ನಷ್ಟವನ್ನು ತುಂಬಿಸಿಕೊಳ್ಳಲು ಕ್ರಮವಹಿಸುವುದು.
3. 14-06-2010 ರಂದು ಆದ ತೀರ್ಮಾನದ ಬಗ್ಗೆ ನ್ಯಾಯಾಲಯದಲ್ಲಿ ಹಾಜರಿದ್ದು ಯಾವುದೇ ಆಕ್ಷೇಪಣೆ ಮಾಡದಿರುವ ಬಗ್ಗೆ ಪ್ರಾಧಿಕಾರದ ಅಂದಿನ ವಕೀಲರಾದ ಶ್ರೀ ರಮೇಶ್‌ರವರನ್ನು ಪ್ರಾಧಿಕಾರದ ಪ್ಯಾನಲ್‌ನಿಂದ ಕೈ ಬಿಡಲು ತೀರ್ಮಾನಿಸಿರುವುದನ್ನು ಅನುಮೋದಿಸುವುದು ಮತ್ತು ಈ ಬಗ್ಗೆ ಅವರ ಮೇಲೆ ಬಾರ್ ಕೌನ್ಸಿಲ್‌ಗೆ ದೂರು ನೀಡಿ ಮುಂದಿನ ಅಗತ್ಯ ಕ್ರಮ ವಹಿಸುವುದು.

4. ಪ್ರಾಧಿಕಾರದ ಪ್ಯಾನಲ್‌ಗೆ ಹೊಸದಾಗಿ ನೇಮಿಸಿಕೊಂಡಿರುವ ಶ್ರೀಮತಿ ರೂಪ, ರಾಜಾಜಿನಗರ ಬೆಂಗಳೂರು ಇವರ ನೇಮಕಾತಿಗೆ ಅನುಮೋದನೆ ನೀಡುವುದು ಮತ್ತು ಪ್ಯಾನಲ್‌ಗೆ ಹೊಸದಾಗಿ ಈ ಕೆಳಕಂಡವರನ್ನು ಸೇರಿಸಿ ಸೇವೆ ಪಡೆಯಲು ಸಭೆ ಅನುಮೋದನೆ ನೀಡಿತು.

1. ಶ್ರೀ ಪಿ. ವಿ. ಚಂದ್ರಶೇಖರ್, ಹೈಕೋರ್ಟ್ ವಕೀಲರು, ನಂ. 26 / 2, 1 ನೇ ಮಹಡಿ ಶ್ರೀಕೃಷ್ಣ ಬಿಲ್ಡಿಂಗ್, ಅವೆನ್ಯೂ ರಸ್ತೆ, ಬೆಂಗಳೂರು.
2. ಶ್ರೀ ಉ. ನಾಗರಾಜಪ್ಪ, ಹೈಕೋರ್ಟ್ ವಕೀಲರು, ಶೇಷಾದ್ರಿಪುರಂ, ಬೆಂಗಳೂರು.
3. ಶ್ರೀಮತಿ ಸುಧಾ ಬಿ. ಹೈಕೋರ್ಟ್ ವಕೀಲರು, ನಂ. 27 / 3 ಬಿ. ಪಿ. ಹೆಚ್. ಬ್ಲಾಕ್, ಸ್ಯಾಂಕಿ ರಸ್ತೆ, ಬೆಂಗಳೂರು–52.

ವಂದನೆಗಳೊಂದಿಗೆ ಸಭೆ ಮುಕ್ತಾಯವಾಯಿತು.

**ಅಧ್ಯಕ್ಷರ ಅಪ್ಪಣೆ ಪಡೆದು ಸಭೆಯು ಮುಕ್ತಾಯವಾಯಿತು.**

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

# ದಿನಾಂಕ: 31-01-2011 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರು.**

| | | |
|---|---|---|
| 1 | ಶ್ರೀ ಬಿ. ಹೆಚ್. ಶ್ರೀಕಾಂತ್ ಪೈ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಅಧ್ಯಕ್ಷರು |
| 2 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 3 | ಶ್ರೀ ಕೇಶವ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 4 | ಶ್ರೀಮತಿ ಆರ್. ಶಾರದಾ ವೆಂಕಟೇಶ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 5 | ಶ್ರೀ ಕೆ. ಪಿ. ಪರಮೇಶ್ವರ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 6 | ಶ್ರೀ ಹೆಚ್. ಸಿ. ಮಂಜುನಾಥ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 7 | ಸಹಾಯಕ ನಿರ್ದೇಶಕರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |
| 8 | ಕಾರ್ಯಪಾಲಕ ಅಭಿಯಂತರರು,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 9 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ,  ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 10 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಹಾಸನ.<br>(ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 11 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |
| 12 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಆಹ್ವಾನಿತರು |

**ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.**

| | | |
|---|---|---|
| 1 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 2 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |

| | | |
|---|---|---|
| 3 | ಶ್ರೀ ಶ್ರೀನಿವಾಸ್<br>ಅಧ್ಯಕ್ಷರು ನಗರಸಭೆ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 4 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು. | ಸದಸ್ಯರು |
| 5 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 6 | ಪರಿಸರ ಮಾಲಿನ್ಯ ಅಧಿಕಾರಿಗಳು,<br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>ಚಿಕ್ಕಮಗಳೂರು. | ಸದಸ್ಯರು |

**ವಿಷಯ ನಂ 1.**

ದಿನಾಂಕ: 04-10-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆ ಮತ್ತು ದಿನಾಂಕ: 07-01-2011 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ತುರ್ತು ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸುವ ಬಗ್ಗೆ.

**ಟಿಪ್ಪಣಿ :**

ದಿನಾಂಕ: 04-10-2010 ರಂದು ನಡೆದ ನಗರಾಭಿವೃದ್ದಿ ಪ್ರಾಧಿಕಾರದ ಮಾಸಿಕ ಸಭೆ ಮತ್ತು ದಿನಾಂಕ: 07-01-2011 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ತುರ್ತು ಸಭೆಯ ತೀರ್ಮಾನಗಳನ್ನು ಹಾಗೂ ಕ್ರಮ ಕೈಗೊಂಡ ಅನುಸರಣಾ ವರದಿಯನ್ನು ಈ ಕಾರ್ಯಸೂಚಿಯ ಜೊತೆಗೆ ಪ್ರಾಧಿಕಾರದ ಎಲ್ಲಾ ಸದಸ್ಯರುಗಳಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಲು ವಿಷಯ ಮಂಡಿಸಿದೆ.

**ತೀರ್ಮಾನ :**

ದಿನಾಂಕ: 31-01-2011 ರಂದು ಮದ್ಯಾಹ್ನ 3.00 ಗಂಟೆಗೆ ಶ್ರೀ ಬಿ. ಹೆಚ್. ಶ್ರೀಕಾಂತ್ ಪೈ ರವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು ಸಭೆಯಲ್ಲಿ ಹಾಜರಿದ್ದ ಮಾನ್ಯ ಶಾಸಕರು ಹಾಗೂ ಹೊಸದಾಗಿ ಸರ್ಕಾರದಿಂದ ನಾಮಕರಣಗೊಂಡ ನಾಲ್ಕು ಜನ ಸದಸ್ಯರುಗಳು ಮತ್ತು ಉಳಿದ ಎಲ್ಲಾ ಸದಸ್ಯರುಗಳನ್ನು ಆಯುಕ್ತರು ಸ್ವಾಗತಿಸಿದರು, ಅಧ್ಯಕ್ಷರು ವಿಷಯ ಮಂಡಿಸಲು ಸೂಚಿಸಿದರು ಈ ಹಿಂದಿನ ದಿನಾಂಕ: 07-01-2011 ರ ವಿಶೇಷ ತುರ್ತು ಸಭೆಯ ಹಾಗೂ ದಿನಾಂಕ: 04-10-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ನಡವಳಿಗಳ ಮೇಲೆ ಕ್ರಮ ಕೈಗೊಂಡ ಬಗ್ಗೆ ಅನುಸರಣಾ ವರದಿಯನ್ನು ಆಯುಕ್ತರು ಓದಿದರು ಅದರಂತೆ ಹಿಂದಿನ ಸಭೆಗಳ ತೀರ್ಮಾನಗಳನ್ನು ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

**ವಿಷಯ ನಂ 2.**

2010 ನೇ ಸಾಲಿನ ಸೆಪ್ಟಂಬರ್ ಮಾಹೆಯಿಂದ ಡಿಸೆಂಬರ್ ಮಾಹೆ ವರೆಗಿನ ಆದಾಯ ಮತ್ತು ಖರ್ಚಿನ ವಿವರಗಳನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.

**ಟಿಪ್ಪಣಿ:**

2010 ನೇ ಸಾಲಿನ ಸೆಪ್ಟಂಬರ್ ಮಾಹೆಯಿಂದ ಡಿಸೆಂಬರ್ ಮಾಹೆ ವರೆಗಿನ ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ–1 ಅನುಬಂಧ–2 ಅನುಬಂಧ–3 ಮತ್ತು ಅನುಬಂಧ–4 ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದಾಗಿದ್ದು ಸಭೆಗೆ ಮಂಡಿಸಿದೆ.

**ತೀರ್ಮಾನ :**

2010 ನೇ ಸಾಲಿನ ಸೆಪ್ಟಂಬರ್ ಮಾಹೆಯಿಂದ ಡಿಸೆಂಬರ್ ಮಾಹೆ ವರೆಗಿನ ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ–1 ರಿಂದ ಅನುಬಂಧ–4 ರಲ್ಲಿ ತಯಾರಿಸಿರುವುದನ್ನು ಪರಿಶೀಲಿಸಿ ಲೆಕ್ಕಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಗಾಂಧಿನಗರ ಬಡಾವಣೆಯಲ್ಲಿನ ಒಂದು ಉದ್ಯಾನವನ ಹಾಗೂ ಗೃಹಮಂಡಳಿ ಬಡಾವಣೆಯಲ್ಲಿನ ಒಂದು ಉದ್ಯಾನವನವನ್ನು ಅಭಿವೃದ್ಧಿಪಡಿಸಲು ಅನುಮೋದನೆ ಪಡೆಯುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಗಾಂಧಿನಗರ ಬಡಾವಣೆಯ ಒಂದು ಉದ್ಯಾನವನವನ್ನು ರೂ. 12.50 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲು ಈ ಹಿಂದೆ ನಿರ್ಣಯ ಆಗಿತ್ತು, ಅದೇ ರೀತಿ ಗೃಹಮಂಡಳಿ ಬಡಾವಣೆಯ ಒಂದು ಉದ್ಯಾನವನವನ್ನು ರೂ. 7.00 ಲಕ್ಷ ಒಟ್ಟು ರೂ. 19.50 ಲಕ್ಷಗಳ ವೆಚ್ಚದಲ್ಲಿ ಮಕ್ಕಳ ಆಟದ ಉದ್ಯಾನವನವನ್ನಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ, ಸದರಿ ಉದ್ಯಾನವನಗಳನ್ನು ನಿಯಮಾನುಸಾರ ಅನುಮೋದನೆ ಪಡೆದು ಟೆಂಡರ್ / ದರಪಟ್ಟಿ ಅನ್ವಯ ಕಾಮಗಾರಿ ನಿರ್ವಹಿಸುವ ಬಗ್ಗೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಗಾಂಧಿನಗರ ಬಡಾವಣೆಯ ಒಂದು ಉದ್ಯಾನವನವನ್ನು ರೂ. 12.50 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಮತ್ತು ಗೃಹಮಂಡಳಿ ಬಡಾವಣೆಯ ಒಂದು ಉದ್ಯಾನವನವನ್ನು ರೂ. 7.00 ಲಕ್ಷ ಒಟ್ಟು ರೂ. 19.50 ಲಕ್ಷಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಿ ಅನುಮೋದನೆ ನೀಡಲು ತೀರ್ಮಾನಿಸಲಾಯಿತು, ಅಭಿವೃದ್ಧಿ ನಂತರ ನಿರ್ವಹಣೆ ಮಾಡಲು ಸ್ಥಳೀಯ ಪ್ರತಿನಿಧಿಗಳ ಹಾಗೂ ಪ್ರಾಧಿಕಾರದ ಸದಸ್ಯರುಗಳ ಸಮಿತಿ ರಚಿಸಿ ಸಮಿತಿಯ ಸಲಹೆ ಸೂಚನೆಗಳನ್ನು ಪಡೆದು ನಿರ್ವಹಣೆ ಮಾಡಲು ಸರ್ವಾನುಮತದಿಂದ ಸಭೆಯು ಅನುಮೋದಿಸಿತು.

**ವಿಷಯ ನಂ 4.**

ಪ್ರಾಧಿಕಾರದ ವ್ಯಾಪ್ತಿಯಲ್ಲಿನ ನಾಗರೀಕ ಸೌಲಭ್ಯದ ನಿವೇಶನಗಳನ್ನು ಹಂಚಿಕೆ ಮಾಡುವಂತೆ ನೈಟಿಂಗೇಲ್ ಮಹಿಳಾ ಹಾಸ್ಟೆಲ್ ಕಟ್ಟಡ ನಿರ್ಮಾಣಕ್ಕಾಗಿ ಹಾಸ್ಟೆಲ್‌ನ ಮುಖ್ಯಸ್ಥರಾದ ಶ್ರೀಮತಿ ಶಶಿಕಲಾ ಬಿ. ನಾಯಕ್ ಹಾಗೂ ಶ್ರೀ ಕೆ. ಯು. ಶೆಟ್ಟಿ, ಶ್ರೀ ರಾಮಚಂದ್ರ ಮಿಷನ್ ಚಿಕ್ಕಮಗಳೂರು ರವರು ವಿದ್ಯಾಲಯ ಮತ್ತು ಶೈಕ್ಷಣಿಕ ಕಟ್ಟಡ ನಿರ್ಮಾಣ ಮಾಡಲು ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ ಕೋರಿ ಅರ್ಜಿ ಸಲ್ಲಿಸಿರುವ ಕುರಿತು.

**ಟಿಪ್ಪಣಿ :**

ಪ್ರಾಧಿಕಾರದ ವ್ಯಾಪ್ತಿಯಲ್ಲಿನ ನಾಗರೀಕ ಸೌಲಭ್ಯದ ನಿವೇಶನಗಳನ್ನು ಹಂಚಿಕೆ ಮಾಡುವಂತೆ ನೈಟಿಂಗೇಲ್ ಮಹಿಳಾ ಹಾಸ್ಟೆಲ್‌ನ ಕಟ್ಟಡ ನಿರ್ಮಾಣಕ್ಕಾಗಿ ಹಾಸ್ಟೆಲ್‌ನ ಮುಖ್ಯಸ್ಥರಾದ ಶ್ರೀಮತಿ ಶಶಿಕಲಾ ಬಿ. ನಾಯಕ್ ಹಾಗೂ ಶ್ರೀ ಕೆ. ಯು. ಶೆಟ್ಟಿ, ಶ್ರೀ ರಾಮಚಂದ್ರ ಮಿಷನ್ ಚಿಕ್ಕಮಗಳೂರು ರವರು ವಿದ್ಯಾಲಯ ಮತ್ತು ಶೈಕ್ಷಣಿಕ ಕಟ್ಟಡ ನಿರ್ಮಾಣ ಮಾಡಲು ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ ಕೋರಿ ದಿನಾಂಕ: 17-01-2011 ಮತ್ತು 19-01-2011 ರಂದು ಮನವಿ ಸಲ್ಲಿಸಿದ್ದು ನಿವೇಶನ ಹಂಚಿಕೆ ನಿಯಮಾವಳಿಗೆ ಒಳಪಟ್ಟು ನಿಯಮನುಸಾರ ಎಲ್ಲಾ ಮಾಹಿತಿಗಳನ್ನು ಪರಿಶೀಲಿಸಿ ಅರ್ಹರಿದ್ದಲ್ಲಿ ನಿಯಮಾನುಸಾರ ನಿವೇಶನ ಹಂಚಿಕೆ ಮಾಡಲು ಕ್ರಮವಹಿಸಬಹುದಾಗಿರುತ್ತದೆ, ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆಗಾಗಿ ಇರುವ ಷರತ್ತುಗಳನ್ನು ಮತ್ತು ನಿಯಮಾವಳಿಗಳನ್ನು ಅನುಸರಿಸಿ ಆಯಾ ಉದ್ದೇಶಕ್ಕಾಗಿ ನಿವೇಶನ ಕಾಯ್ದಿರಿಸಿ, ಜಾಹಿರಾತು ನೀಡಿ ಅರ್ಜಿ ಸ್ವೀಕರಿಸಿದ ನಂತರ ನಿಯಮಾನುಸಾರ ಆಯ್ಕೆಗೆ ಆದ್ಯತೆ ನೀಡಬಹುದು ಅದರಂತೆ ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಪ್ರಾಧಿಕಾರದ ವ್ಯಾಪ್ತಿಯಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯದ ನಿವೇಶನಗಳಲ್ಲಿ ನೈಟಿಂಗೇಲ್ ಮಹಿಳಾ ಹಾಸ್ಟೇಲ್ ಹಾಗೂ ಶ್ರೀರಾಮಚಂದ್ರ ಮಿಷನ್ ಸಂಸ್ಥೆಗಳಿಗೆ ಅವುಗಳ ಅರ್ಹತೆ ಆದಾರದ ಮೇರೆಗೆ ಸರ್ಕಾರಿ ಆದೇಶದ ಅನ್ವಯ ಹಾಗೂ ನಿವೇಶನ ಹಂಚಿಕೆ ನಿಯಮಗಳಂತೆ ಎಲ್ಲಾ ಮಾಹಿತಿಗಳನ್ನು ಪರಿಶೀಲಿಸಿ ಅರ್ಹರಿದ್ದಲ್ಲಿ ನಿಯಮಾನುಸಾರ ನಿವೇಶನ ಹಂಚಿಕೆ ಮಾಡಲು ಇರುವ ಷರತ್ತುಗಳನ್ನು ಮತ್ತು ನಿಯಮಾವಳಿಗಳನ್ನು ಅನುಸರಿಸಿ ಆಯಾ ಉದ್ದೇಶಕ್ಕಾಗಿ ನಿವೇಶನ ಕಾಯ್ದಿರಿಸಿ, ಜಾಹಿರಾತು ನೀಡಿ ಅರ್ಜಿ ಸ್ವೀಕರಿಸಿದ ನಂತರ ಷರತ್ತಿಗೊಳಪಟ್ಟು ನಿಯಮಾನುಸಾರ ಹಂಚಿಕೆ ಮಾಡಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 5.**

ನಗರ ಪ್ರದೇಶದ ಜನಸಂದಣಿ ಇರುವ ವಸತಿ ಮತ್ತು ವಾಣಿಜ್ಯ ಚಟುವಟಿಕೆಗಳ ಪ್ರದೇಶಗಳಲ್ಲಿ ಸಾಮಿಲ್‌ಗಳನ್ನು ಮತ್ತು ಮೋಟಾರ್ ವಾಹನ ವರ್ಕ್ ಶಾಪ್‌ಗಳು ನಡೆಯುತ್ತಿರುವುದರಿಂದ ಅನೇಕ ಕಡೆ ವಾಯು ಮಾಲಿನ್ಯ ಮತ್ತು ಶಬ್ದ ಮಾಲಿನ್ಯದ ಪರಿಸ್ಥಿತಿ ಹೆಚ್ಚಾಗುತ್ತಿರುವುದರಿಂದ ಸದರಿ ಸಾಮಿಲ್ ಹಾಗೂ ವರ್ಕ್ ಶಾಪ್‌ಗಳನ್ನು ಊರಿನ ಹೊರವಲಯಕ್ಕೆ ಸ್ಥಳಾಂತರಿಸುವ ಬಗ್ಗೆ.

**ಟಿಪ್ಪಣಿ:**

ನಗರ ಪ್ರದೇಶದ ಜನಸಂದಣಿ ಇರುವ ವಸತಿ ಮತ್ತು ವಾಣಿಜ್ಯ ಚಟುವಟಿಕೆಗಳ ಪ್ರದೇಶಗಳಲ್ಲಿ ಸಾಮಿಲ್‌ಗಳನ್ನು ಮತ್ತು ಮೋಟಾರ್ ವಾಹನ ವರ್ಕ್ ಶಾಪ್‌ಗಳು ನಡೆಯುತ್ತಿದ್ದು, ಪ್ರಸ್ತುತ ಇರುವ ಸಾಮಿಲ್‌ಗಳನ್ನು ಅನೇಕ ವರ್ಷಗಳಿಂದ ನಡೆಸುತ್ತಿದ್ದು ಸದರಿ ಪ್ರದೇಶಗಳನ್ನು ಮಹಾಯೋಜನೆಯಲ್ಲಿ ಕೈಗಾರಿಕಾ ವಲಯದಲ್ಲಿ ಮೀಸಲಿಟ್ಟಿರುವ ಪ್ರದೇಶಕ್ಕೆ ಸ್ಥಳಾಂತರಿಸಬಹುದಾಗಿರುತ್ತದೆ, ವಿಷಯದಲ್ಲಿ ತಿಳಿಸಿರುವಂತೆ ನಗರದ ಹಿತದೃಷ್ಟಿಯಿಂದ ಮಾಲೀಕರ ಸಭೆ ಕರೆದು ಸಾಧ್ಯ ಸಾಧ್ಯತೆಗಳ ಬಗ್ಗೆ ಚರ್ಚಿಸಬಹುದಾಗಿದ್ದು, ಪ್ರಾಧಿಕಾರದ ನಿರ್ಣಯವನ್ನು ಸರ್ಕಾರದ ಅನುಮೋದನೆ ಪಡೆದು ಕೈಗಾರಿಕಾ ವಲಯವನ್ನು ನಗರದ ಹೊರ ಭಾಗದಲ್ಲಿ ಗುರುತಿಸಿ ಸ್ಥಳಾಂತರಿಸಬಹುದಾಗಿದೆ, ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ನಗರ ಪ್ರದೇಶದಲ್ಲಿನ ಜನಸಂದಣಿ ಇರುವ ವಸತಿ ಮತ್ತು ವಾಣಿಜ್ಯ ಪ್ರದೇಶಗಳಲ್ಲಿನ ಸಾಮಿಲ್‌ಗಳು, ಗ್ಯಾರೇಜುಗಳು ಹಾಗೂ ಪ್ಲೇನಿಂಗ್ ಮಿಷನ್‌ಗಳನ್ನು ಪ್ರಥಮವಾಗಿ ನಗರ ಸಭೆಯಿಂದ ಎಷ್ಟು ಇವೆ ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಪಡೆದು ನಂತರ ಅವುಗಳನ್ನು ಸ್ಥಳಾಂತರಿಸುವ ಬಗ್ಗೆ ಅವರುಗಳಿಗೆ ಸೂಕ್ತವಾದ ಒಂದೇ ಕಡೆ ಸ್ಥಳಾಂತರಿಸಲು ಬ್ಯಾಂಕ್ ನೆರವು ಒದಗಿಸಲು ಪ್ರಯತ್ನಿಸುವುದು, ಈ ಬಗ್ಗೆ ಮಾಲೀಕರುಗಳ ಸಭೆ ನಡೆಸಿ ಕ್ರಮಕೈಗೊಳ್ಳಬಹುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ವಿಷಯ ನಂ 6.**

ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯ ವಿದ್ಯುತ್ ನಿರ್ವಹಣೆ ಮತ್ತು ದುರಸ್ಥಿಗೆ ಸಂಬಂಧಿಸಿದಂತೆ ಹೊಸದಾಗಿ ಟೆಂಡರ್ ಕರೆಯಲು ಅನುಮೋದನೆ ಪಡೆಯುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯ ವಿದ್ಯುತ್ ನಿರ್ವಹಣೆ ಮತ್ತು ದುರಸ್ಥಿಪಡಿಸುವ ಕಾಮಗಾರಿಯ ಟೆಂಡರ್ ಅವಧಿಯು ಫೆಬ್ರವರಿ 2011 ಕ್ಕೆ ಮುಗಿಯಲಿದ್ದು ಪುನಃ ಮತ್ತೆರಡು ವರ್ಷದ ಅವಧಿಗಾಗಿ ಷರತ್ತುಗಳನ್ನು ವಿಧಿಸಿ ಟೆಂಡರ್ ಕರೆದು ಕಾಮಗಾರಿಯನ್ನು ನೀಡಬಹುದಾಗಿರುತ್ತದೆ, ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯ ವಿದ್ಯುತ್ ನಿರ್ವಹಣೆ ಮತ್ತು ದುರಸ್ಥಿಪಡಿಸುವ ಕಾಮಗಾರಿಯ ಟೆಂಡರ್ ಅವಧಿಯು ಫೆಬ್ರವರಿ 2011 ಕ್ಕೆ ಎರಡು ವರ್ಷದ ಅವಧಿಯು ಮುಗಿಯುವುದರಿಂದ ನಿಯಮಾನುಸಾರ ಮುಂದಿನ ಎರಡು ವರ್ಷದ ಅವಧಿಗೆ ಹೊಸದಾಗಿ ಟೆಂಡರ್ ಕರೆಯುವ ಬಗ್ಗೆ ಸಭೆಯು ಸರ್ವಾನುಮತದಿಂದ ಅನುಮೋದಿಸಲಾಯಿತು.

**ವಿಷಯ ನಂ 7.**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಮತ್ತು ನಗರ ಪ್ರದೇಶದಲ್ಲಿ ಪ್ರಾಧಿಕಾರದ ಅನುಮೋದನೆ ಪಡೆಯದೇ ನಿವೇಶನಗಳ ವಿಭಜನೆ ಮಾಡಿ ನಗರ ಸಭೆಯಲ್ಲಿ ಖಾತೆಯಾಗಿರುವ ಮತ್ತು ಆ ಪ್ರದೇಶದಲ್ಲಿ ಅನೇಕ ನಿರ್ಮಾಣಗಳು ಆಗಿದ್ದು ಉಳಿದ ನಿವೇಶನಗಳಲ್ಲಿ ಮನೆ ನಿರ್ಮಾಣಕ್ಕೆ ತಾಂತ್ರಿಕ ಅಭಿಪ್ರಾಯ ನೀಡುವ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಮತ್ತು ನಗರ ಪ್ರದೇಶದಲ್ಲಿ ಪ್ರಾಧಿಕಾರದ ಅನುಮೋದನೆ ಪಡೆಯದೇ ನಿವೇಶನಗಳ ವಿಭಜನೆ ಮಾಡಿ ನಗರ ಸಭೆಯಲ್ಲಿ ಖಾತೆಯಾಗಿರುವ ಮತ್ತು ಆ ಪ್ರದೇಶದಲ್ಲಿ ಅನೇಕ ನಿರ್ಮಾಣಗಳು ಆಗಿದ್ದು ಉಳಿದ ನಿವೇಶನಗಳಲ್ಲಿ ಮನೆ ನಿರ್ಮಾಣಕ್ಕೆ ತಾಂತ್ರಿಕ ಅಭಿಪ್ರಾಯ ನೀಡುವ ಬಗ್ಗೆ ಮಾನ್ಯ ಅಧ್ಯಕ್ಷರು ಸೂಚಿಸಿರುವಂತೆ ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :-**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಮತ್ತು ನಗರ ಪ್ರದೇಶದಲ್ಲಿ ಪ್ರಾಧಿಕಾರದ ಅನುಮೋದನೆ ಪಡೆಯದೇ ಅನಧೀಕೃತವಾಗಿ ನಿವೇಶನಗಳಾಗಿ ವಿಭಜನೆ ಮಾಡಿ ನಗರ ಸಭೆಯಲ್ಲಿ ಖಾತೆ ಮಾಡಿರುವಂತಹ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಅವಕಾಶ ನೀಡುವುದು ಸೂಕ್ತವಾಗಿರುವುದಿಲ್ಲ ಹಾಗಾಗಿ ಸರ್ಕಾರದಿಂದ ಅಕ್ರಮ ಸಕ್ರಮ ಕಾಯ್ದೆ ಜಾರಿಗೆ ಬಂದ ನಂತರ ಕಾಯ್ದೆ ಪ್ರಕಾರ ಕ್ರಮ ಕೈಗೊಳ್ಳಬಹುದಾಗಿದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಮತ್ತು ನಗರ ಪ್ರದೇಶದಲ್ಲಿ ಪ್ರಾಧಿಕಾರದ ಅನುಮೋದನೆ ಪಡೆಯದೇ ಅನಧೀಕೃತವಾಗಿ ನಿವೇಶನಗಳಾಗಿ ವಿಭಜನೆ ಮಾಡಿ ಖಾತೆ ಮಾಡಿರುವ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಸರ್ಕಾರದ ನಿಯಮಗಳನ್ವಯ ತಾಂತ್ರಿಕ ಅಭಿಪ್ರಾಯ ನೀಡುವ ಬಗ್ಗೆ ಪ್ರಾಧಿಕಾರದ ಸಭೆಯ ಮುಂದೆ ಪ್ರತಿಯೊಂದು ಪ್ರಕರಣಗಳನ್ನು ತಂದು ಚರ್ಚಿಸಿ ನಿಯಮಾನುಸಾರ ಎಲ್ಲಾ ಸೌಕರ್ಯಗಳನ್ನು ಹೊಂದಿದ್ದಲ್ಲಿ ಪರಿಶೀಲಿಸಿ ಅನುಮೋದನೆ ನೀಡಬಹುದೆಂದು ಸಭೆಯು ಸರ್ವಾನುಮತದಿಂದ ಅನುಮೋದಿಸಲಾಯಿತು.

**ವಿಷಯ ನಂ 8.**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಸತಿ ಬಡಾವಣೆಗೆ ಹೊಂದಿಕೊಂಡಂತಿರುವ ಕುರುವಂಗಿ ರಸ್ತೆಯ ಪಕ್ಕದಲ್ಲಿರುವ ವಸತಿ ಉದ್ದೇಶಕ್ಕಾಗಿ ಮೀಸಲಿಟ್ಟಿರುವ ಭೂಮಿಯನ್ನು ಭೂಸ್ವಾಧೀನ / ಖರೀದಿ ಅಥವಾ 40 : 60 ಯೋಜನೆಯಡಿ ವಸತಿ ಬಡಾವಣೆ ನಿರ್ಮಾಣ ಮಾಡಲು ಉದ್ದೇಶಿಸಿರುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಸತಿ ಬಡಾವಣೆಗೆ ಹೊಂದಿಕೊಂಡಂತಿರುವ ಕುರುವಂಗಿ ರಸ್ತೆಯ ಪಕ್ಕದಲ್ಲಿರುವ ವಸತಿ ಪ್ರದೇಶಕ್ಕಾಗಿ ಮೀಸಲಿಟ್ಟಿರುವ ಭೂಮಿಯನ್ನು ಭೂಸ್ವಾಧೀನ / ಖರೀದಿ ಅಥವಾ 40 : 60 ಯೋಜನೆಯಡಿ ವಸತಿ ಬಡಾವಣೆ ನಿರ್ಮಾಣ ಮಾಡಲು ಮತ್ತು ಹಾಲಿ ಇರುವ ವಸತಿ ಬಡಾವಣೆ ನಿರ್ಮಾಣವನ್ನು ವಿಸ್ತರಿಸಲು ಮಾನ್ಯ ಅಧ್ಯಕರು ಸೂಚಿಸಿರುತ್ತಾರೆ, ಈ ಕೆಳಕಂಡ ಸರ್ವೆ ನಂಬರುಗಳ ಭೂಮಿಯಲ್ಲಿ ವಸತಿ ಬಡಾವಣೆ ಯೋಜನೆಯನ್ನು ರೂಪಿಸಲು ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ಸರ್ವೆ ನಂಬರುಗಳು 416, 417, 418, 421, 426, 472, 473, 475, 477, 478, 488, 553, 554, 559, 560, 561, 568, 569, 572, 577, 578, 579, 580, 582, 583, 584, 586, 587, 588, 589 590, 591, 593, 594, 595, 596, 614, 615, ಮತ್ತು ವಿವಿದ ಸರ್ವೆ ನಂಬರುಗಳನ್ನು ಸೂಕ್ತವಾಗಿ ಪರಿಶೀಲಿಸಿ ಬಡಾವಣೆ ನಿರ್ಮಾಣಕ್ಕೆ ಸೂಕ್ತ ಸರ್ವೆ ನಂಬರುಗಳನ್ನು ಗುರುತಿಸಿ ಸರ್ವೆ ನಕ್ಷೆ ತಯಾರಿಸಿ ಬಡಾವಣೆ ರಚನೆ ಮಾಡುವ ಬಗ್ಗೆ ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :–**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಸತಿ ಬಡಾವಣೆಯ ಪಕ್ಕದಲ್ಲಿರುವ ಮತ್ತು ಕುರುವಂಗಿ ರಸ್ತೆಯ ಪಕ್ಕದಲ್ಲಿರುವ ಮತ್ತು ಪ್ರಾಧಿಕಾರದ ವಸತಿ ಬಡಾವಣೆಗೆ ಹೊಂದಿಕೊಂಡಂತಿರುವ ಹಿರೇಮಗಳೂರು ಗ್ರಾಮದ ಸರ್ವೆ ನಂಬರುಗಳಲ್ಲಿನ ಪ್ರದೇಶವು ಮಹಾಯೋಜನಾ ನಕ್ಷೆಯಂತೆ ವಸತಿ ವಲಯದಲ್ಲಿರುತ್ತದೆ, ಬಡಾವಣೆಯ ಪಕ್ಕದಲ್ಲಿರುವ ಪ್ರದೇಶವಾಗಿರುವುದರಿಂದ ನಾಗರೀಕ ಸೌಲಭ್ಯಗಳಾದ ನೀರು ಸರಬರಾಜು ಮತ್ತು ಒಳಚರಂಡಿ, ವಿದ್ಯುತ್ ಸಂಪರ್ಕ ಹಾಗೂ ಇತರೆ ಸೌಲಭ್ಯಗಳನ್ನು ಕಲ್ಪಿಸಲು ಅನುಕೂಲಕರವಾಗಿರುತ್ತದೆ, ಸದರಿ ಭೂಮಿಗಳನ್ನು ಭೂಸ್ವಾಧೀನ / ಪರಸ್ಪರ ಖರೀದಿ ಅಥವಾ 40 : 60 ಪಾಲುಗಾರಿಕೆ ಯೋಜನೆಯಡಿ ವಸತಿ ಬಡಾವಣೆ ನಿರ್ಮಾಣ ಮಾಡುವುದು ಯೋಜನಾ ದೃಷ್ಟಿಯಿಂದ ಸೂಕ್ತವಾಗಿರುತ್ತದೆ, ಸೂಕ್ತ ಪ್ರದೇಶವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲು ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಗೆ ಹೊಂದಿಕೊಂಡಿರುವ ಜಮೀನುಗಳಾಗಿರುವುದರಿಂದ ಕುರುವಂಗಿ ರಸ್ತೆಯ ಪಕ್ಕದಲ್ಲಿರುವ ವಸತಿ ಪ್ರದೇಶಕ್ಕಾಗಿ ಮೀಸಲಿಟ್ಟಿರುವ ಹಿರೇಮಗಳೂರು ಗ್ರಾಮದ ಸರ್ವೆ ನಂ. 416, 417, 418, 419, 420, 421, 472, 473, 475, 477, 478, 488, 540, 541, 542, 543, 544, 553, 554, 559, 560, 561, 568, 569, 572, 577, 578, 579, 580, 582, 583, 584, 586, 587, 588, 589 590, 591, 592 593, 594, 595, 596, 599, 600, 612, 613, 614, 615, 1010, 1011, 1012, 1013, 1014 ಸರ್ವೆ ನಂಬರುಗಳಲ್ಲಿನ ಸುಮಾರು 60 ರಿಂದ 70 ಎಕರೆ ಭೂಮಿಯನ್ನು 40 : 60 ರ ಪಾಲುಗಾರಿಕೆ ಯೋಜನೆಯಡಿ ಅಥವಾ ಪರಸ್ಪರ ಮಾತುಕತೆ ಮೂಲಕ ಖರೀದಿ ಮಾಡುವುದು ಅಥವಾ ಭೂ ಸ್ವಾಧೀನ ಕಾಯ್ದೆಯಡಿ ಭೂಮಿಯನ್ನು ಪಡೆದು ವಸತಿ ಬಡಾವಣೆ ನಿರ್ಮಾಣ ಮಾಡುವುದು ಸೂಕ್ತವಾಗಿರುತ್ತದೆ ಎಂದು ಪರಿಗಣಿಸಿ ಸಭೆಯು ಸರ್ವಾನುಮತದಿಂದ ಅನುಮೋದಿಸಲಾಯಿತು.

**ವಿಷಯ ನಂ 9.**

ಚಿಕ್ಕಮಗಳೂರು ನಗರದ ಉಪ್ಪಳ್ಳಿ ಮತ್ತು ಹಿರೇಮಗಳೂರು ಭಾಗದಲ್ಲಿನ ಮಹಾಯೋಜನಾ ನಕ್ಷೆಯಲ್ಲಿ ಗುರುತಿಸಿರುವ 18.00 ಮೀ ಮತ್ತು 24.00 ಮೀ ರಸ್ತೆಯನ್ನು ಭೂಮಾಲೀಕರ ಒಪ್ಪಿಗೆ ಪಡೆದು ಅಥವ ಭೂಸ್ವಾಧೀನ ಮೂಲಕ ಪಡೆದು ಅಭಿವೃದ್ಧಿಪಡಿಸುವ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ನಗರದ ಮಹಾಯೋಜನಾ ನಕ್ಷೆಯಲ್ಲಿ ಗುರುತಿಸಿರುವ 18.00 ಮೀ ರಸ್ತೆಯು ಹಿರೇಕೊಳಲೆ ಜಿಲ್ಲಾ ಹೆದ್ದಾರಿ ರಸ್ತೆಯಿಂದ ಉಪ್ಪಳ್ಳಿ ಹಳೇ ಬಡಾವಣೆ ಮತ್ತು ಹೊಸ ಬಡಾವಣೆಯಿಂದ ಹಾದು ಚಿಕ್ಕಮಗಳೂರು ನಗರದ ಶಂಕರ್ ಗ್ಯಾರೇಜ್ ಪಕ್ಕದಲ್ಲಿ ಹಾದು ಹೋಗಿರುವ 18.00 ಮೀ ಅಗಲದ ರಸ್ತೆಗೆ ಸೇರುವ ಸಂಪರ್ಕ ರಸ್ತೆಯಾಗಿರುತ್ತದೆ.

ಸದರಿ ರಸ್ತೆಯನ್ನು ಅಭಿವೃದ್ಧಿ ಪಡಿಸಿದಲ್ಲಿ ಸುತ್ತ ಮುತ್ತಲ ಪ್ರದೇಶವು ಅಭಿವೃದ್ಧಿಗೆ ಪೂರಕವಾಗಿರುತ್ತದೆ ಮತ್ತು ನಗರಕ್ಕೆ ಬರುವ ಸಾರ್ವಜನಿಕರಿಗೆ ಹತ್ತಿರದ ರಸ್ತೆಯಾಗುತ್ತದೆ, ಪೈ ಕಲ್ಯಾಣ ಮಂಟಪದ ಪಕ್ಕದಲ್ಲಿ ಹಾದು ಹೋಗುವ 18.00 ಮೀ ರಸ್ತೆಯನ್ನು ಸಹ ಅಭಿವೃದ್ಧಿ ಪಡಿಸಿದಲ್ಲಿ ವಸತಿ ಬಡಾವಣೆಗಳ ರಚನೆಗೆ ಪೂರಕವಾಗಲಿದೆ, ಹಿರೇಮಗಳೂರು ಭಾಗದಲ್ಲಿನ ಮಹಾಯೋಜನಾ ನಕ್ಷೆಯಲ್ಲಿ ಗುರುತಿಸಿರುವ 24.00 ಮೀ ರಸ್ತೆಯು ಬಿಳಿಕೆರೆ – ತರೀಕೆರೆ (ಬೇಲೂರು ರಸ್ತೆ) ರಾಜ್ಯ ಹೆದ್ದಾರಿ ರಸ್ತೆಯಿಂದ ಕುರುವಂಗಿ ರಸ್ತೆಗೆ ಸೇರುವ ರಸ್ತೆಯಾಗಿದ್ದು, ಸದರಿ ರಸ್ತೆ ಅಭಿವೃದ್ಧಿಪಡಿಸಿದಲ್ಲಿ ಬಿ.ಟಿ. ರಸ್ತೆಯಿಂದ ಕುರುವಂಗಿ ರಸ್ತೆಯ ಮಧ್ಯಭಾಗದ ಪ್ರದೇಶಗಳು ಅಭಿವೃದ್ಧಿ ಹೊಂದಲು ಪೂರಕವಾಗಿರುತ್ತದೆ ಮತ್ತು ಅಧಿಕ ಜನಸಂದಣಿಯನ್ನು ನಿಯಂತ್ರಿಸಲು ಮತ್ತು ನಗರಕ್ಕೆ ಸಮೀಪದ ರಸ್ತೆಯಾಗುವುದರಿಂದ ಸುತ್ತಮುತ್ತಲ ಪ್ರದೇಶವು ಅಭಿವೃದ್ಧಿ ದೃಷ್ಟಿಯಿಂದ ಪೂರಕವಾಗಿರುತ್ತದೆ, ಪ್ರಾಧಿಕಾರವು ಈಗ ರಚಿಸಲು ಉದ್ದೇಶಿಸಿರುವ ಉಪ್ಪಳ್ಳಿ ಇಂದಾವರ ಬಡಾವಣೆಯಿಂದ ಹೆಚ್ಚಾಗುವ ಸಂಚಾರದ ಒತ್ತಡವನ್ನು ಸಹ ವಿಭಜಿಸಬಹುದಾಗಿರುತ್ತದೆ.

ಸದರಿ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದರಿಂದ ಈ ರಸ್ತೆಯ ಎರಡೂ ಭಾಗದ ಪ್ರದೇಶವು ಅಭಿವೃದ್ಧಿ ಹೊಂದಲು ಅನುಕೂಲವಾಗುತ್ತದೆ, ಸದರಿ ರಸ್ತೆಗಳನ್ನು ಭೂ ಮಾಲೀಕರ ಒಪ್ಪಿಗೆ ಪಡೆದು ಅಥವಾ ಭೂಸ್ವಾಧೀನ ಮೂಲಕ ಪಡೆದು ಅಭಿವೃದ್ಧಿಪಡಿಸುವ ಬಗ್ಗೆ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿ ಸಭೆಯ ತೀರ್ಮಾನದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :-**

ಚಿಕ್ಕಮಗಳೂರು ನಗರದ ಮಹಾಯೋಜನಾ ನಕ್ಷೆಯು ಅನುಮೋದನೆಯಾಗಿದ್ದು ಈಗಾಗಲೇ ಪ್ರಸ್ತಾಪಿಸಿರುವ 18.00 ಮೀ ಮತ್ತು 24.00 ಮೀ ರಸ್ತೆಯನ್ನು ಗುರುತಿಸಿ ಅಭಿವೃದ್ಧಿಪಡಿಸುವುದರಿಂದ ಎರಡೂ ಭಾಗದ ಪ್ರದೇಶಗಳು ನಗರದ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ಪೂರಕವಾಗಿರುತ್ತದೆ ಮತ್ತು ರಾಜ್ಯ ಹೆದ್ದಾರಿ ರಸ್ತೆಯಿಂದ ಮತ್ತು ಜಿಲ್ಲಾ ಮುಖ್ಯ ರಸ್ತೆಯಿಂದ ಸಂಪರ್ಕ ರಸ್ತೆಯಾಗಿರುವುದರಿಂದ ನಗರದ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ಪೂರಕವಾಗಿರುತ್ತದೆ ಸದರಿ ರಸ್ತೆಯನ್ನು ಅಭಿವೃದ್ಧಿ ಪಡಿಸುವುದು ಸೂಕ್ತವಾಗಿರುತ್ತದೆ, ವಿಷಯವನ್ನು ಸಭೆಗೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿದ್ದು ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರದ ಉಪ್ಪಳ್ಳಿ ಮತ್ತು ಹಿರೇಮಗಳೂರು ಭಾಗದಲ್ಲಿನ 18.00 ಮೀ ಮತ್ತು 24.00 ಮೀ ರಸ್ತೆಗಳನ್ನು ಪ್ರಾಧಿಕಾರದಿಂದ ಅಭಿವೃದ್ಧಿ ಪಡಿಸಲು ಸಂಬಂದಿಸಿದ ಭೂಮಾಲೀಕರುಗಳಿಂದ / ರೈತರಿಂದ ಒಪ್ಪಿಗೆ ಪಡೆದು ನಗರದ ಅಧಿಕ ಜನಸಂದಣಿಯನ್ನು ನಿಯಂತ್ರಿಸಲು ಹಾಗೂ ನಗರದ ಅಭಿವೃದ್ಧಿ ಪಡಿಸಲು ಅನುಕೂಲವಾಗುವಂತೆ ರಸ್ತೆ ಅಭಿವೃದ್ಧಿ ಪಡಿಸಬಹುದೆಂದು ಹಾಗೂ ರಸ್ತೆಗಾಗಿ ಉಚಿತವಾಗಿ ಭೂಮಿ ನೀಡುವವರಿಗೆ ಶೇಕಡ 50 ಕ್ಕಿಂತ ಹೆಚ್ಚಿನ ಪ್ರಮಾಣದ ಜಮೀನನ್ನು ಕಳೆದುಕೊಳ್ಳುವ ರೈತರಿಗೆ ಪರಿಹಾರ ನೀಡುವುದು ಅಥವಾ ಬದಲಿ ಜಾಗ ನೀಡಿ ನೆರವು ನೀಡುವಂತೆ ಹಾಗೂ ಶೇಕಡ 50 ಕ್ಕಿಂತ ಕಡಿಮೆ ಭೂಮಿ ಕಳೆದುಕೊಂಡ ರೈತರುಗಳಿಗೆ ಅಲಿನೇಷನ್, ನಿರಾಕ್ಷೇಪಣಾ ಪತ್ರವನ್ನು (ಎನ್.ಓ.ಸಿ) ಯಾವುದೇ ಶುಲ್ಕಗಳನ್ನು ಪಾವತಿಸಿಕೊಳ್ಳದೇ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 10.**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಕೆಂಪನಹಳ್ಳಿ ಗ್ರಾಮದ ಸರ್ವೆ ನಂ. 9 / 22 ರಲ್ಲಿನ 00 ಎಕರೆ 24 ಗುಂಟೆ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿ ಶ್ರೀ ವೀರುಪಾಕ್ಷ ಜಿ. ಬಿ. ಬಿನ್ ಶ್ರೀ ಬೊಮ್ಮೇಗೌಡ ರವರು ಸಲ್ಲಿಸಿರುವ ಮನವಿಯ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಕೆಂಪನಹಳ್ಳಿ ಗ್ರಾಮದ ಸರ್ವೆ ನಂ. 9 / 22 ರಲ್ಲಿನ 00 ಎಕರೆ 24 ಗುಂಟೆ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್ಎನ್ : ಸಿಆರ್ : 246 : 2009 - 10, ದಿನಾಂಕ: 18-12-2010 ರಂತೆ ವಸತಿಗಾಗಿ ಭೂ ಪರಿವರ್ತನೆ ಹೊಂದಿದೆ. ಸದರಿ ಪ್ರದೇಶದ ಪಶ್ಚಿಮಕ್ಕೆ ಹಾಲಿ 9.00 ಮೀ ಅಗಲದ ರಸ್ತೆ ಇರುತ್ತದೆ, ಅರ್ಜಿದಾರರು ಬಹು ನಿವೇಶನ ವಿನ್ಯಾಸ ಅನುಮೋದನೆ ಕೋರಿದ್ದು ಒಟ್ಟು ವಿಸ್ತೀರ್ಣವು 4000 ಚದರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯದ ಪ್ರದೇಶಗಳಿಗೆ ವಿನಾಯಿತಿ ನೀಡಿ ವಿನ್ಯಾಸ ಅನುಮೋದನೆ ನೀಡಲು ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ಪ್ರಸ್ತಾಪಿಸಿರುತ್ತಾರೆ, ಸರ್ಕಾರದ ಅಧಿಸೂಚನೆಯಂತೆ ಈ ಬಗ್ಗೆ ಅವಕಾಶವಿದೆ ಶೇಕಡ 55 ಕಿಂತ ಹೆಚ್ಚಾಗಿ ವಸತಿಗೆ ನೀಡುವ ವಿಸ್ತೀರ್ಣಕ್ಕೆ ಮಾರುಕಟ್ಟೆ ಬೆಲೆಯನ್ನು ಪಾವತಿಸಿಕೊಳ್ಳಬೇಕಾಗಿದೆ, ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದಾಗಿದೆ, ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :–**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಕೆಂಪನಹಳ್ಳಿ ಗ್ರಾಮದ ಸರ್ವೆ ನಂ. 9 / 22 ರಲ್ಲಿನ 00 ಎಕರೆ 24 ಗುಂಟೆ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್ಎನ್ : ಸಿಆರ್ : 246 : 2009 - 10, ದಿನಾಂಕ: 18-12-2010 ರಂತೆ ವಸತಿಗಾಗಿ ಭೂ ಪರಿವರ್ತನೆ ಹೊಂದಿದ್ದು ಹಾಲಿ 9.00 ಮೀ ಅಗಲದ ರಸ್ತೆ ಸಂಪರ್ಕ ಹೊಂದಿರುತ್ತದೆ, ಅರ್ಜಿದಾರರು ಬಹು ನಿವೇಶನ ವಿನ್ಯಾಸ ಅನುಮೋದನೆ ಕೋರಿದ್ದು ಒಟ್ಟು ವಿಸ್ತೀರ್ಣವು 4000 ಚದರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯದ ಪ್ರದೇಶಗಳಿಗೆ ವಿನಾಯಿತಿ ನೀಡಿ ವಿನ್ಯಾಸ ಅನುಮೋದನೆ ನೀಡಲು ಸರ್ಕಾರದ ಅಧಿಸೂಚನೆಯಂತೆ ಈ ಬಗ್ಗೆ ಅವಕಾಶವಿದೆ ಶೇಕಡ 55 ಕಿಂತ ಹೆಚ್ಚಾಗಿ ವಸತಿಗೆ ನೀಡುವ ವಿಸ್ತೀರ್ಣಕ್ಕೆ ಮಾರುಕಟ್ಟೆ ಬೆಲೆಯನ್ನು ಪಾವತಿಸಿಕೊಳ್ಳಬೇಕಾಗಿದೆ, ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದಾಗಿದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಕೆಂಪನಹಳ್ಳಿ ಗ್ರಾಮದ ಸರ್ವೆ ನಂ. 9 / 22 ರಲ್ಲಿನ 00 ಎಕರೆ 24 ಗುಂಟೆ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್ಎನ್ : ಸಿಆರ್ : 246 : 2009 - 10, ದಿನಾಂಕ: 18-12-2010 ರಂತೆ ವಸತಿಗಾಗಿ ಭೂ ಪರಿವರ್ತನೆ ಹೊಂದಿದ್ದು ಹಾಲಿ 9.00 ಮೀ ಅಗಲದ ರಸ್ತೆ ಸಂಪರ್ಕ ಹೊಂದಿರುತ್ತದೆ, ಅರ್ಜಿದಾರರು ಬಹು ನಿವೇಶನ ವಿನ್ಯಾಸ ಅನುಮೋದನೆ ಕೋರಿದ್ದು ಸದರಿ ಪ್ರದೇಶದ ವಿಸ್ತೀರ್ಣವು 4000 ಚದರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯದ ಪ್ರದೇಶಗಳಿಗೆ ವಿನಾಯಿತಿ ನೀಡಿ ವಿನ್ಯಾಸ ಅನುಮೋದನೆ ನೀಡಲು ಸರ್ಕಾರದ ಅಧಿಸೂಚನೆಯಂತೆ ಈ ಬಗ್ಗೆ ಅವಕಾಶವಿದೆ ಶೇಕಡ 55 ಕಿಂತ ಹೆಚ್ಚಾಗಿ ವಸತಿಗೆ ನೀಡುವ ವಿಸ್ತೀರ್ಣಕ್ಕೆ ಮಾರುಕಟ್ಟೆ ಬೆಲೆಯನ್ನು ಪಾವತಿಸಿಕೊಂಡು ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 11.**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 123 / 2A ರಲ್ಲಿನ 00 ಎಕರೆ 33 ಗುಂಟೆ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿ ಶ್ರೀ ಡಿ. ಎಸ್. ಶಿವಾನಂದ, ಶ್ರೀಮತಿ ಸಿ. ಎನ್. ಸುರೇಖಾ, ಶ್ರೀಮತಿ ನಾಗರತ್ನಮ್ಮ ಮತ್ತು ಮಕ್ಕಳು ರವರು ಸಲ್ಲಿಸಿರುವ ಮನವಿಯ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 123 / 2A ರಲ್ಲಿನ 00 ಎಕರೆ 33 ಗುಂಟೆ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ. ಎಎಲ್‌ಎನ್ : 72 : 1982 - 83, ದಿನಾಂಕ: 07-10-1982 ರಂತೆ ವಸತಿಗಾಗಿ ಭೂ ಪರಿವರ್ತನೆ ಹೊಂದಿದೆ. ಸದರಿ ಪ್ರದೇಶದ ಪಶ್ಚಿಮಕ್ಕೆ ಹಾಲಿ 30.00 ಮೀ ಅಗಲದ ರಾಜ್ಯ ಹೆದ್ದಾರಿ ರಸ್ತೆ ಸಂಪರ್ಕ ಇರುತ್ತದೆ, ಅರ್ಜಿದಾರರು ಬಹು ನಿವೇಶನ ವಿನ್ಯಾಸ ಅನುಮೋದನೆ ಕೋರಿದ್ದು ಒಟ್ಟು ವಿಸ್ತೀರ್ಣವು 4000 ಚದರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯದ ಪ್ರದೇಶಗಳಿಗೆ ವಿನಾಯಿತಿ ನೀಡಿ ವಿನ್ಯಾಸ ಅನುಮೋದನೆ ನೀಡಲು ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ಪ್ರಸ್ತಾಪಿಸಿರುತ್ತಾರೆ, ಸರ್ಕಾರದ ಅಧಿಸೂಚನೆಯಂತೆ ಈ ಬಗ್ಗೆ ಅವಕಾಶವಿದೆ ಶೇಕಡ 55 ಕಿಂತ ಹೆಚ್ಚಾಗಿ ವಸತಿಗೆ ನೀಡುವ ವಿಸ್ತೀರ್ಣಕ್ಕೆ ಮಾರುಕಟ್ಟೆ ಬೆಲೆಯನ್ನು ಪಾವತಿಸಿಕೊಳ್ಳಬೇಕಾಗಿದೆ, ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದಾಗಿದೆ, ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 123 / 2A ರಲ್ಲಿನ 00 ಎಕರೆ 33 ಗುಂಟೆ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ. ಎಎಲ್‌ಎನ್ : 72 : 1982 - 83, ದಿನಾಂಕ: 07-10-1982 ರಂತೆ ವಸತಿಗಾಗಿ ಭೂ ಪರಿವರ್ತನೆ ಹೊಂದಿದ್ದು ಹಾಲಿ 30.00 ಮೀ ಅಗಲದ ರಾಜ್ಯ ಹೆದ್ದಾರಿ ರಸ್ತೆ ಸಂಪರ್ಕ ಇರುತ್ತದೆ, ಅರ್ಜಿದಾರರು ಬಹು ನಿವೇಶನ ವಿನ್ಯಾಸ ಅನುಮೋದನೆ ಕೋರಿದ್ದು ಒಟ್ಟು ವಿಸ್ತೀರ್ಣವು 4000 ಚದರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯದ ಪ್ರದೇಶಗಳಿಗೆ ವಿನಾಯಿತಿ ನೀಡಿ ವಿನ್ಯಾಸ ಅನುಮೋದನೆ ನೀಡಲು ಸರ್ಕಾರದ ಅಧಿಸೂಚನೆಯಂತೆ ಈ ಬಗ್ಗೆ ಅವಕಾಶವಿದೆ ಶೇಕಡ 55 ಕಿಂತ ಹೆಚ್ಚಾಗಿ ವಸತಿಗೆ ನೀಡುವ ವಿಸ್ತೀರ್ಣಕ್ಕೆ ಮಾರುಕಟ್ಟೆ ಬೆಲೆಯನ್ನು ಪಾವತಿಸಿಕೊಳ್ಳಬೇಕಾಗಿದೆ, ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದಾಗಿದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 123 / 2A ರಲ್ಲಿನ 00 ಎಕರೆ 33 ಗುಂಟೆ ಪ್ರದೇಶವು ಈಗಾಗಲೇ ಭೂಪರಿವರ್ತನೆಯಾಗಿರುತ್ತದೆ, ವಸತಿ ವಿನ್ಯಾಸ ಅನುಮೋದನೆ ಕೋರಿರುವ ಬಗ್ಗೆ ಸಾರ್ವಜನಿಕರು ದೂರು ನೀಡಿ 30 ಅಡಿ ರಸ್ತೆ ಬಿಡಬೇಕೆಂದು ದೂರು ನೀಡಲಾಗಿದ್ದ ಬಗ್ಗೆಯೂ ಚರ್ಚಿಸಲಾಗಿ ಅಂತಿಮವಾಗಿ ಕಾಲುವೆ ಬದಿ ಕಾಲುವೆ ಸಂರಕ್ಷಣೆ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಕನಿಷ್ಠ 10 ಅಡಿ ಕಾಲುದಾರಿ ಬಿಟ್ಟು ನಂತರ ನಿಯಮಾನುಸಾರ ವಸತಿ ವಿನ್ಯಾಸ ನೀಡಬಹುದೆಂದು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ನಂ 12.**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 15 / 3B4 ರಲ್ಲಿನ 00 ಎಕರೆ 19 ಗುಂಟೆ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿ ಶ್ರೀ ಬಿ. ಎನ್. ಸುನಿಲ್ ಕುಮಾರ್ ಬಿನ್ ಲೇಟ್ ಬಿ. ಡಿ. ನಾರಾಯಣಗೌಡ ರವರು ಸಲ್ಲಿಸಿರುವ ಮನವಿಯ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 15 / 3B4 ರಲ್ಲಿನ 00 ಎಕರೆ 19 ಗುಂಟೆ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್‌ಎನ್ : ಸಿಆರ್ : 30 : 2010 - 11, ದಿನಾಂಕ: 27-09-2010 ರಂತೆ ವಸತಿಗಾಗಿ ಭೂ ಪರಿವರ್ತನೆ ಹೊಂದಿದೆ. ಸದರಿ ಪ್ರದೇಶಕ್ಕೆ ಹಾಲಿ 9.00 ಮೀ ಅಗಲದ ರಸ್ತೆ ಸಂಪರ್ಕ ಇರುತ್ತದೆ.

ಅರ್ಜಿದಾರರು ಬಹು ನಿವೇಶನ ವಿನ್ಯಾಸ ಅನುಮೋದನೆ ಕೋರಿದ್ದು ಒಟ್ಟು ವಿಸ್ತೀರ್ಣವು 4000 ಚದರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯದ ಪ್ರದೇಶಗಳಿಗೆ ವಿನಾಯಿತಿ ನೀಡಿ ವಿನ್ಯಾಸ ಅನುಮೋದನೆ ನೀಡಲು ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ಪ್ರಸ್ತಾಪಿಸಿರುತ್ತಾರೆ, ಸರ್ಕಾರದ ಅಧಿಸೂಚನೆಯಂತೆ ಈ ಬಗ್ಗೆ ಅವಕಾಶವಿದೆ ಶೇಕಡ 55 ಕಿಂತ ಹೆಚ್ಚಾಗಿ ವಸತಿಗೆ ನೀಡುವ ವಿಸ್ತೀರ್ಣಕ್ಕೆ ಮಾರುಕಟ್ಟೆ ಬೆಲೆಯನ್ನು ಪಾವತಿಸಿಕೊಳ್ಳಬೇಕಾಗಿದೆ, ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದಾಗಿದೆ, ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 15 / 3B4 ರಲ್ಲಿನ 00 ಎಕರೆ 19 ಗುಂಟೆ ಪ್ರದೇಶವು ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್‌ಎನ್ : ಸಿಆರ್ : 30 : 2010 - 11, ದಿನಾಂಕ: 27-09-2010 ರಂತೆ ವಸತಿಗಾಗಿ ಭೂ ಪರಿವರ್ತನೆ ಹೊಂದಿದ್ದು ಹಾಲಿ 9.00 ಮೀ ಅಗಲದ ರಸ್ತೆ ಸಂಪರ್ಕ ಇರುತ್ತದೆ, ಒಟ್ಟು ವಿಸ್ತೀರ್ಣವು 4000 ಚದರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯದ ಪ್ರದೇಶಗಳಿಗೆ ವಿನಾಯಿತಿ ನೀಡಿ ವಿನ್ಯಾಸ ಅನುಮೋದನೆ ನೀಡಲು ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ಪ್ರಸ್ತಾಪಿಸಿರುತ್ತಾರೆ, ಸರ್ಕಾರದ ಅಧಿಸೂಚನೆಯಂತೆ ಈ ಬಗ್ಗೆ ಅವಕಾಶವಿದೆ ಶೇಕಡ 55 ಕಿಂತ ಹೆಚ್ಚಾಗಿ ವಸತಿಗೆ ನೀಡುವ ವಿಸ್ತೀರ್ಣಕ್ಕೆ ಮಾರುಕಟ್ಟೆ ಬೆಲೆಯನ್ನು ಪಾವತಿಸಿಕೊಳ್ಳಬೇಕಾಗಿದೆ, ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದಾಗಿದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ನಿಯಮಾನುಸಾರ ಬಡಾವಣೆ ಅನುಮೋದನೆ ನೀಡಲು ಸಭೆಯು ಒಪ್ಪಿಗೆ ನೀಡಿತು.

**ವಿಷಯ ನಂ 13.**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಸತಿ ಬಡಾವಣೆಯ ನಿವೇಶನಗಳ ಕಂದಾಯ ವಸೂಲಿ ಮನೆ ಕಂದಾಯ ನಿರ್ದರಣೆ, ಖಾತಾ ಶುಲ್ಕ ಮತ್ತು ಖಾತಾ ನಕಲು ಪ್ರತಿಗಳ ನೀಡಿಕೆ ಶುಲ್ಕ, ಕಟ್ಟಡ ಪರವಾನಗಿ ಶುಲ್ಕ, ಮಾಸ್ಟರ್ ಪ್ಲಾನ್ ಪ್ರತಿ ನೀಡುವಿಕೆ ಶುಲ್ಕಗಳ ವಸೂಲಾತಿ ಬಗ್ಗೆ ಪರಿಷ್ಕೃತ ಶುಲ್ಕ ನಿಗದಿಗೊಳಿಸುವ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಸತಿ ಬಡಾವಣೆಯ ನಿವೇಶನಗಳ ಕಂದಾಯ ವಸೂಲಿ ಮನೆ ಕಂದಾಯ ನಿರ್ದರಣೆ, ಖಾತಾ ಶುಲ್ಕ ಮತ್ತು ಖಾತಾ ನಕಲು ಪ್ರತಿಗಳ ನೀಡಿಕೆ ಶುಲ್ಕ, ಕಟ್ಟಡ ಪರವಾನಗಿ ಶುಲ್ಕ, ಮಾಸ್ಟರ್ ಪ್ಲಾನ್ ಪ್ರತಿ ನೀಡುವಿಕೆ ಶುಲ್ಕಗಳ ವಸೂಲಾತಿ ಬಗ್ಗೆ ಶುಲ್ಕವನ್ನು 1996 ರಲ್ಲಿ ನಿಗದಿಗೊಳಿಸಲಾಗಿದ್ದು ಪರಿಷ್ಕರಿಸಬಹುದಾಗಿದ್ದು ಈ ಹಿಂದೆ ಪ್ರಾಧಿಕಾರದ ವಿವಿದ ಅಳತೆಯ ನಿವೇಶನಗಳಿಗೆ ಕಂದಾಯ, ಖಾತಾ ಶುಲ್ಕ ಕಟ್ಟಡ ಪರವಾನಗಿ ಶುಲ್ಕಗಳನ್ನು ಈ ಕೆಳಕಂಡ ದರದಲ್ಲಿ ವಸೂಲಿಸಲಾಗುತ್ತಿದ್ದು ಈ ದರಗಳನ್ನು ಪ್ರಾಧಿಕಾರದ ದಿನಾಂಕ: 17-05-1996 ರ ಸಭೆಯ ವಿಷಯ ಸಂಖ್ಯೆ. 25 ರ ನಿರ್ಣಯದಂತೆ ವಸೂಲ್ಮಾಡಲಾಗುತ್ತಿದೆ, ವಿವರಗಳು ಈ ಕೆಳಗಿನಂತಿದೆ.

| ಕ್ರ. ಸಂ. | ನಿವೇಶನದ ಅಳತೆ | ವಾರ್ಷಿಕ ಕಂದಾಯ | ಖಾತಾ ಶುಲ್ಕ | ಕಟ್ಟಡ ಪರವಾನಗಿ ಶುಲ್ಕ |
|---|---|---|---|---|
| 1. | 20’ x 30’ | 36=00 | 100=00 | 100=00 |
| 2. | 30’ x 40’ | 72=00 | 200=00 | 200=00 |
| 3. | 30’ x 50’ | 100=00 | 250=00 | 250=00 |
| 4. | 40’ x 60’ | 150=00 | 350=00 | 350=00 |
| 5. | 50’ x 80’ | 500=00 | 500=00 | 500=00 |

ಹಾಗೆಯೇ ಮನೆ ಕಂದಾಯವನ್ನು ಎಸ್. ಎ. ಎಸ್. ಮೂಲಕ ನಗರ ಸಭೆಯಲ್ಲಿ ವಸೂಲ್ಮಾಡುವ ದರದಲ್ಲಿಯೇ ವಸೂಲ್ಮಾಡಲಾಗುತ್ತಿದ್ದು, ಚದರ ಒಂದಕ್ಕೆ (ಆರ್. ಸಿ. ಸಿ. ಮನೆಗೆ) ರೂ. 35000=00 ರಿಂದ ರೂ. 45000=00 ವರೆಗೆ ಮೌಲ್ಯ ಲೆಕ್ಕಾಚಾರ ಮಾಡಿ ಮನೆ ಕಂದಾಯ ನಿರ್ಧರಣೆ ಮಾಡಲಾಗುತ್ತಿದೆ, ಮತ್ತು ಖಾತಾ ನಕಲು ನೀಡಲು ರೂ. 50=00 ಶುಲ್ಕ ವಿಧಿಸಲಾಗುತ್ತಿದೆ.

ಬಡಾವಣೆ ನಕ್ಷೆ ನಕಲು ಪ್ರತಿ ಮತ್ತು ಸಿ. ಡಿ. ಪಿ. ನಕ್ಷೆ ನಕಲು ಪ್ರತಿಗಳಿಗೆ ರೂ. 50=00 ರಿಂದ 100=00 ಶುಲ್ಕ ವಿಧಿಸಲಾಗುತ್ತಿದೆ, ಹಾಗೂ ಮಾಸ್ಟರ್ ಪ್ಲಾನ್ ಬ್ಲ್ಯೂ ಪ್ರಿಂಟ್ ಪ್ರತಿಗೆ ಎ4 ಅಳತೆಯ ನಕ್ಷೆಗೆ ರೂ. 100=00 ಕಲರ್ ಪ್ರತಿಗೆ ರೂ. 200=00 ರಿಂದ ರೂ. 300=00 ರವರೆಗೆ ವಸೂಲ್ಮಾಡಲಾಗುತ್ತಿದೆ. ಪ್ರಾಧಿಕಾರದಿಂದ ಅನೇಕ ಅಭಿವೃದ್ದಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದ್ದು, ಸರ್ಕಾರದಿಂದ ಪ್ರಾಧಿಕಾರಕ್ಕೆ ಯಾವುದೇ ರೀತಿಯ ಅನುಧಾನವು ಬಿಡುಗಡೆಯಾಗದಿರುವುದರಿಂದ ಸಿಬ್ಬಂದಿ ವೆಚ್ಚ ಅಧಿಕವಾಗಿದ್ದು ಅದನ್ನು ಭರಿಸುವುದು ಕಷ್ಟಕರವಾಗುತ್ತಿದೆ ಮತ್ತು ಅಭಿವೃದ್ದಿ ಕಾರ್ಯಗಳನ್ನು ಕೈಗೊಳ್ಳುವ ದೃಷ್ಟಿಯಿಂದ ಮೇಲಿನ ಶುಲ್ಕಗಳನ್ನು ಪರಿಷ್ಕರಿಸಿ ಪರಿಷ್ಕೃತ ದರವನ್ನು ನಿಗದಿಗೊಳಿಸಲು ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, 1996 ರಲ್ಲಿ ನಿಗದಿಗೊಳಿಸಲಾಗಿದ್ದ ವಿವಿದ ಬಾಬುಗಳ ಬಾಬ್ತು ಶುಲ್ಕಗಳನ್ನು ಈ ಕೆಳಕಂಡಂತೆ ಪರಿಷ್ಕೃತ ದರವನ್ನು ಪರಿಷ್ಕರಿಸಿ ಸದರಿ ದರವು ದಿನಾಂಕ: 01-02-2011 ರಿಂದ ಜಾರಿಗೆ ಬರುವಂತೆ ಅನುಮೋದಿಸಲಾಗಿದೆ, ಖಾತಾ ನಕಲು ಶುಲ್ಕ ರೂ. 100=00, ನಕ್ಷೆಯ ನಕಲು ಪ್ರತಿಯ ಶುಲ್ಕ ಕನಿಷ್ಠ ರೂ. 200=00 ಗರಿಷ್ಠ ನಕ್ಷೆಯ ಅಳತೆಯಂತೆ ಇರುತ್ತದೆ, ಸಿ. ಡಿ. ಪಿ. ನಕ್ಷೆಯ ಪ್ರತಿಗೆ ಕನಿಷ್ಠ ರೂ. 500=00 ಗರಿಷ್ಠ ನಕ್ಷೆಯ ಅಳತೆಯಂತೆ ಇರುತ್ತದೆ. ಮನೆ ಕಂದಾಯ ನಿಗದಿಗೊಳಿಸಲು ಪ್ರತಿ ಚದರಕ್ಕೆ ನೆಲ ಅಂತಸ್ತಿಗೆ ರೂ. 75000=00 ಹಾಗೂ ಮೊದಲನೇ ಅಂತಸ್ತು ಮತ್ತು ಮೇಲ್ಪಟ್ಟ ಅಂತಸ್ತಿಗೆ ರೂ. 65000=00. ರಂತೆ ನಿಗದಿಗೊಳಿಸಲಾಗಿದೆ. ನಗರ ಸಭೆಯಿಂದ ಕಟ್ಟಡ ಪರವಾನಗಿಗೆ ತಾಂತ್ರಿಕ ಅಭಿಪ್ರಾಯ ಕೋರಿ ಬರುವ ಅರ್ಜಿಗಳಿಗೆ ಸಂಬಂದಿಸಿದಂತೆ ಪ್ರತಿ 5.00 ಚದರಕ್ಕೆ ವಸತಿ ನಿವೇಶನಕ್ಕೆ ಕನಿಷ್ಠ ರೂ. 250=00 ಹಾಗೂ ವಾಣಿಜ್ಯ ನಿವೇಶನಕ್ಕೆ ಕನಿಷ್ಠ ರೂ. 500=00 ರಂತೆ ನಿಗದಿಗೊಳಿಸಲಾಗಿದೆ ಹಾಗೂ 5.00 ಚದುರಕ್ಕಿಂತ ಹೆಚ್ಚಿನ ಅಳತೆಯ ವಸತಿ ನಿವೇಶಕ್ಕೆ ಪ್ರತಿ ಚದರ ಒಂದಕ್ಕೆ ರೂ. 50=00 ರಂತೆ ಹಾಗೂ ವಾಣಿಜ್ಯ ನಿವೇಶನಕ್ಕೆ ರೂ. 100=00 ಗಳನ್ನು ನಿಗದಿಗೊಳಿಸಲಾಗಿದೆ, ನಿರಾಕ್ಷೇಪಣಾ ಪತ್ರ ನೀಡಲು ರೂ. 250=00 ನಿಗದಿಪಡಿಸಲಾಗಿದೆ, ಹಾಗೂ ಕಂಪ್ಯೂಟರ್ ಪ್ಲಾಫಿ ಅಥವಾ ಸಿ. ಡಿ. ಯ ಸಾಫ್ಟ್ ಪ್ರತಿಯನ್ನು ಕೋರಿದಲ್ಲಿ ರೂ. 500=00 ಪಾವತಿಸಿಕೊಳ್ಳಬಹುದಾಗಿರುತ್ತದೆ, ಪರಿಷ್ಕೃತ ದರವನ್ನು ಅಳವಡಿಸಿಕೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ಪರಿಷ್ಕೃತ ದರ ಪಟ್ಟಿಯ ವಿವರಗಳು ಈ ಕೆಳಗಿನಂತಿರುತ್ತದೆ.**

| ಕ್ರ. ಸಂ. | ನಿವೇಶನದ ಅಳತೆ | ವಾರ್ಷಿಕ ಕಂದಾಯ | ಖಾತಾ ಶುಲ್ಕ | ಕಟ್ಟಡ ಪರವಾನಗಿ ಶುಲ್ಕ |
|---|---|---|---|---|
| 1. | 20’ x 30’ | 100=00 | 500=00 | 500=00 |
| 2. | 30’ x 40’ | 250=00 | 1000=00 | 1000=00 |
| 3. | 30’ x 50’ | 250=00 | 1250=00 | 1250=00 |
| 4. | 40’ x 60’ | 500=00 | 1500=00 | 1500=00 |
| 5. | 50’ x 80’ | 1000=00 | 2500=00 | 2500=00 |

**ವಿಷಯ ನಂ 14.**

ಚಿಕ್ಕಮಗಳೂರು ನಗರದ ಬಸವನಹಳ್ಳಿ ಕೆರೆಯ ಮಧ್ಯಭಾಗದಲ್ಲಿ ನಿರ್ಮಿಸಿರುವ ದ್ವೀಪಕ್ಕೆ ಹೋಗಲು ತೂಗು ಸೇತುವೆ ಅಳವಡಿಸಿ ವಿವೇಕಾನಂದ ಸ್ಮಾರಕ ನಿರ್ಮಾಣ ಮಾಡಿ ಅಭಿವೃದ್ದಿ ಪಡಿಸುವ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ನಗರದ ಬಸವನಹಳ್ಳಿ ಕೆರೆಯ ಮಧ್ಯಭಾಗದಲ್ಲಿ ನಿರ್ಮಿಸಿರುವ ದ್ವೀಪಕ್ಕೆ ಹೋಗಲು ತೂಗು ಸೇತುವೆ ನಿರ್ಮಾಣ ಮಾಡಿ ದ್ವೀಪದ ಮಧ್ಯಭಾಗದಲ್ಲಿ ವಿವೇಕಾನಂದ ಸ್ಮಾರಕ ನಿರ್ಮಾಣ ಮಾಡುವುದು ಮತ್ತು ಸಾರ್ವಜನಿಕರು ಮತ್ತು ಮಕ್ಕಳ ಮನರಂಜನೆಗಾಗಿ ಅಭಿವೃದ್ಧಿಪಡಿಸುವುದು ಸೂಕ್ತವಾಗಿರುತ್ತದೆ ಅದರಂತೆ ಸಾರ್ವಜನಿಕರಿಗಾಗಿ ಉಪಯೋಗವಾಗುವ ಅಭಿವೃದ್ಧಿ ಕೆಲಸಗಳನ್ನು ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿರ್ವಹಿಸುವಂತೆ ಮಾನ್ಯ ಶಾಸಕರು ಸೂಚಿಸಿರುವ ಮೇರೆಗೆ ಕೆರೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರದ ಬಸವನಹಳ್ಳಿ ಕೆರೆಯ ಮಧ್ಯಭಾಗದಲ್ಲಿ ನಿರ್ಮಿಸಿರುವ ದ್ವೀಪಕ್ಕೆ ಹೋಗಲು ತೂಗು ಸೇತುವೆ ನಿರ್ಮಾಣ ಮಾಡಿ ದ್ವೀಪದ ಮಧ್ಯಭಾಗದಲ್ಲಿ ವಿವೇಕಾನಂದ ಸ್ಮಾರಕ ನಿರ್ಮಾಣ ಮಾಡುವುದು ಮತ್ತು ಸಾರ್ವಜನಿಕರು ಮತ್ತು ಮಕ್ಕಳ ಮನರಂಜನೆಗಾಗಿ ಅಭಿವೃದ್ಧಿಪಡಿಸುವುದು ಸೂಕ್ತವಾಗಿರುತ್ತದೆ ಅದರಂತೆ ಸಾರ್ವಜನಿಕರಿಗಾಗಿ ಉಪಯೋಗವಾಗುವ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಬಹುದೆಂದು ಸದರಿ ಕಾಮಗಾರಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಅನುಮೋದನೆ ಪಡೆದು ನಿಯಮಾನುಸಾರ ಟೆಂಡರ್ ಕರೆದು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದಲೇ ನಿರ್ವಹಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ಇತರೆ ವಿಷಯಗಳು :

**ವಿಷಯ ನಂ 1.**

ಶ್ರೀ ಕೆ. ವೆಂಕಟೇಶ್ ಬಿನ್ ಶ್ರೀ ಕೆಂಚಯ್ಯ, ಕೆನರಾ ಬ್ಯಾಂಕ್ ರಸ್ತೆ, ಚಿಕ್ಕಮಗಳೂರು ಇವರು ಮುನ್ಸಿಪಲ್ ಅಸೆಸ್‌ಮೆಂಟ್ ನಂ. 4888 / 3294 ರಲ್ಲಿನ 23½ x 50 ಅಡಿ ವಿಸ್ತೀರ್ಣದ ಪ್ರದೇಶದಲ್ಲಿ ಹೌಸ್‌ಹೋಲ್ಡ್ ಯುಟೇನ್‌ಷಿಲ್ ರಿಪೇರ್ಸ್ (ವೆಲ್ಡಿಂಗ್, ಸಾಲ್ಡರಿಂಗ್, ಪ್ಯಾಚಿಂಗ್ ಮತ್ತು ಪಾಲಿಶಿಂಗ್) ಶಾಪ್ ನಿರ್ಮಾಣ ಮಾಡಲು ಪರವಾನಗಿ ಕೋರಿರುವ ಕುರಿತು.

**ಟಿಪ್ಪಣಿ :**

ಶ್ರೀ ಕೆ. ವೆಂಕಟೇಶ್ ಬಿನ್ ಶ್ರೀ ಕೆಂಚಯ್ಯ, ಕೆನರಾ ಬ್ಯಾಂಕ್ ರಸ್ತೆ, ಚಿಕ್ಕಮಗಳೂರು ಇವರು ಮುನ್ಸಿಪಲ್ ಅಸೆಸ್‌ಮೆಂಟ್ ನಂ. 4888 / 3294 ರಲ್ಲಿನ 23½ x 50 ಅಡಿ ವಿಸ್ತೀರ್ಣದ ನಿವೇಶನದಲ್ಲಿ ಹೌಸ್‌ಹೋಲ್ಡ್ ಯುಟೇನ್‌ಷಿಲ್ ರಿಪೇರ್ಸ್ (ವೆಲ್ಡಿಂಗ್, ಸಾಲ್ಡರಿಂಗ್, ಪ್ಯಾಚಿಂಗ್ ಮತ್ತು ಪಾಲಿಶಿಂಗ್) ಶಾಪ್ ನಿರ್ಮಿಸಲು ಪರವಾನಗಿ ಮತ್ತು ಈ ಕಛೇರಿಯ ತಾಂತ್ರಿಕ ಅಭಿಪ್ರಾಯ ಕೋರಿರುತ್ತಾರೆ, ಸದರಿ ನಿವೇಶನದ ಪಶ್ಚಿಮಕ್ಕೆ ಹಾಲಿ 8.60 ಮೀ ಅಗಲದ ರಸ್ತೆ ಸಂಪರ್ಕ ಇರುತ್ತದೆ, ಅನುಮೋದಿತ ಮಹಾಯೋಜನೆಯಲ್ಲಿ ಉದ್ದೇಶಿತ 12.00 ಮೀಟರ್ ಅಗಲದ ರಸ್ತೆ ಇದ್ದು ಸದರಿ ಪ್ರದೇಶವು ವಸತಿಗಾಗಿ ಕಾಯ್ದಿರಿಸಿದೆ, ಆದುದರಿಂದ ವಲಯ ನಿಯಮಾವಳಿ ಪ್ರಕಾರ ವಿಶೇಷ ಸಂದರ್ಭದಲ್ಲಿ ವಸತಿ ವಲಯದಲ್ಲಿ ಹೌಸ್‌ಹೋಲ್ಡ್ ಯುಟೇನ್‌ಷಿಲ್ ರಿಪೇರ್ಸ್ (ವೆಲ್ಡಿಂಗ್, ಸಾಲ್ಡರಿಂಗ್, ಪ್ಯಾಚಿಂಗ್ ಮತ್ತು ಪಾಲಿಶಿಂಗ್) ಶಾಪ್ ನಿರ್ಮಾಣ ಮಾಡಲು ಅವಕಾಶವಿರುತ್ತದೆ, ಸದರಿ ಪ್ರದೇಶದಲ್ಲಿ ಹೌಸ್‌ಹೋಲ್ಡ್ ಯುಟೇನ್‌ಷಿಲ್ ರಿಪೇರ್ಸ್ (ವೆಲ್ಡಿಂಗ್, ಸಾಲ್ಡರಿಂಗ್, ಪ್ಯಾಚಿಂಗ್ ಮತ್ತು ಪಾಲಿಶಿಂಗ್) ಶಾಪ್ ನಿರ್ಮಾಣ ಮಾಡಲು ಪರವಾನಗಿ ಕೋರಿರುವ ಬಗ್ಗೆ ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಕೆ. ವೆಂಕಟೇಶ್ ಬಿನ್ ಶ್ರೀ ಕೆಂಚಯ್ಯ, ಕೆನರಾ ಬ್ಯಾಂಕ್ ರಸ್ತೆ, ಚಿಕ್ಕಮಗಳೂರು ಇವರು ಮುನ್ಸಿಪಲ್ ಅಸೆಸ್‌ಮೆಂಟ್ ನಂ. 4888 / 3294 ರಲ್ಲಿನ 23½ x 50 ಅಡಿ ವಿಸ್ತೀರ್ಣದ ನಿವೇಶನದಲ್ಲಿ ಹೌಸ್‌ಹೋಲ್ಡ್ ಯುಟೇನ್‌ಷಿಲ್ ರಿಪೇರ್ಸ್ (ವೆಲ್ಡಿಂಗ್, ಸಾಲ್ಡರಿಂಗ್, ಪ್ಯಾಚಿಂಗ್ ಮತ್ತು ಪಾಲಿಶಿಂಗ್) ಶಾಪ್ ನಿರ್ಮಿಸಲು ಪರವಾನಗಿ ಕೋರಿದ್ದು ಸದರಿ ನಿವೇಶನದ ಪಶ್ಚಿಮಕ್ಕೆ ಹಾಲಿ 8.60 ಮೀ ಅಗಲದ ರಸ್ತೆ ಸಂಪರ್ಕ ಇರುತ್ತದೆ, ಅನುಮೋದಿತ ಮಹಾಯೋಜನೆಯಲ್ಲಿ ಸದರಿ ಪ್ರದೇಶವು ವಸತಿ ಉದ್ದೇಶಕ್ಕೆ ಕಾಯ್ದಿರಿಸಿದೆ ಹಾಗೂ ಉದ್ದೇಶಿತ 12.00 ಮೀಟರ್ ಅಗಲದ ರಸ್ತೆ ಇರುತ್ತದೆ ಸದರಿ ರಸ್ತೆಯನ್ನು ವಿಸ್ತರಿಸುವ ಷರತ್ತಿಗೊಳಪಟ್ಟಿರುತ್ತದೆ, ಆದುದರಿಂದ ವಲಯ ನಿಯಮಾವಳಿ ಪ್ರಕಾರ ವಿಶೇಷ ಸಂದರ್ಭದಲ್ಲಿ ವಸತಿ ವಲಯದಲ್ಲಿ ಹೌಸ್‌ಹೋಲ್ಡ್ ಯುಟೇನ್‌ಷಿಲ್ ರಿಪೇರ್ಸ್ (ವೆಲ್ಡಿಂಗ್, ಸಾಲ್ಡರಿಂಗ್, ಪ್ಯಾಚಿಂಗ್ ಮತ್ತು ಪಾಲಿಶಿಂಗ್) ಶಾಪ್ ನಿರ್ಮಾಣ ಮಾಡಲು ಅವಕಾಶವಿರುತ್ತದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಕೆನರಾ ಬ್ಯಾಂಕ್ ರಸ್ತೆಯ ಅಕ್ಕ ಪಕ್ಕದಲ್ಲಿ ವಸತಿ ಮತ್ತು ಮತ್ತು ವಾಣಿಜ್ಯಕ್ಕೆ ಸಂಬಂದಿಸಿದ ಕಟ್ಟಡಗಳು ಇದ್ದು ಅತ್ಯಂತ ಜನಸಂದಣಿಯ ಪ್ರದೇಶವಾಗಿರುತ್ತದೆ, ಸದರಿ ಜಾಗದಲ್ಲಿ ಹೌಸ್‌ಹೋಲ್ಡ್ ಯುಟೇನ್‌ಷಿಲ್ ರಿಪೇರ್ಸ್ (ವೆಲ್ಡಿಂಗ್, ಸಾಲ್ಡರಿಂಗ್, ಪ್ಯಾಚಿಂಗ್ ಮತ್ತು ಪಾಲಿಶಿಂಗ್) ಶಾಪ್ ನಿರ್ಮಿಸಲು ಪರವಾನಗಿ ನೀಡುವುದು ಸೂಕ್ತವಲ್ಲವೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ. 2.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ರಾಮನಹಳ್ಳಿ ಗ್ರಾಮದ ಸರ್ವೆ ನಂ. 148 ರಲ್ಲಿನ 1113.28 ಚದರ ಮೀಟರ್ ವಿಸ್ತೀರ್ಣದ ಪ್ರದೇಶದಲ್ಲಿನ ಏಕ ನಿವೇಶನ ಅನುಮೋದನೆಯನ್ನು ವಿಭಜಿಸಿ ಬಹುನಿವೇಶನಗಳನ್ನಾಗಿ ವಿಂಗಡಿಸಿ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ರಾಮನಹಳ್ಳಿ ಗ್ರಾಮದ ಸರ್ವೆ ನಂ. 148 ರಲ್ಲಿನ 1113.28 ಚದರ ಮೀಟರ್ ಪ್ರದೇಶಕ್ಕೆ ವಸತಿಗಾಗಿ ಅನ್ಯಕ್ರಾಂತ ಆದೇಶವಾಗಿದ್ದು, ಈ ಕಛೇರಿಯಿಂದ ಏಕ ನಿವೇಶನ ರೂಪು ರೇಖೆ ನಕ್ಷೆಗೆ ಅನುಮೋದನೆ ನೀಡಲಾಗಿದೆ, ಆದರೆ ಅರ್ಜಿದಾರರು ದಿನಾಂಕ: 21-01-2011 ರಂದು ಅರ್ಜಿ ಸಲ್ಲಿಸಿ ಈಗಾಗಲೇ ಅನುಮೋದನೆ ನೀಡಿರುವ ಏಕ ನಿವೇಶನವನ್ನು ವಿಂಗಡಿಸಿ ಬಹು ನಿವೇಶನಗಳನ್ನಾಗಿ ಮಾಡಿ ಅನುಮೋದಿಸಿಕೊಡಲು ಕೋರಿರುತ್ತಾರೆ, ಆ ಪ್ರದೇಶದ ಬೆಳವಣಿಗೆಗಳು ಮತ್ತು ವಾಹನ ಸಂಚಾರ ಪರಿಶೀಲಿಸಿ ನಿರ್ಣಯ ಕೈಗೊಳ್ಳಬೇಕಿದೆ. ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡುವ ಸಂಬಂದ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ರಾಮನಹಳ್ಳಿ ಗ್ರಾಮದ ಸರ್ವೆ ನಂ. 148 ರಲ್ಲಿನ 1113.28 ಚದರ ಮೀಟರ್ ಪ್ರದೇಶಕ್ಕೆ ವಸತಿಗಾಗಿ ಅನ್ಯಕ್ರಾಂತ ಆದೇಶವಾಗಿದ್ದು, ಈ ಕಛೇರಿಯಿಂದ ಏಕ ನಿವೇಶನ ರೂಪು ರೇಖೆ ನಕ್ಷೆಗೆ ಅನುಮೋದನೆ ನೀಡಲಾಗಿದೆ, ಆದರೆ ಅರ್ಜಿದಾರರು ದಿನಾಂಕ: 21-01-2011 ರಂದು ಅರ್ಜಿ ಸಲ್ಲಿಸಿ ಈಗಾಗಲೇ ಅನುಮೋದನೆ ನೀಡಿರುವ ಏಕ ನಿವೇಶನವನ್ನು ವಿಂಗಡಿಸಿ ಬಹು ನಿವೇಶನಗಳನ್ನಾಗಿ ಮಾಡಿ ಅನುಮೋದಿಸಿಕೊಡಲು ಕೋರಿರುತ್ತಾರೆ, ಒಟ್ಟು ವಿಸ್ತೀರ್ಣವು 4000 ಚದರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ಸಿ. ಎ. ಪ್ರದೇಶಗಳ ವಿನಾಯಿತಿ ನೀಡಿ ವಿನ್ಯಾಸ ಅನುಮೋದನೆ ನೀಡಲು ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ಪ್ರಸ್ತಾಪಿಸಿರುತ್ತಾರೆ, ಸರ್ಕಾರದ ಅಧಿಸೂಚನೆಯಂತೆ ಈ ಬಗ್ಗೆ ಅವಕಾಶವಿದೆ, ಶೇಕಡ 55 ಕ್ಕಿಂತ ಹೆಚ್ಚಿಗೆ ವಸತಿಗೆ ನೀಡುವ ವಿನ್ಯಾಸಕ್ಕೆ ಮಾರುಕಟ್ಟೆ ಬೆಲೆಯನ್ನು ಪಾವ್ತಿಸಿಕೊಳ್ಳಬೇಕಾಗಿದೆ ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದಾಗಿದೆ, ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಈಗಾಗಲೇ ಅನುಮೋದನೆಯಾಗಿರುವ ಏಕ ನಿವೇಶನವನ್ನು ನಿಯಮಾನುಸಾರ ಬಡಾವಣೆ ಅನುಮೋದನೆ ನೀಡಲು ಸಭೆ ನಿರ್ದರಿಸಿತು, ನಗರದ ಹಿತದೃಷ್ಟಿಯಿಂದ ಕನಿಷ್ಟ 02 ಎಕರೆಗೆ ಮಾತ್ರ ಬಡಾವಣೆ ಅನುಮೋದನೆ ನೀಡುವ ಸಂಬಂದ ಮುಂದಿನ ಸಭೆಗೆ ತರಲು ನಿರ್ದರಿಸಲಾಯಿತು, ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಹಾಗೂ ಸರ್ಕಾರಕ್ಕೆ ವಿವರಗಳೊಂದಿಗೆ ಸೂಕ್ತ ಕ್ರಮ ಕೋರಿ ಮನವಿ ಮಾಡಲು ನಿರ್ಧರಿಸಲಾಯಿತು.

**ವಿಷಯ ನಂ 3.**

ಶ್ರೀ ಕೆ. ವಿ. ಮಹಾಬಲ ನ್ಯಾಯವಾದಿಗಳು, ಸುಧಾಮ, ಎರಡನೇ ತಿರುವು, ಸಿ. ಯು. ಡಿ. ಎ. ಬಡಾವಣೆ, ಕಲ್ಯಾಣನಗರ, ಚಿಕ್ಕಮಗಳೂರು ಇವರನ್ನು ಪ್ರಾಧಿಕಾರದ ಪ್ಯಾನಲ್‌ಗೆ ಸೇರಿಸಿಕೊಳ್ಳುವ ಕುರಿತು.

**ಟಿಪ್ಪಣಿ :**

ಶ್ರೀ ಕೆ. ವಿ. ಮಹಾಬಲ ನ್ಯಾಯವಾದಿಗಳು, ಚಿಕ್ಕಮಗಳೂರು ಇವರು ಪ್ರಾಧಿಕಾರದ ನ್ಯಾಯವಾದಿಗಳ ಪ್ಯಾನಲ್‌ಗೆ ಸೇರಿಸಿಕೊಳ್ಳಲು ದಿನಾಂಕ: 24-01-2011 ರಂದು ಅರ್ಜಿ ಸಲ್ಲಿಸಿರುತ್ತಾರೆ, ಸದರಿಯವರು ಅರ್ಜಿಯೊಂದಿಗೆ ಅವರ ಬಯೋ ಡಾಟಾ ಸಹ ಸಲ್ಲಿಸಿರುತ್ತಾರೆ, ಸದರಿಯವರನ್ನು ಪ್ರಾಧಿಕಾರದ ನ್ಯಾಯವಾದಿಗಳ ಪ್ಯಾನಲ್‌ಗೆ ಸೇರಿಸಿಕೊಳ್ಳುವ ಸಲುವಾಗಿ ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಶ್ರೀ ಕೆ. ವಿ. ಮಹಾಬಲ ನ್ಯಾಯವಾದಿಗಳು, ಚಿಕ್ಕಮಗಳೂರು ಇವರನ್ನು ಪ್ರಾಧಿಕಾರದ ನ್ಯಾಯವಾದಿಗಳ ಪ್ಯಾನಲ್‌ಗೆ ಸೇರಿಸಿಕೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ. 4.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಇಂದಾವರ ಗ್ರಾಮದ ಸರ್ವೆ ನಂಬರುಗಳಲ್ಲಿ ರಚಿಸಲು ಉದ್ದೇಶಿಸಿರುವ ಬೃಹತ್ ಬಡಾವಣೆಗೆ ಸರ್ಕಾರದಿಂದ ಯೋಜನಾ ಮಂಜೂರಾತಿಗೆ ಕೆಲವು ಬದಲಾವಣೆಗಳೊಂದಿಗೆ ಪ್ರಸ್ಥಾವನೆ ಸಲ್ಲಿಸುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಇಂದಾವರ ಸರ್ವೆ ನಂಬರುಗಳಲ್ಲಿ ಒಟ್ಟು 200 ಎಕರೆ ಭೂಮಿಯಲ್ಲಿ ಪ್ರಾಧಿಕಾರದ ವತಿಯಿಂದ ಬಡಾವಣೆ ರಚಿಸಲು ಪೂರಕವಾಗಿ ಭೂಮಿಯನ್ನು ಸ್ವಾಧೀನಕ್ಕೆ ಪಡೆಯಲು ಸರ್ಕಾರವು ದಿನಾಂಕ: 08-01-2010 ರಂದು ಅನುಮತಿ ನೀಡಿತ್ತು, ಅದರಂತೆ ಪ್ರಥಮ ಆದ್ಯತೆಯಾಗಿ ಭೂಮಾಲೀಕರು / ಪ್ರಾಧಿಕಾರದ 40 : 60 ಪಾಲುಗಾರಿಕೆ ಯೋಜನೆಯಡಿ ಭೂಮಿ ಪಡೆಯಲು ಸರ್ವೆ ಮಾಡಿಸಲಾಗಿದೆ, ಪ್ರಕಟಣೆ ನೋಟೀಸ್ ಜಾರಿ ಮಾಡಲಾಗಿದೆ, ಶೇಕಡ 95 ಕ್ಕೂ ಹೆಚ್ಚು ಮಾಲೀಕರು ಈ ಯೋಜನೆಯಡಿ ಭೂಮಿಯನ್ನು ಸ್ವಾಧೀನಕ್ಕೆ ನೀಡಲು ಒಪ್ಪಿರುತ್ತಾರೆ, ಈ ದಿನಕ್ಕೆ ಒಟ್ಟು 151.19 ಎಕರೆ ಭೂಮಿಯನ್ನು ಮಾಲೀಕರು ಪ್ರಾಧಿಕಾರದ ಜೊತೆ ಪರಸ್ಪರ ಒಡಂಬಡಿಕೆಗೆ ನೋಂದಣಿ ಮಾಡಿ ಸ್ವಾಧೀನ ನೀಡಿರುತ್ತಾರೆ, ಒಟ್ಟು 44.00 ಎಕರೆ ಭೂಮಿಗೆ ಸಂಬಂದಿಸಿದಂತೆ ಮಾಲೀಕರು ಒಡಂಬಡಿಕೆಗೆ ಒಪ್ಪಿಗೆ ಸೂಚಿಸಿದ್ದರೂ ಕಾನೂನಿನ ಕೆಲ ನಿಯಮಗಳಂತೆ ದಾಖಲೆ ಸಲ್ಲಿಸಿ ನೋಂದಣಿ ಮಾಡಲು ವಿಳಂಬ ಮಾಡುತ್ತಿದ್ದಾರೆ, ಆದ್ದರಿಂದ ಈ ಭೂಮಿಯನ್ನು ಭೂಸ್ವಾಧೀನ ಪ್ರಕ್ರಿಯೆ ಮೂಲಕ ಪಡೆಯಲು ಕ್ರಮ ಕೈಗೊಳ್ಳಬೇಕಿದೆ, ಅದೇ ರೀತಿ ಭೂಮಿಯ ಮಾಲಿಕತ್ವಕ್ಕೆ ಸಂಬಂದಿಸಿದಂತೆ ಸಮಸ್ಯೆಗಳಿರುವ ಹಾಗೂ ಪರಿಶಿಷ್ಟ ಜಾತಿ ರೈತರಿಗೆ ಮಂಜೂರಾಗಿರುವ (ಪಿ.ಟಿ.ಸಿ.ಎಲ್) ಭೂಮಿಯನ್ನು ಸಹ ಭೂಸ್ವಾಧೀನದ ಮೂಲಕ ಪಡೆಯಬೇಕಾಗಿರುತ್ತದೆ, ಸದರಿ 200 ಎಕರೆ ಭೂಮಿಯಲ್ಲಿ ಸರ್ವೆ ನಂ. 47, 49 ರಲ್ಲಿ ಒಟ್ಟು 23 ಎಕರೆ ಭೂಮಿ ಸರ್ಕಾರಿ ಗೋಮಾಳ ಆಗಿದ್ದು ಸದರಿ ಭೂಮಿಯು ಆಶ್ರಯ ಯೋಜನೆ ಹಾಗೂ ಶಾಲೆಯ ಉದ್ದೇಶಕ್ಕೆ ಬಳಸಿಕೊಳ್ಳಲು ಮಾನ್ಯ ಶಾಸಕರು ಅಭಿಪ್ರಾಯಪಟ್ಟಿರುವುದರಿಂದ ಯೋಜನೆಯಿಂದ ಸದರಿ ಭೂಮಿಯನ್ನು ಕೈಬಿಡುವುದು ಸೂಕ್ತವಾಗಿರುತ್ತದೆ.

ಸದರಿ ಭೂಮಿಗೆ ಹೊಂದಿಕೊಂಡಿರುವ ಸರ್ವೆ ನಂ. 35 ರ ಒಟ್ಟು 12.26 ಎಕರೆ ಭೂಮಿಯನ್ನು ಯೋಜನೆ ವ್ಯಾಪ್ತಿಗೆ ತರಬಹುದಾಗಿದ್ದು ವಿಷಯವನ್ನು ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

ಮೇಲ್ಕಂಡ ಬದಲಾವಣೆಗಳೊಂದಿಗೆ ಒಟ್ಟು 193.19 ಎಕರೆ ಭೂಮಿಯಲ್ಲಿ ಬಡಾವಣೆ ರಚಿಸಲು ನಕ್ಷೆಯನ್ನು ತಯಾರಿಸಿದ್ದು ಸಭೆಗೆ ಮಂಡಿಸಲಾಗುತ್ತಿದೆ, ಅದರಂತೆ ಈ ಕೆಳಕಂಡ ವಿವರಗಳನ್ನು ಸಹ ಮಂಡಿಸಲಾಗುತ್ತಿದೆ.

ಉಪ್ಪಳ್ಳಿ ಇಂದಾವರ ಸರ್ವೆ ನಂಬರುಗಳ ಒಟ್ಟು 193.19 ಎಕರೆ ಭೂಮಿಯಲ್ಲಿ ಬಡಾವಣೆ ರಚನೆಗೆ ಸರ್ಕಾರದ ಅನುಮೋದನೆಗೆ ಈ ಕೆಳಕಂಡಂತೆ ಪ್ರಸ್ಥಾವನೆ ಸಲ್ಲಿಸಬಹುದಾಗಿರುತ್ತದೆ.

ಬಡಾವಣೆಯಲ್ಲಿನ ವಿವಿದ ಅಳತೆಯ ನಿವೇಶನಗಳ ರಚನೆಯ ವಿವರಗಳು.

1. 24.00 x 30.00 (80’ x 100’) ಮೀ ಅಳತೆಯ ಒಟ್ಟು 110 ನಿವೇಶನಗಳು.
2. 15.00 x 24.00 (50’ x 80’) ಮೀ ಅಳತೆಯ ಒಟ್ಟು 282 ನಿವೇಶನಗಳು.
3. 12.00 x 18.00 (40’ x 60’) ಮೀ ಅಳತೆಯ ಒಟ್ಟು 282 ನಿವೇಶನಗಳು.
4. 9.00 x 15.00 (30’ x 50’) ಮೀ ಅಳತೆಯ ಒಟ್ಟು 240 ನಿವೇಶನಗಳು.
5. 9.00 x 12.00 (30’ x 40’) ಮೀ ಅಳತೆಯ ಒಟ್ಟು 342 ನಿವೇಶನಗಳು.
6. 6.00 x 9.00 (20’ x 30’) ಮೀ ಅಳತೆಯ ಒಟ್ಟು 353 ನಿವೇಶನಗಳು.
7. ಮೂಲೆ ನಿವೇಶನ ಮತ್ತು ಅನಿಯತ ನಿವೇಶನಗಳು ಒಟ್ಟು 49816.45 ಚ. ಮೀ. (ಒಟ್ಟು 124 ನಿವೇಶನಗಳು)
8. ವಾಣಿಜ್ಯ ನಿವೇಶನಗಳು ಒಟ್ಟು 15826.93 ಚದರ ಮೀಟರ್‌ಗಳು. (ಒಟ್ಟು 28 ನಿವೇಶನಗಳು)
9. ನಾಗರೀಕ ಸೌಲಭ್ಯದ ನಿವೇಶನಗಳು ಒಟ್ಟು 72881.12 ಚದರ ಮೀಟರ್‌ಗಳು.

ಮೇಲಿನ ಕ್ರಮ ಸಂಖ್ಯೆ. 1, 2, 3, 4 ಮತ್ತು 5 ರಲ್ಲಿ ಗುರುತಿಸಿರುವ ನಿವೇಶನಗಳಲ್ಲಿ ಒಟ್ಟು 40 ಭಾಗ ಭೂಮಾಲೀಕರಿಗೆ ನೀಡಬೇಕಾಗಿರುತ್ತದೆ ಉಳಿದಂತೆ ಶೇಕಡ 60 ರ ಭಾಗ ಅಂದರೆ ಒಟ್ಟು **186580.80** ಚದರ ಮೀಟರ್‌ಗಳು ಪ್ರಾಧಿಕಾರಕ್ಕೆ ಲಭ್ಯವಾಗುತ್ತದೆ, ಈಗಾಗಲೇ ನಿರ್ಣಯ ಆಗಿರುವಂತೆ ಪ್ರತಿ ಚದರ ಮೀಟರಿಗೆ ರೂ. 3229=00 (ಚದರ ಅಡಿಗೆ ರೂ. 300=00) ನಿಗದಿಪಡಿಸಿದಲ್ಲಿ ಪ್ರಾಧಿಕಾರಕ್ಕೆ **ರೂ. 60,24,69,403=00** ಮೊತ್ತ ಬರಲಿದೆ. ಮೇಲಿನ ಕ್ರಮ ಸಂಖ್ಯೆ. 6 ರ ಭಾಗದ ಒಟ್ಟು 353 ನಿವೇಶನಗಳಲ್ಲಿ ಶೇಕಡ 50 ರ ಭಾಗದಲ್ಲಿ ಅಂದರೆ 88 ನಿವೇಶನಗಳನ್ನು ಪ್ರತಿ ಚದರ ಮೀಟರಿಗೆ ರೂ. 1615.00 (ಚದರ ಅಡಿಗೆ ರೂ. 150.00) ದರದಲ್ಲಿ (ಶೇಕಡ 50 ರ ರಿಯಾಯಿತಿ ದರದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ) ಮತ್ತು ಶೇಕಡ 50 ರಷ್ಟು ಭಾಗವನ್ನು ಅಂದರೆ 88 ನಿವೇಶನಗಳನ್ನು ಚದರ ಮೀಟರ್ ಒಂದಕ್ಕೆ ರೂ. 808.00 (ಚದರ ಅಡಿಗೆ ರೂ. 75.00) ದರದಲ್ಲಿ ಹಂಚಿಕೆ ಮಾಡಬೇಕಿದೆ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಆರ್ಥಿಕವಾಗಿ ಹಿಂದುಳಿದವರಿಗೆ) ಉಳಿದಂತೆ ಶೇಕಡ 50 ರಷ್ಟು ಭಾಗದ 177 ನಿವೇಶನವನ್ನು ಚದರ ಮೀಟರ್ ಒಂದಕ್ಕೆ ರೂ. 3229.00 (ಚದರ ಅಡಿಗೆ ರೂ. 300.00) ರ ದರದಲ್ಲಿ ಹಂಚಿಕೆ ಮಾಡಲಾಗುತ್ತಿದೆ, ಹಾಗೂ **ಮೂಲೆ ನಿವೇಶನ ಮತ್ತು ಅನಿಯತ ನಿವೇಶನದ** ಒಟ್ಟು ವಿಸ್ತೀರ್ಣ 49816.45 ಚ. ಮೀ ಹರಾಜು ಮಾಡಿದಲ್ಲಿ ಅಂದಾಜು ಚದರ ಮೀಟರ್ ಒಂದಕ್ಕೆ ರೂ. 3767.00 (ಚದರ ಅಡಿಗೆ ರೂ. 350=00) ರಂತೆ ಹರಾಜಾದರೂ ಒಟ್ಟು **ರೂ. 18,76,58,567=00** ಮೊತ್ತ ಬರಲಿದೆ. **ವಾಣಿಜ್ಯ ನಿವೇಶನದ** ಒಟ್ಟು 15826.93 ಚದರ ಮೀಟರ್ ವಿಸ್ತೀರ್ಣದ ನಿವೇಶನವನ್ನು ಹರಾಜು ಮಾಡಿದಲ್ಲಿ ಅಂದಾಜು ಚದರ ಮೀಟರ್ ಒಂದಕ್ಕೆ ರೂ. 4306.00 (ಚದರ ಅಡಿಗೆ ರೂ. 400=00) ರಂತೆ ಒಟ್ಟು **ರೂ. 6,81,50,761=00** ಮೊತ್ತ ಬರಲಿದೆ. ಒಟ್ಟು ಈ ಯೋಜನೆಯಿಂದ ಅಂದಾಜು **ರೂ. 97,91,48,575=00** ಮೊತ್ತ ಬರಲಿದ್ದು, ಸದರಿ ಬಡಾವಣೆಯ ಅಭಿವೃದ್ಧಿ ಕಾರ್ಯಗಳಿಗಾಗಿ ಪ್ರತಿ ಎಕರೆಗೆ ಅಂದಾಜು ರೂ. 40,00,000=00 ರಂತೆ **ರೂ. 77,27,60,000=00** ರಷ್ಟು ಹಾಗೂ ಆಡಳಿತಾತ್ಮಕ ವೆಚ್ಚ ಮತ್ತು ಎಸ್ಕಲೇಶನ್ ಚಾರ್ಜ್ ವೆಚ್ಚವು ಸೇರಿದಂತೆ ಒಟ್ಟು ಖರ್ಚಿನ ಶೇಕಡ 10 ರಷ್ಟು ಅಂದರೆ ರೂ. 7,72,76,000=00, ಸೇರಿ ಒಟ್ಟು **ರೂ. 85,00,36,000=00** ಖರ್ಚಾಗಬಹುದಾಗಿದೆ. ವಿವರಗಳನ್ನು (ಅನುಬಂಧ– 1) ರಲ್ಲಿ ಲಗತ್ತಿಸಿದೆ. ಹಾಗೂ M.O.U. ಮುಖಾಂತರ ಭೂಮಿ ಪಡೆಯಲು ನೋಂದಣಿ ವೆಚ್ಚ ಶೇಕಡ 6 ರಷ್ಟು ಬಡಾವಣೆ ರಚನೆಗೆ ನಕ್ಷೆ ಹಾಗೂ ಯೋಜನಾ ವರದಿ ತಯಾರಿಸುವುದು ಮತ್ತು ಜಾಹಿರಾತು ನೀಡುವುದು ಹಾಗೂ ಭೂಮಿಯನ್ನು ಸಮತಟ್ಟು ಮಾಡಿ ಬಡಾವಣೆ ರಚಿಸುವುದು ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸದರಿ ಯೋಜನೆಗೆ ನಿರಾಕ್ಷೇಪಣಾ ಪತ್ರ ಪಡೆಯುವುದು

ಹಾಗೂ ಯೋಜನಾ ವರದಿ ತಯಾರಿಸಲು ಆಡಳಿತಾತ್ಮಕ ವೆಚ್ಚ ಸೇರಿದಂತೆ ಬಡಾವಣೆ ಅಭಿವೃದ್ದಿ ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಾಧಿಕಾರ ಹಾಗೂ ನಗರದ ಮುಂದಿನ ನಾಗರೀಕ ಸೌಲಭ್ಯಗಳ ಹಿತದೃಷ್ಟಿಯಿಂದ ಒಟ್ಟು 72881.12 ಚದರ ಮೀಟರ್ ನಾಗರೀಕ ಸೌಲಭ್ಯದ ನಿವೇಶನದಿಂದ ಬರುವ ಮೊತ್ತವನ್ನು ನಗರದ ಮುಂದಿನ ಯೋಜನೆಗಾಗಿ ಮೀಸಲಿಡಲಾಗುವುದು, ಮೇಲ್ಕಂಡಂತೆ ಯೋಜನಾ ವಿವರಗಳನ್ನು ಹಾಗೂ ನಕ್ಷೆಯನ್ನು ತಯಾರಿಸಿ ಸರ್ಕಾರಕ್ಕೆ ಪ್ರಸ್ಥಾವನೆ ಸಲ್ಲಿಸಿ ಸದರಿ ಯೋಜನೆಗೆ ಮಂಜೂರಾತಿ ಕೋರಿ ಪತ್ರ ಬರೆಯಬಹುದಾಗಿದೆ. ಈ ಯೋಜನೆಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ, ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಇಂದಾವರ ಸರ್ವೆ ನಂಬರುಗಳಲ್ಲಿ ಒಟ್ಟು 200 ಎಕರೆ ಭೂಮಿಯಲ್ಲಿ ಪ್ರಾಧಿಕಾರದ ವತಿಯಿಂದ ರಚಿಸಲು ಉದ್ದೇಶಿಸಿರುವ ಬೃಹತ್ ಬಡಾವಣೆ ಯೋಜನೆಗೆ ಸರ್ಕಾರದಿಂದ ಯೋಜನಾ ಮಂಜೂರಾತಿಗೆ ಕೆಲವು ಬದಲಾವಣೆಗಳೊಂದಿಗೆ ಪ್ರಸ್ಥಾವನೆ ಸಲ್ಲಿಸುವ ಬಗ್ಗೆ ಆಯುಕ್ತರು ಸಭೆಗೆ ವಿವರಗಳನ್ನು ನೀಡಿದರು. ಸರ್ಕಾರದಿಂದ ಅನುಮತಿ ಪಡೆದಿದ್ದ ಭೂಮಿ ಪೈಕಿ ಸರ್ಕಾರಿ ಗೋಮಾಳ ಸರ್ವೆ ನಂ. 47, 49 ರ 23 ಎಕರೆ ಯೋಜನೆಯಿಂದ ಕೈಬಿಟ್ಟು ಹೊಸದಾಗಿ ಇಂದಾವರ ಸರ್ವೆ ನಂ. 35 ರ 2.26 ಎಕರೆ ಭೂಮಿಯನ್ನು ಯೋಜನೆಗೆ ಸೇರಿಸಿಕೊಳ್ಳಲು ತೀರ್ಮಾನಿಸಲಾಯಿತು ಹಾಗೂ ವಿವಿದ ಅಳತೆಯ ನಿವೇಶನಗಳ ಲಭ್ಯತೆಯ ವಿವರಗಳನ್ನು ವಿವರಿಸಿದರು ಹಾಗೂ ಬಡಾವಣೆ ರಚನೆಗೆ ಭರಿಸಬೇಕಾದ ವೆಚ್ಚ, ನಿವೇಶನ ಹಂಚಿಕೆಯಿಂದ ಬರುವ ಆದಾಯ, ನಿವ್ವಳ ಲಾಭ ಇವುಗಳನ್ನು ಸಹ ಸಭೆಗೆ ಮಾಹಿತಿ ನೀಡಿದರು, ಹಾಗೂ ಸದರಿ ಬಡಾವಣೆಯ ನಕ್ಷೆಯನ್ನು ಸಹ ಮಂಡಿಸಿದರು ಇದನ್ನು ಸಭೆಯಲ್ಲಿ ಪರಿಶೀಲಿಸಿ ಚರ್ಚಿಸಿ ಸರ್ಕಾರಕ್ಕೆ ಬಡಾವಣೆ ನಕ್ಷೆಯನ್ನು ಹಾಗೂ ಯೋಜನೆಯನ್ನು ಅನುಮೋದನೆಗಾಗಿ ಪ್ರಸ್ಥಾವನೆ ಸಲ್ಲಿಸುವ ಬಗ್ಗೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 5.**

ಕ್ರಿಕೇಟ್ ಸ್ಟೇಡಿಯಂ ನಿರ್ಮಾಣಕ್ಕಾಗಿ ಪ್ರಾಧಿಕಾರದ ಬಯಲು ಪ್ರದೇಶವನ್ನು ರಾಜ್ಯ ಕ್ರಿಕೇಟ್ ಸಂಸ್ಥೆಗೆ ನೀಡುವ ಬಗ್ಗೆ.

**ಟಿಪ್ಪಣಿ :**

ರಾಜ್ಯ ಕ್ರಿಕೇಟ್ ಮಂಡಳಿಯ ಗೌರವ ಕಾರ್ಯದರ್ಶಿಗಳವರಾದ ಶ್ರೀ ಬ್ರಿಜೇಶ್ ಪಟೇಲ್ ರವರು ಈ ಹಿಂದೆ ದಿನಾಂಕ: 28-10-2010 ರಂದು ಪ್ರಾಧಿಕಾರಕ್ಕೆ ಪತ್ರ ಬರೆದಿದ್ದರು ಹಾಗೆಯೇ ಶ್ರೀ ಅನೀಲ್ ಕುಂಬ್ಳೆ ರಾಜ್ಯ ಕ್ರಿಕೇಟ್ ಅಧ್ಯಕ್ಷರು ಸಹ ದಿನಾಂಕ: 29-01-2011 ರಂದು ಮಾನ್ಯ ಅಧ್ಯಕ್ಷರೊಂದಿಗೆ ವಸತಿ ಬಡಾವಣೆಯಲ್ಲಿನ ಆಟದ ಮೈದಾನದ ಜಾಗವನ್ನು ವೀಕ್ಷಿಸಿ ಸದರಿ ಜಾಗವನ್ನು ಕ್ರಿಕೇಟ್ ಸ್ಟೇಡಿಯಂ ನಿರ್ಮಾಣಕ್ಕಾಗಿ ಕ್ರಿಕೇಟ್ ಸಂಸ್ಥೆಗೆ ನೀಡುವಂತೆ ಕೋರಲಾಗಿದ್ದು ಸದರಿ ಆಟದ ಮೈದಾನಕ್ಕಾಗಿ ಮೀಸಲಿರುವ ಸುಮಾರು 7½ ಎಕರೆ ಜಾಗವನ್ನು ನೀಡುವ ಬಗ್ಗೆ ವಿಷಯವನ್ನು ಸಭೆಯ ಚರ್ಚೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಹಿರೇಮಗಳೂರು ವಸತಿ ಬಡಾವಣೆಯಲ್ಲಿನ ಆಟದ ಮೈದಾನಕ್ಕಾಗಿ ಮೀಸಲಿಟ್ಟಿರುವ ಸುಮಾರು 7½ ಎಕರೆ ಪ್ರದೇಶವನ್ನು ಸರ್ಕಾರದ ಅನುಮತಿ ಪಡೆದು ಲೀಸ್ ಮೇಲೆ ಅಥವಾ ಕ್ರಯಕ್ಕೆ ರಾಜ್ಯ ಕ್ರಿಕೇಟ್ ಸಂಸ್ಥೆಗೆ ನೀಡಬಹುದಾಗಿರುತ್ತದೆ ಹಾಗೆಯೇ ಅದಕ್ಕೆ ಮುನ್ನ ಕ್ರಿಕೇಟ್ ಸಂಸ್ಥೆಯವರಿಂದ ಮಾತುಕತೆ ಮೂಲಕ ದರ ನಿಗದಿಪಡಿಸುವುದು ಸೂಕ್ತ ಎಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 6.**

ಬನಶಂಕರಿ ಮಹಿಳಾ ಸಮಾಜ (ರಿ) ಚಿಕ್ಕಮಗಳೂರು ರವರಿಗೆ ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ ಮಾಡುವ ಬಗ್ಗೆ.

**ಟಿಪ್ಪಣಿ :**

ಬನಶಂಕರಿ ಮಹಿಳಾ ಸಮಾಜ (ರಿ) ಚಿಕ್ಕಮಗಳೂರು ರವರಿಗೆ ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ ಮಾಡುವ ಬಗ್ಗೆ ಪ್ರಾಧಿಕಾರದ ದಿನಾಂಕ: 05-09-2009 ರ ಸಭೆಯಲ್ಲಿ ವಿಷಯ ಸಂಖ್ಯೆ. 3 ರಂತೆ ನಿರ್ಣಯವಾಗಿದ್ದು ಅದರಂತೆ ಹಿರೇಮಗಳೂರು ವಸತಿ ಬಡಾವಣೆಯ ನಾಗರೀಕ ಸೌಲಭ್ಯದ ನಿವೇಶನ ಸಂಖ್ಯೆ. 171 ಮತ್ತು 172 ರಲ್ಲಿನ ಒಟ್ಟು 221.91 ಚ. ಮೀ ಅಳತೆ ನಿವೇಶನಕ್ಕೆ ಆಗಿನ ದರ ಚದರ ಮೀಟರ್ ಒಂದಕ್ಕೆ ರೂ. 646=00 ರಂತೆ ಪಾವತಿಸುವಂತೆ ಸೂಚಿಸಲಾಗಿದ್ದು ಈ ವರೆವಿಗೆ ಶೇಕಡ 10 ರಷ್ಟು ಹಣ ಮಾತ್ರ ಪಾವತಿಸಲಾಗಿರುತ್ತದೆ, ಆದರೆ ದಿನಾಂಕ: 01-03-2010 ರಿಂದ ಸಬ್‌ರಿಜಿಸ್ಟ್ರಾರ್ ಕಛೇರಿಯ ನೂತನ ದರದಂತೆ ಚದರ ಮೀಟರ್ ಒಂದಕ್ಕೆ ರೂ. 1615=00 ಗಳಾಗಿರುತ್ತದೆ, ಆದ್ದರಿಂದ ಸದರಿ ಪರಿಷ್ಕೃತ ದರದಲ್ಲಿ ಹಣ ಪಾವತಿಸಿಕೊಂಡು ನಿವೇಶನ ಹಂಚಿಕೆ ಮಾಡಬಹುದಾಗಿರುತ್ತದೆ, ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಬನಶಂಕರಿ ಮಹಿಳಾ ಸಮಾಜ (ರಿ) ಚಿಕ್ಕಮಗಳೂರು ಸಂಸ್ಥೆಯವರು ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆಗಾಗಿ ಕೇವಲ ಶೇಕಡ 10 ರಷ್ಟು ಮೊತ್ತವನ್ನು ಮಾತ್ರ ಅರ್ಜಿ ಜೊತೆಗೆ ಪಾವತಿಸಿದ್ದು ಉಳಿಕೆ ಮೊತ್ತವನ್ನು ಪಾವತಿಸಿರುವುದಿಲ್ಲ ಆದ್ದರಿಂದ ದಿನಾಂಕ: 01-03-2010 ರಿಂದ ಜಾರಿಗೆ ಬಂದಿರುವ ಉಪನೋಂದಣಾಧಿಕಾರಿ ಕಛೇರಿಯ ಪರಿಷ್ಕೃತ ದರ ಚದರ ಮೀಟರ್ ಒಂದಕ್ಕೆ ರೂ. 1615=00 (ಚದರ ಅಡಿ ರೂ. 150=00) ರ ದರದಲ್ಲಿ ಪಾವತಿಸಿಕೊಂಡು ನಿವೇಶನ ಹಂಚಿಕೆ ಮಾಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

**ವಿಷಯ ನಂ 7.**

ಚಿಕ್ಕಮಗಳೂರು ನಗರದ ದೀಪಾ ನರ್ಸಿಂಗ್ ಹೋಂ ರಸ್ತೆಯನ್ನು ಬಸವನಹಳ್ಳಿ ಗ್ರಾಮದ ಸರ್ವೆ ನಂ. 101 ರಲ್ಲಿನ ಪ್ರದೇಶವನ್ನು ಹೈಕೋರ್ಟ್ ನಿರ್ದೇಶನದಂತೆ ಯಥಾಸಿತಿಗೆ ತಂದು ಭೂಮಿಯನ್ನು ಸದರಿ ಭೂ ಮಾಲಿಕರಿಗೆ ಬಿಟ್ಟುಕೊಡುವ ಬಗ್ಗೆ ಹಾಗೂ ಪರ್ಯಾಯ ಸಂಪರ್ಕ ರಸ್ತೆ ನಿರ್ಮಾಣ ಮಾಡುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರದ ದೀಪಾ ನರ್ಸಿಂಗ್ ಹೋಂ ರಸ್ತೆಯನ್ನು ದಿನಾಂಕ: 14-01-2011 ರ ಹೈಕೋರ್ಟ್ ನಿರ್ದೇಶನದಂತೆ ಬಸವನಹಳ್ಳಿ ಗ್ರಾಮದ ಸರ್ವೆ ನಂ. 101 ರಲ್ಲಿನ ಜಮೀನಿನಲ್ಲಿ ರಸ್ತೆಯನ್ನು ನಿರ್ಮಾಣ ಮಾಡಿದ್ದು ಸದರಿ ಪ್ರದೇಶವನ್ನು ಅರ್ಜಿದಾರರಿಗೆ ಹೈಕೋರ್ಟ್‌ನ ನಿರ್ದೇಶನದಂತೆ ಯಥಾಸ್ಥಿತಿಗೆ ತಂದು ಭೂಮಾಲೀಕರಿಗೆ ಹಸ್ತಾಂತರಿಸಲು ನಿರ್ದೇಶನ ನೀಡಿದೆ ಅಥವಾ ಭೂಮಿಯ ಪರಿಹಾರದ ಬಾಬ್ತು ರೂ. 99,09,990=00 ಗಳನ್ನು ಹೈಕೋರ್ಟ್‌ಗೆ ಪಾವತಿಸಲು ತಿಳಿಸಿದೆ, ಸದರಿ ರಸ್ತೆಯ ಪ್ರದೇಶವನ್ನು ಯಥಾಸ್ಥಿತಿಗೆ ತರಲು ಸೂಚಿಸಿರುವಂತೆ ಸದರಿ ರಸ್ತೆಗೆ ಪರ್ಯಾಯವಾಗಿ ಹಾಲಿ ಇರುವ ಬಿ.ಎಸ್.ಎನ್.ಎಲ್. ಕಛೇರಿಯ ಪಕ್ಕದಲ್ಲಿರುವ ಗಾಂದಿನಗರ ಬಡಾವಣೆಯ ಮುಖಾಂತರ ಹಾದು ಹೋಗಿರುವ ರಸ್ತೆಗೆ ಸೇರಿಸಲು ಉದ್ದೇಶಿಸಿದ್ದು ಸದರಿ ರಸ್ತೆಯ ಪ್ರದೇಶದ ಭೂ ಮಾಲೀಕರಿಂದ ಭೂಮಿಯನ್ನು ಪರಸ್ಪರ ಒಪ್ಪಂದದ ಮುಖಾಂತರ ಅಥವಾ ಭೂಸ್ವಾಧೀನ ಪಡಿಸಿಕೊಂಡು ರಸ್ತೆಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ, ಸದರಿ ರಸ್ತೆಯನ್ನು ನಿರ್ಮಿಸುವ ಸಲುವಾಗಿ ಪ್ರಾಧಿಕಾರದ ಸಭೆಗೆ ವಿಷಯವನ್ನು ಮಂಡಿಸಿದೆ.

**ತೀರ್ಮಾನ :**

ಹೈಕೋರ್ಟ್ ನಿರ್ದೇಶನದಂತೆ ಬಸವನಹಳ್ಳಿ ಗ್ರಾಮದ ಸರ್ವೆ ನಂ. 101 ರಲ್ಲಿನ ಜಮೀನಿನಲ್ಲಿನ ರಸ್ತೆಯ ಭಾಗವನ್ನು ಮಾಲೀಕರಿಗೆ ಯಥಾಸ್ಥಿತಿಗೆ ತಂದು ಹಿಂತಿರುಗಿಸಲು ಸಭೆ ತೀರ್ಮಾನಿಸಿತು, ಸದರಿ ರಸ್ತೆಗೆ ಪರ್ಯಾಯವಾಗಿ ಬಸವನಹಳ್ಳಿ ಗ್ರಾಮದ ಸರ್ವೆ ನಂ. 100, 102 ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 133, 134, 135, 136 ರಲ್ಲಿ ಹಾದು ಹೋಗುವಂತೆ ಗಾಂಧಿನಗರದಿಂದ ಬೈ–ಪಾಸ್ ಲಿಂಕ್ ರಸ್ತೆಗೆ ಸಂಪರ್ಕಿಸಲು ಹಾಗೂ ಪೂರ್ಣ ಅಭಿವೃದ್ಧಿಪಡಿಸಲು ಸಹ ತೀರ್ಮಾನಿಸಿತು.

ಸದರಿ ಭೂಮಿಯ ಮಾಲೀಕರನ್ನು ಸಂಪರ್ಕಿಸಿ ಭೂ ಪರಿವರ್ತನೆ, ಭೂ ಬದಲಾವಣೆ ಹಾಗೂ ಬಡಾವಣೆ ನಿರ್ಮಾಣಕ್ಕೆ ಈ ಹಿಂದೆ ನೀಡಿರುವ ರಿಯಾಯಿತಿಗಳನ್ನು ನೀಡಿ ಉಚಿತವಾಗಿ ಭೂಮಿ ಪಡೆದು ಅಥವಾ ಭೂ ಸ್ವಾಧೀನ ಮಾಡಿಕೊಂಡು ರಸ್ತೆ ಪೂರ್ಣಗೊಳಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 8.**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಗರ ಯೋಜನಾ ಸದಸ್ಯರ ಹುದ್ದೆಯಲ್ಲಿ ಸರ್ಕಾರದ ಆದೇಶದನ್ವಯ ಕರ್ತವ್ಯ ನಿರ್ವಹಿಸುತ್ತಿದ್ದು ನಗರ ಯೋಜನಾ ಶಾಖೆಗೆ ಸಂಬಂದಿಸಿದ ಕಡತಗಳನ್ನು ನಿರ್ವಹಿಸಲು ಒಬ್ಬ ನಗರ ಯೋಜಕರ ಹುದ್ದೆ ಸೃಷ್ಟಿಸಿ ನೇಮಿಸಿಕೊಳ್ಳಲು ಸರ್ಕಾರಕ್ಕೆ ಪ್ರಸ್ಥಾವನೆ ಸಲ್ಲಿಸುವ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದಿ ಪ್ರಾಧಿಕಾರದಲ್ಲಿ ನಗರ ಯೋಜನಾ ಸದಸ್ಯರ ಹುದ್ದೆಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ. ನಅಇ : 70 : ನಯೋಸೇ : 2010 ದಿನಾಂಕ: 25-05-2010 ರನ್ವಯ ಆದೇಶವಾಗಿರುತ್ತದೆ, ಮಾನ್ಯ ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಬೆಂಗಳೂರು ಇವರ ಪತ್ರ ಸಂ. ನಗ್ರಯೋ : ಸಿ(1) : ವರ್ಗಾವಣೆ : 2010, ದಿನಾಂಕ: 08-06-2010 ರನ್ವಯ ವರ್ಗಾವಣೆಯಾಗಿರುತ್ತಾರೆ ಪ್ರಾಧಿಕಾರದ ಕಛೇರಿಯಲ್ಲಿ ದಿನಾಂಕ: 24-06-2010 ರಂದು ವರದಿ ಮಾಡಿಕೊಂಡಿದ್ದು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಹಾಗೂ ನಗರ ಯೋಜನಾ ಶಾಖೆಗೆ ಸಂಬಂದಿಸಿದ ಕಡತಗಳನ್ನು ನಿರ್ವಹಿಸಲು ಸಿಬ್ಬಂದಿಯ ಕೊರತೆ ಇರುವುದರಿಂದ ಸದರಿ ಶಾಖೆಯ ಕೆಲವನ್ನು ನಿರ್ವಹಿಸಲು ಸರ್ಕಾರದ ಅನುಮೋದನೆ ಪಡೆದು ಒಬ್ಬ ನಗರ ಯೋಜಕರ ಹುದ್ದೆ ಸೃಷ್ಟಿಸಿಕೊಂಡು ನೇಮಿಸಿಕೊಳ್ಳಲು ಸರ್ಕಾರಕ್ಕೆ ಪ್ರಸ್ಥಾವನೆ ಸಲ್ಲಿಸಲು ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದಲ್ಲಿ ನಗರ ಯೋಜನಾ ಸದಸ್ಯರ ಹುದ್ದೆಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ. ನಅಇ : 70 : ನಯೋಸೇ : 2010 ದಿನಾಂಕ: 25-05-2010 ರನ್ವಯ ಆದೇಶವಾಗಿರುತ್ತದೆ, ಮಾನ್ಯ ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಬೆಂಗಳೂರು ಇವರ ಪತ್ರ ಸಂ. ನಗ್ರಯೋ : ಸಿ(1) : ವರ್ಗಾವಣೆ : 2010, ದಿನಾಂಕ: 08-06-2010 ರನ್ವಯ ವರ್ಗಾವಣೆಯಾಗಿರುತ್ತಾರೆ ಪ್ರಾಧಿಕಾರದ ಕಛೇರಿಯಲ್ಲಿ ದಿನಾಂಕ: 24-06-2010 ರಂದು ವರದಿ ಮಾಡಿಕೊಂಡು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ನಗರ ಯೋಜನಾ ಸದಸ್ಯರ ಹುದ್ದೆ ಸೃಷ್ಟಿ ಆಗಿದ್ದರೂ ಅತೀ ಅವಶ್ಯವಾದ ನಗರ ಯೋಜಕರ ಹುದ್ದೆ ಸರ್ಕಾರ ಸೃಷ್ಟಿಸಿರುವುದಿಲ್ಲ, ಹಾಗೂ ನಗರ ಯೋಜನಾ ಶಾಖೆಗೆ ಸಂಬಂದಿಸಿದ ಕಡತಗಳನ್ನು ನಿರ್ವಹಿಸಲು ಸಿಬ್ಬಂದಿಯ ಕೊರತೆ ಇರುವುದರಿಂದ ಸದರಿ ಶಾಖೆಯ ಕೆಲಸವನ್ನು ನಿರ್ವಹಿಸಲು ಸರ್ಕಾರದ ಅನುಮೋದನೆ ಪಡೆದು ಒಂದು ನಗರ ಯೋಜಕರ ಹುದ್ದೆಯನ್ನು ಸೃಷ್ಟಿಸಿ ಸರ್ಕಾರದ ಅನುಮೋದನೆ ಪಡೆದು ಈ ಹುದ್ದೆಯನ್ನು ತುಂಬಲು ಸೂಕ್ತ ಕ್ರಮ ವಹಿಸಲು ತೀರ್ಮಾನಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಪಡೆದು ಸಭೆಯು ಮುಕ್ತಾಯವಾಯಿತು.**

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

# ದಿನಾಂಕ: 19-03-2011 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರು.**

| | | |
|---|---|---|
| 1 | ಶ್ರೀ ಬಿ. ಹೆಚ್. ಶ್ರೀಕಾಂತ್ ಪೈ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಅಧ್ಯಕ್ಷರು |
| 2 | ಶ್ರೀ ಕೇಶವ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 3 | ಶ್ರೀಮತಿ ಆರ್. ಶಾರದಾ ವೆಂಕಟೇಶ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 4 | ಶ್ರೀ ಕೆ. ಪಿ. ಪರಮೇಶ್ವರ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 5 | ಶ್ರೀ ಹೆಚ್. ಸಿ. ಮಂಜುನಾಥ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 6 | ಶ್ರೀ. ಕೆ. ಎಸ್. ಕುಮಾರಸ್ವಾಮಿ,<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು. | ಸದಸ್ಯರು |
| 7 | ಸಹಾಯಕ ನಿರ್ದೇಶಕರು,<br>ನಗರಾಭಿವೃದ್ದಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |
| 8 | ಕಾರ್ಯಪಾಲಕ ಅಭಿಯಂತರರು,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 9 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 10 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಹಾಸನ.<br>(ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 11 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 12 | ಪರಿಸರ ಮಾಲಿನ್ಯ ಅಧಿಕಾರಿಗಳು,<br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>ಚಿಕ್ಕಮಗಳೂರು. | ಸದಸ್ಯರು |
| 13 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |
| 14 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಆಹ್ವಾನಿತರು |

**ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.**

| | | |
|---|---|---|
| 1 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 2 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 3 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 4 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 5 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |

ದಿನಾಂಕ: 19-03-2011 ರಂದು ಮದ್ಯಾನ್ಹ 3.00 ಗಂಟೆಗೆ ಶ್ರೀ ಬಿ. ಹೆಚ್. ಶ್ರೀಕಾಂತ್ ಪೈ ರವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು ಸಭೆಯಲ್ಲಿ ಮೊದಲಿಗೆ ಪ್ರಾಧಿಕಾರದ ಆಯುಕ್ತರು ಸಭೆಯಲ್ಲಿದ್ದ ಹೊಸದಾಗಿ ನಾಮಕರಣಗೊಂಡ ಸದಸ್ಯರಾದ ಶ್ರೀ ಕುಮಾರಸ್ವಾಮಿ ಹಾಗೂ ಉಳಿದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು, ನಂತರ ಅಧ್ಯಕ್ಷರು ವಿಷಯ ಮಂಡಿಸಲು ಸೂಚಿಸಿದರು,

**ವಿಷಯ ನಂ 1.**

ದಿನಾಂಕ: 31-01-2011 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸುವ ಬಗ್ಗೆ.

**ಟಿಪ್ಪಣಿ :**

ದಿನಾಂಕ: 31-03-2011 ರಂದು ನಡೆದ ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಈಗಾಗಲೇ ಎಲ್ಲಾ ಸದಸ್ಯರುಗಳಿಗೂ ಕಳುಹಿಸಿಕೊಡಲಾಗಿದೆ. ಹಾಗೂ ಕ್ರಮಕೈಗೊಂಡ ಬಗ್ಗೆ ಅನುಸರಣಾ ವರದಿಯನ್ನು ಈ ಕಾರ್ಯಸೂಚಿ ಜೊತೆ ಎಲ್ಲಾ ಸದಸ್ಯರುಗಳಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಲು ವಿಷಯ ಮಂಡಿಸಿದೆ.

**ತೀರ್ಮಾನ :**

ದಿನಾಂಕ: 31-03-2011 ರಂದು ನಡೆದ ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ನಡವಳಿಗಳ ಮೇಲೆ ಕ್ರಮ ಕೈಗೊಂಡ ಬಗ್ಗೆ ಅನುಸರಣಾ ವರದಿಯನ್ನು ಆಯುಕ್ತರು ಓದಿದರು ಅದರಂತೆ ಹಿಂದಿನ ಸಭೆಗಳ ತೀರ್ಮಾನಗಳನ್ನು ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

**ವಿಷಯ ನಂ 2.**

2011 ನೇ ಸಾಲಿನ ಜನವರಿ ಮತ್ತು ಪೆಬ್ರುವರಿ ಮಾಹೆಗಳ ಜಮಾ ಮತ್ತು ಖರ್ಚಿನ ವಿವರಗಳನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.

**ಟಿಪ್ಪಣಿ:**

2011 ನೇ ಸಾಲಿನ ಜನವರಿ ಮತ್ತು ಪೆಬ್ರುವರಿ ಮಾಹೆಗಳ ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ–1 ಮತ್ತು ಅನುಬಂಧ–2 ರಲ್ಲಿ ತಯಾರಿಸಿರುವುದನ್ನು ಪರಿಶೀಲಿಸಿ ಲೆಕ್ಕಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದಾಗಿದ್ದು ಸಭೆಗೆ ಮಂಡಿಸಿದೆ.

**ತೀರ್ಮಾನ :**

2011 ನೇ ಸಾಲಿನ ಜನವರಿ ಮತ್ತು ಫೆಬ್ರವರಿ ಮಾಹೆಗಳ ಆದಾಯ ಮತ್ತು ವೆಚ್ಚದ ವಿವರಗಳನ್ನು ಅನುಬಂಧ–1 ಮತ್ತು ಅನುಬಂಧ–2 ರಲ್ಲಿ ತಯಾರಿಸಿರುವುದನ್ನು ಪರಿಶೀಲಿಸಿ ಲೆಕ್ಕಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

2011-12 ನೇ ಸಾಲಿನ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯ ಆಯವ್ಯಯ ಅಂದಾಜು ಪಟ್ಟಿಗೆ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ:**

2011-12 ನೇ ಸಾಲಿನ ನಗರಾಭಿವೃದ್ಧಿ ಪ್ರಾಧಿಕಾರದ ಆಯವ್ಯಯ ಅಂದಾಜು ಪಟ್ಟಿಯನ್ನು ಕರ್ನಾಟಕ ನಗರಾಭಿವೃದ್ದಿ ಪ್ರಾಧಿಕಾರಗಳ ಅಧಿನಿಯಮ 1987 ರ ಪ್ರಕರಣ 43 ರ ಅನ್ವಯ ತಯಾರಿಸಲಾಗಿದೆ.

| | |
|---|---|
| ಆರಂಭದ ಶಿಲ್ಕು | **43,99,342.00.** |
| 2011-12 ನೇ ಸಾಲಿನ ಅಂದಾಜು ಆಧಾಯ | 45,01,28,250.00. |
| ಒಟ್ಟು | **45,45,27,592.00.** |
| 2011-12 ನೇ ಸಾಲಿನ ಅಂದಾಜು ಖರ್ಚು | 43,27,86,000.00. |
| ಉಳಿತಾಯ (ಅಂತ್ಯದ ಶಿಲ್ಕು) | **2,17,41,592.00.** |

ಆಯವ್ಯಯ ಅಂದಾಜು ಪಟ್ಟಿಯ ಸಂಕ್ಷಿಪ್ತ ವಿವರಗಳನ್ನು ತಯಾರಿಸಲಾಗಿದೆ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ಪ್ರಕರಣ 44 ರ ಅನ್ವಯ ಪ್ರಾಧಿಕಾರದ ಅನುಮೋದನೆ ಪಡೆದುಕೊಂಡು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 124 : ಬೆಂ.ರು.ಪ್ರಾ. : 2004, ದಿನಾಂಕ: 13-02-2004 ರ ಅನ್ವಯ ಜಿಲ್ಲಾಧಿಕಾರಿಗಳವರ ಅನುಮೋದನೆ ಪಡೆಯಬೇಕಾಗಿರುತ್ತದೆ. 2011-12 ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಲಾಗಿದೆ.

**ತೀರ್ಮಾನ :**

ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ 2011-12 ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯನ್ನು ಕರ್ನಾಟಕ ನಗರಾಭಿವೃದ್ದಿ ಪ್ರಾಧಿಕಾರಗಳ ಅಧಿನಿಯಮ 1987 ರ ಪ್ರಕರಣ 43 ರ ಅನ್ವಯ ಆಯವ್ಯಯ ಪಟ್ಟಿಯಲ್ಲಿ ಸಂಕ್ಷಿಪ್ತ ವಿವರಗಳೊಂದಿಗೆ ತಯಾರಿಸಲಾಗಿದ್ದು ಮಾನ್ಯ ಅಧ್ಯಕ್ಷರು ಸಭೆಗೆ ಮಂಡಿಸಿದರು.

| | |
|---|---|
| ಆರಂಭದ ಶಿಲ್ಕು | **43,99,342.00.** |
| 2011-12 ನೇ ಸಾಲಿನ ಅಂದಾಜು ಆಧಾಯ | 45,01,28,250.00. |
| ಒಟ್ಟು | **45,45,27,592.00.** |
| 2011-12 ನೇ ಸಾಲಿನ ಅಂದಾಜು ಖರ್ಚು | 43,27,86,000.00. |
| ಉಳಿತಾಯ (ಅಂತ್ಯದ ಶಿಲ್ಕು) | **2,17,41,592.00.** |

ಆಯವ್ಯಯದ ಬಗ್ಗೆ ಆಯುಕ್ತರು ಸಭೆಗೆ ವಿವರವಾಗಿ ವಿವರಿಸಿದರು, ಈ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ಪ್ರಕರಣ 44 ರ ಅನ್ವಯ ಪ್ರಾಧಿಕಾರದ ಅನುಮೋದನೆ ಪಡೆದುಕೊಂಡು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 124 : ಬೆಂ.ರು.ಪ್ರಾ. : 2004, ದಿನಾಂಕ: 13-02-2004 ರ ಅನ್ವಯ ಹಾಗೂ ಆಯವ್ಯಯದ ಅಂದಾಜು ಪಟ್ಟಿಯನ್ನು ತಯಾರಿಸಿ ಜಿಲ್ಲಾಧಿಕಾರಿಗಳವರ ಅನುಮೋದನೆ ಪಡೆಯಲು ಹಾಗೂ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 4.**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಸತಿ ಬಡಾವಣೆಯಲ್ಲಿನ 3 ನೇ ಹಂತದಲ್ಲಿರುವ ಪೋಲೀಸ್ ಠಾಣೆ ಹಿಂಭಾಗದಲ್ಲಿನ ನಾಗರೀಕ ಸೌಲಭ್ಯ ನಿವೇಶನವನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಛೇರಿಗೆ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ಹಂಚಿಕೆ ಮಾಡುವ ಬಗ್ಗೆ.

**ಟಿಪ್ಪಣಿ:**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿಯಿಂದ ದಿನಾಂಕ: 06-07-2007 ಪ್ರಾಧಿಕಾರದ ಮಾಸಿಕ ಸಭೆ ವಿಷಯ ಸಂಖ್ಯೆ.6 ರ ತೀರ್ಮಾನದಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಛೇರಿಗೆ, ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ 1603.96 ಚ. ಮೀ. ಅಳತೆಯ ನಾಗರೀಕ ಸೌಲಭ್ಯ ನಿವೇಶನವನ್ನು ಹಂಚಿಕೆ ಮಾಡಲಾಗಿದ್ದು, ನಿಯಮಾನುಸಾರ ನಿವೇಶನ ಮೌಲ್ಯದ ಶೇಕಡ 50% ರ ಮೊತ್ತ 12,95,198=00 ರೂಪಾಯಿಗಳನ್ನು ಪ್ರಾಧಿಕಾರಕ್ಕೆ ಪಾವತಿಸಿಕೊಳ್ಳಲಾಗಿದ್ದು, ನಂತರ ಈ ಮಧ್ಯ ಸಹಾಯಕ ಕಾರ್ಯಪಾಲಕ ಅಭಿಯಂತರರು ನಿವೇಶನದ ಶೇಕಡ 100% ರಷ್ಟು ಮೊತ್ತ ಪಾವತಿಸುವುದೆಂದು ತಿಳಿಸಿ ನಾಗರೀಕ ಸೌಲಭ್ಯ ನಿವೇಶನವನ್ನು ನೇರವಾಗಿ ಮಂಡಳಿಗೆ ಕ್ರಯ ಮಾಡಿಕೊಡುವಂತೆ ಕೋರಿ ದಿನಾಂಕ: 28-02-12011 ರಂದು ಮನವಿ ಸಲ್ಲಿಸಿರುತ್ತಾರೆ, ಈ ಬಗ್ಗೆ ಸರ್ಕಾರದ ಅನುಮತಿ ಪಡೆದು ನೀಡಬಹುದಾಗಿರುತ್ತದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಈಗಾಗಲೇ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಹಂಚಿಕೆ ಮಾಡಲಾಗಿರುವ ನಾಗರೀಕ ಸೌಲಭ್ಯದ ನಿವೇಶನವನ್ನು ಸರ್ಕಾರದ ಒಪ್ಪಿಗೆ ಪಡೆದು ನಿವೇಶನದ ಶೇಕಡ 100 ರಷ್ಟು ಮೊತ್ತ ಪಾವತಿಸಿಕೊಂಡು ನೇರವಾಗಿ ಕ್ರಯ ಪತ್ರ ಮಾಡಿಕೊಡಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನ ನೀಡಿತು.

**ವಿಷಯ ನಂ. 5.**

ಶ್ರೀ ಕೆ. ಶ್ರೀನಿವಾಸ, ಅಧ್ಯಕ್ಷರು, ದೇವಾಂಗ ಸಂಘ (ರಿ) ಚಿಕ್ಕಮಗಳೂರು ಇವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 539 (1065) ರಲ್ಲಿನ 4048.14 ಚದರ ಮೀಟರ್ ವಿಸ್ತೀರ್ಣದ ಪ್ರದೇಶದಲ್ಲಿನ ಏಕ ನಿವೇಶನ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ :**

ಶ್ರೀ ಕೆ. ಶ್ರೀನಿವಾಸ, ಅಧ್ಯಕ್ಷರು, ದೇವಾಂಗ ಸಂಘ (ರಿ) ಚಿಕ್ಕಮಗಳೂರು ಇವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 539 (1065) ರಲ್ಲಿನ 4048.14 ಚದರ ಮೀಟರ್ ವಿಸ್ತೀರ್ಣದ ಪ್ರದೇಶಕ್ಕೆ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ.ಎಂ4 : ಎಲ್‌ಎನ್‌ಡಿ : ಸಿಆರ್ : 94 : 97 - 98, ದಿನಾಂಕ: 18-12-1998 ರಂತೆ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರಾತಿ ಆದೇಶವಾಗಿರುತ್ತದೆ, ಅರ್ಜಿದಾರರು ಏಕ ನಿವೇಶನ ರೂಪು ರೇಖೆ ನಕ್ಷೆಗೆ ಅನುಮೋದನೆ ಕೋರಿರುತ್ತಾರೆ, ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡುವ ಸಂಬಂದ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಕೆ. ಶ್ರೀನಿವಾಸ, ಅಧ್ಯಕ್ಷರು, ದೇವಾಂಗ ಸಂಘ (ರಿ) ಚಿಕ್ಕಮಗಳೂರು ರವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 539 (1065) ರಲ್ಲಿನ 4048.14 ಚದರ ಮೀಟರ್ ವಿಸ್ತೀರ್ಣದ ಪ್ರದೇಶಕ್ಕೆ ಹಾಸ್ಟೆಲ್ ಉದ್ದೇಶಕ್ಕೆ ಏಕ ನಿವೇಶನ ವಿನ್ಯಾಸ ಅನುಮೋದನೆ ಕೋರಿರುತ್ತಾರೆ ಸದರಿ ಪ್ರದೇಶಕ್ಕೆ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ.ಎಂ4 : ಎಲ್ಎನ್‌ಡಿ : ಸಿಆರ್ : 94 : 97 - 98, ದಿನಾಂಕ: 18-12-1998 ರಂತೆ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರಾತಿ ಆದೇಶವಾಗಿರುತ್ತದೆ, ಆದರೆ ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ ಪ್ರಕಾರ ಪ್ರಸ್ತಾವಿತ ಸ್ಥಳವು ಕೃಷಿ ವಲಯದಲ್ಲಿ ಬರುತ್ತಿದ್ದು ಕೃಷಿ ವಲಯದಲ್ಲಿ ವಿಶೇಷ ಸಂದರ್ಭದಲ್ಲಿ ಶಾಲಾ ಉಪಯೋಗಕ್ಕೆ ಮಾತ್ರ ಅವಕಾಶವಿರುತ್ತದೆ, ವಿಷಯವನ್ನು ಸಭೆಯ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಮಾನ್ಯ ಜಿಲ್ಲಾಧಿಕಾರಿಗಳವರ ಆದೇಶ ಸಂಖ್ಯೆ.ಎಂ4 : ಎಲ್ಎನ್‌ಡಿ : ಸಿಆರ್ : 94 : 97 - 98, ದಿನಾಂಕ: 18-12-1998 ರಂತೆ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರಾತಿ ಆದೇಶ ನೀಡಿರುತ್ತಾರೆ, ಆದರೆ ಸದರಿ ಪ್ರದೇಶವು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ಕೃಷಿ ವಲಯದಲ್ಲಿದ್ದು ವಿಶೇಷ ಸಂದರ್ಭಗಳಲ್ಲಿ ಶಾಲಾ ಉಪಯೋಗಕ್ಕಾಗಿ ಮಾತ್ರ ಅವಕಾಶವಿರುವುದಾಗಿ ಸಭೆಯಲ್ಲಿ ನಗರ ಯೋಜನಾ ಸದಸ್ಯರು ಅಭಿಪ್ರಾಯ ನೀಡಿರುತ್ತಾರೆ, ಆದರೆ ಮಾನ್ಯ ಜಿಲ್ಲಾಧಿಕಾರಿಗಳವರಿಂದ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣಕ್ಕೆ ಆದೇಶವಾಗಿರುವುದರಿಂದ ಹಾಗೂ ವಲಯ ನಿಯಮಾವಳಿ ಪ್ರಕಾರ ಕೃಷಿ ವಲಯದಲ್ಲಿ ಶಾಲಾ ಉಪಯೋಗಕ್ಕೆ ಅವಕಾಶ ಇರುವುದರಿಂದ, ಶಾಲೆ ಹಾಗೂ ವಿದ್ಯಾರ್ಥಿ ನಿಲಯ ಉಪಯೋಗಕ್ಕಾಗಿ ಏಕ ನಿವೇಶನ ವಿನ್ಯಾಸ ಅನುಮೋದನೆ ನೀಡಬಹುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ವಿಷಯ ನಂ 6.**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 95 / P1 ರಲ್ಲಿನ 00 ಎಕರೆ 20¼ ಗುಂಟೆ, ಮತ್ತು 95 / P2 ರಲ್ಲಿನ 00 ಎಕರೆ 21 ಗುಂಟೆ, ಒಟ್ಟು 01 ಎಕರೆ 01¼ ಗುಂಟೆ, ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿ ಶ್ರೀ ಡಿ. ಕೆ. ಕೃಷ್ಣಮೂರ್ತಿ ಮತ್ತು ಶ್ರೀ ಡಿ. ಕೆ. ನಿಂಗೇಗೌಡ, ರವರು ಸಲ್ಲಿಸಿರುವ ಮನವಿಯ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 95 / P1 ರಲ್ಲಿನ 00 ಎಕರೆ 20¼ ಗುಂಟೆ, ಮತ್ತು 95 / P2 ರಲ್ಲಿನ 00 ಎಕರೆ 21 ಗುಂಟೆ, ಒಟ್ಟು 01 ಎಕರೆ 01¼ ಗುಂಟೆ, ಪ್ರದೇಶಕ್ಕೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್ಎನ್ : ಸಿಆರ್ : 89 : 2009 - 10, ದಿನಾಂಕ: 27-01-2010 ರಂತೆ ವಸತಿಗಾಗಿ ಭೂ ಪರಿವರ್ತನೆ ಹೊಂದಿದೆ. ಸದರಿ ಪ್ರದೇಶದ ಉತ್ತರಕ್ಕೆ ಹಾಲಿ 18.00 ಮೀ ಅಗಲದ ರಸ್ತೆ ಇರುತ್ತದೆ, ಅರ್ಜಿದಾರರು ನಿವೇಶನ ವಿನ್ಯಾಸ ಅನುಮೋದನೆ ನೀಡಲು ಅರ್ಜಿದಾರರು ಪ್ರಸ್ತಾಪಿಸಿರುತ್ತಾರೆ, ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದಾಗಿದೆ, ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :–**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 95 / P1 ರಲ್ಲಿನ 00 ಎಕರೆ 20¼ ಗುಂಟೆ, ಮತ್ತು 95 / P2 ರಲ್ಲಿನ 00 ಎಕರೆ 21 ಗುಂಟೆ, ಒಟ್ಟು 01 ಎಕರೆ 01¼ ಗುಂಟೆ, ಪ್ರದೇಶಕ್ಕೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್‌ಎನ್ : ಸಿಆರ್ : 89 : 2009 - 10, ದಿನಾಂಕ: 27-01-2010 ರಂತೆ ವಸತಿಗಾಗಿ ಭೂ ಪರಿವರ್ತನೆ ಹೊಂದಿದೆ. ಸದರಿ ಪ್ರದೇಶದ ಉತ್ತರಕ್ಕೆ ಹಾಲಿ 18.00 ಮೀ ಅಗಲದ ರಸ್ತೆ ಇರುತ್ತದೆ, ಹಾಗೂ ಸರ್ಕಾರದ ಆದೇಶ ಸಂಖ್ಯೆ. 198 : ಮೈಅಪ್ರಾ : 2008 : ಬೆಂಗಳೂರು, ದಿನಾಂಕ: 27-05-2008 ರನ್ವಯ ಹಾಲಿ 18.00 ಮೀಟರ್ ರಸ್ತೆಗೆ ಕೂಡುವ ಅಡ್ಡ ರಸ್ತೆಗಳ ಪ್ರದೇಶದಲ್ಲಿ ಎರಡೂ ಕಡೆ 15.00 x 15.00 ಮೀ ಪ್ರದೇಶವನ್ನು ವಾಣಿಜ್ಯಕ್ಕಾಗಿ ಕಾಯ್ದಿರಿಸಲು ಹಾಗೂ ಉಳಿದ ಪ್ರದೇಶವನ್ನು ವಸತಿಗಾಗಿ ಭೂ ಉಪಯೋಗ ಬದಲಾವಣೆ ಮಾಡಲು ಪ್ರಾಧಿಕಾರವು ವಿಧಿಸಬಹುದಾದ ಸಾಮಾನ್ಯ ಷರತ್ತುಗಳಿಗೊಳಪಡಿಸಿ ಸರ್ಕಾರದ ಅನುಮೋದನೆ ನೀಡಲಾಗಿದೆ, ಆದರೆ ಸರ್ಕಾರದಿಂದ ಅನುಮೋದನೆಗೊಂಡ ಹಾಲಿ ಮಹಾಯೋಜನೆಯಲ್ಲಿ ಪ್ರಸ್ತಾವಿತ ಸ್ಥಳವು ಭಾಗಶಃ ವಸತಿ ಮತ್ತು ಭಾಗಶಃ ಕೃಷಿ ವಲಯದಲ್ಲಿರುವುದರಿಂದ ಸರ್ಕಾರದ ಪೂರ್ವಾನುಮತಿ ಪಡೆಯಬೇಕಾಗಿರುತ್ತದೆ, ಸರ್ಕಾರದಿಂದ ಅನುಮೋದನೆ ಪಡೆದ ನಂತರ ನಿಯಮಾನುಸಾರ ಪರಿಶೀಲಿಸಿ ಅರ್ಜಿದಾರರ ಕೋರಿಕೆಯಂತೆ ಪೂರ್ಣ ಕ್ಷೇತ್ರಕ್ಕೆ ಏಕ ನಿವೇಶನ ವಿನ್ಯಾಸ ಅನುಮೋದನೆಯನ್ನು ನೀಡುವ ಸಂಬಂದ ನಿರ್ಣಯಕ್ಕಾಗಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 95 / P1 ರಲ್ಲಿನ 00 ಎಕರೆ 20¼ ಗುಂಟೆ, ಮತ್ತು 95 / P2 ರಲ್ಲಿನ 00 ಎಕರೆ 21 ಗುಂಟೆ, ಒಟ್ಟು 01 ಎಕರೆ 01¼ ಗುಂಟೆ, ಪ್ರದೇಶಕ್ಕೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಇವರ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್‌ಎನ್ : ಸಿಆರ್ : 89 : 2009 - 10, ದಿನಾಂಕ: 27-01-2010 ರಂತೆ ವಸತಿಗಾಗಿ ಭೂ ಪರಿವರ್ತನೆಯಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ. 198 : ಮೈಅಪ್ರಾ : 2008 : ಬೆಂಗಳೂರು, ದಿನಾಂಕ: 27-05-2008 ರನ್ವಯ ಹಾಲಿ 18.00 ಮೀಟರ್ ರಸ್ತೆಗೆ ಕೂಡುವ ಅಡ್ಡ ರಸ್ತೆಗಳ ಪ್ರದೇಶದಲ್ಲಿ ಎರಡೂ ಕಡೆ 15.00 x 15.00 ಮೀ ಪ್ರದೇಶವನ್ನು ವಾಣಿಜ್ಯಕ್ಕಾಗಿ ಕಾಯ್ದಿರಿಸಲು ಹಾಗೂ ಉಳಿದ ಪ್ರದೇಶವನ್ನು ವಸತಿಗಾಗಿ ಭೂ ಉಪಯೋಗ ಬದಲಾವಣೆ ಮಾಡಲು ಪ್ರಾಧಿಕಾರವು ವಿಧಿಸಬಹುದಾದ ಸಾಮಾನ್ಯ ಷರತ್ತುಗಳಿಗೊಳಪಡಿಸಿ ಸರ್ಕಾರದಿಂದ ಅನುಮೋದನೆ ನೀಡಲಾಗಿದೆ, ಹಾಗೂ ಪ್ರಸ್ತಾವಿತ ಜಮೀನಿನ ಅರ್ಜಿದಾರರು 18.00 ಮೀ ಅಗಲದ ಸಾರ್ವಜನಿಕ ರಸ್ತೆಗೆ (ದೀಪಾ ನರ್ಸಿಂಗ್ ಹೋಂ ರಸ್ತೆ) ಜಮೀನು ಬಿಟ್ಟುಕೊಟ್ಟಿರುವುದರಿಂದ ರಸ್ತೆ ಬಿಟ್ಟುಕೊಡುವ ಸಮಯದಲ್ಲಿ ಪೂರ್ಣ ಕ್ಷೇತ್ರಕ್ಕೆ ಭೂ ಪರಿವರ್ತನೆ ಮಾಡಿಕೊಡುವ ಒಪ್ಪಂದದಂತೆ ಹಾಗೂ ಈ ಮೇಲಿನ ಎಲ್ಲಾ ವಿಷಯಗಳನ್ನು ಪರಿಗಣನೆಗೆ ತೆಗೆದುಕೊಂಡು ಸರ್ಕಾರದ ಆದೇಶದಂತೆ ಹಾಗೂ ಜಿಲ್ಲಾಧಿಕಾರಿಗಳವರ ಭೂ ಪರಿವರ್ತನಾ ಆದೇಶ ಮತ್ತು ಪ್ರಾಧಿಕಾರವು ವಿಧಿಸಬಹುದಾದ ಸಾಮಾನ್ಯ ಷರತ್ತುಗಳಿಗೊಳಪಡಿಸಿ ವಸತಿ ವಿನ್ಯಾಸ ಅನುಮೋದನೆ ನೀಡಬಹುದೆಂದು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

**ವಿಷಯ ನಂ 7.**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 95 / P3 ರಲ್ಲಿನ 00 ಎಕರೆ 21¼ ಗುಂಟೆ ಪ್ರದೇಶಕ್ಕೆ ವಸತಿ ಮತ್ತು ವಾಣಿಜ್ಯ ವಿನ್ಯಾಸ ಅನುಮೋದನೆ ಕೋರಿ ಶ್ರೀ ಡಿ. ಕೆ. ಕೃಷ್ಣಮೂರ್ತಿ ಬಿನ್ ಲೇಟ್ ಕರಿಯಪ್ಪಗೌಡ, ರವರು ಸಲ್ಲಿಸಿರುವ ಮನವಿಯ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 95 / P3 ರಲ್ಲಿನ 00 ಎಕರೆ 21¼ ಗುಂಟೆ ಪ್ರದೇಶವು ಮಹಾಯೋಜನೆಯಂತೆ ವಸತಿ ಮತ್ತು ವಾಣಿಜ್ಯ ವಲಯದಲ್ಲಿದೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್‌ಎನ್ : ಸಿಆರ್ : 68 : 2009 - 10, ದಿನಾಂಕ: 23-10-2009 ರಂತೆ ವಸತಿ ಮತ್ತು ವಾಣಿಜ್ಯಕ್ಕಾಗಿ ಭೂ ಪರಿವರ್ತನೆ ಹೊಂದಿದೆ. ಸದರಿ ಪ್ರದೇಶದ ಉತ್ತರಕ್ಕೆ ಹಾಲಿ 18.00 ಮೀ ಅಗಲದ ರಸ್ತೆ ಇರುತ್ತದೆ, ಅರ್ಜಿದಾರರು ಏಕ ನಿವೇಶನ ವಿನ್ಯಾಸ ಅನುಮೋದನೆ ನೀಡಲು ಅರ್ಜಿದಾರರು ಪ್ರಸ್ತಾಪಿಸಿರುತ್ತಾರೆ, ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದಾಗಿದೆ, ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :–**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 95 / P3 ರಲ್ಲಿನ 00 ಎಕರೆ 21¼ ಗುಂಟೆ ಪ್ರದೇಶಕ್ಕೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್‌ಎನ್ : ಸಿಆರ್ : 68 : 2009 - 10, ದಿನಾಂಕ: 23-10-2009 ರಂತೆ ವಸತಿ ಮತ್ತು ವಾಣಿಜ್ಯಕ್ಕಾಗಿ ಭೂ ಪರಿವರ್ತನೆ ಹೊಂದಿದೆ. ಸದರಿ ಪ್ರದೇಶದ ಉತ್ತರಕ್ಕೆ ಹಾಲಿ 18.00 ಮೀ ಅಗಲದ ರಸ್ತೆ ಇರುತ್ತದೆ, ಹಾಗೂ ಸರ್ಕಾರದ ಆದೇಶ ಸಂಖ್ಯೆ. 198 : ಮೈಅಪ್ರಾ : 2008 : ಬೆಂಗಳೂರು, ದಿನಾಂಕ: 27-05-2008 ರನ್ವಯ ಹಾಲಿ 18.00 ಮೀಟರ್ ರಸ್ತೆಗೆ ಕೂಡುವ ಅಡ್ಡ ರಸ್ತೆಗಳ ಪ್ರದೇಶದಲ್ಲಿ ಎರಡೂ ಕಡೆ 15.00 x 15.00 ಮೀ ಪ್ರದೇಶವನ್ನು ವಾಣಿಜ್ಯಕ್ಕಾಗಿ ಕಾಯ್ದಿರಿಸಲು ಹಾಗೂ ಉಳಿದ ಪ್ರದೇಶವನ್ನು ವಸತಿಗಾಗಿ ಭೂ ಉಪಯೋಗ ಬದಲಾವಣೆ ಮಾಡಲು ಪ್ರಾಧಿಕಾರವು ವಿಧಿಸಬಹುದಾದ ಸಾಮಾನ್ಯ ಷರತ್ತುಗಳಿಗೊಳಪಡಿಸಿ ಸರ್ಕಾರದ ಅನುಮೋದನೆ ನೀಡಲಾಗಿದೆ. ಆದರೆ ಸರ್ಕಾರದಿಂದ ಅನುಮೋದನೆಗೊಂಡ ಹಾಲಿ ಮಹಾಯೋಜನೆಯಲ್ಲಿ ಪ್ರಸ್ತಾವಿತ ಸ್ಥಳವು ಭಾಗಶಃ ವಸತಿ ಮತ್ತು ಭಾಗಶಃ ಕೃಷಿ ವಲಯದಲ್ಲಿರುವುದರಿಂದ ಸರ್ಕಾರದ ಪೂರ್ವಾನುಮತಿ ಪಡೆಯಬೇಕಾಗಿರುತ್ತದೆ, ಸರ್ಕಾರದಿಂದ ಅನುಮೋದನೆ ಪಡೆದ ನಂತರ ನಿಯಮಾನುಸಾರ ಪರಿಶೀಲಿಸಿ ಅರ್ಜಿದಾರರ ಕೋರಿಕೆಯಂತೆ ಪೂರ್ಣ ಕ್ಷೇತ್ರಕ್ಕೆ ಏಕ ನಿವೇಶನ ವಿನ್ಯಾಸ ಅನುಮೋದನೆಯನ್ನು ನೀಡುವ ಸಂಬಂದ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 95 / P3 ರಲ್ಲಿನ 00 ಎಕರೆ 21¼ ಗುಂಟೆ ಪ್ರದೇಶಕ್ಕೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ.ಎ2 : ಎಎಲ್‌ಎನ್ : ಸಿಆರ್ : 68 : 2009 - 10, ದಿನಾಂಕ: 23-10-2009 ರಂತೆ ವಸತಿ ಮತ್ತು ವಾಣಿಜ್ಯಕ್ಕಾಗಿ ಭೂ ಪರಿವರ್ತನೆ ಹೊಂದಿದೆ. ಹಾಗೂ ಸರ್ಕಾರದ ಆದೇಶ ಸಂಖ್ಯೆ. 198 : ಮೈಅಪ್ರಾ : 2008 : ಬೆಂಗಳೂರು, ದಿನಾಂಕ: 27-05-2008 ರನ್ವಯ ಹಾಲಿ 18.00 ಮೀಟರ್ ರಸ್ತೆಗೆ ಕೂಡುವ ಅಡ್ಡ ರಸ್ತೆಗಳ ಪ್ರದೇಶದಲ್ಲಿ ಎರಡೂ ಕಡೆ 15.00 x 15.00 ಮೀ ಪ್ರದೇಶವನ್ನು ವಾಣಿಜ್ಯಕ್ಕಾಗಿ ಕಾಯ್ದಿರಿಸಲು ಹಾಗೂ ಉಳಿದ ಪ್ರದೇಶವನ್ನು ವಸತಿಗಾಗಿ ಭೂ ಉಪಯೋಗ ಬದಲಾವಣೆ ಮಾಡಲು ಪ್ರಾಧಿಕಾರವು ವಿಧಿಸಬಹುದಾದ ಸಾಮಾನ್ಯ ಷರತ್ತುಗಳಿಗೊಳಪಡಿಸಿ ಸರ್ಕಾರದಿಂದ ಅನುಮೋದನೆ ನೀಡಲಾಗಿದೆ, ಹಾಗೂ ಪ್ರಸ್ತಾವಿತ ಜಮೀನಿನ ಅರ್ಜಿದಾರರು 18.00 ಮೀ ಅಗಲದ ಸಾರ್ವಜನಿಕ ರಸ್ತೆಗೆ (ದೀಪಾ ನರ್ಸಿಂಗ್ ಹೋಂ ರಸ್ತೆ) ಜಮೀನು ಬಿಟ್ಟುಕೊಟ್ಟಿರುವುದರಿಂದ ರಸ್ತೆ ಬಿಟ್ಟುಕೊಡುವ ಸಮಯದಲ್ಲಿ ಪೂರ್ಣ ಕ್ಷೇತ್ರಕ್ಕೆ ಭೂ ಪರಿವರ್ತನೆ ಮಾಡಿಕೊಡುವ ಒಪ್ಪಂದದಂತೆ ಹಾಗೂ ಈ ಮೇಲಿನ ಎಲ್ಲಾ ವಿಷಯಗಳನ್ನು ಪರಿಗಣನೆಗೆ ತೆಗೆದುಕೊಂಡು ಸರ್ಕಾರದ ಆದೇಶದಂತೆ ಹಾಗೂ ಜಿಲ್ಲಾಧಿಕಾರಿಗಳವರ ಭೂ ಪರಿವರ್ತನಾ ಆದೇಶ ಮತ್ತು ಪ್ರಾಧಿಕಾರವು ವಿಧಿಸಬಹುದಾದ ಸಾಮಾನ್ಯ ಷರತ್ತುಗಳಿಗೊಳಪಡಿಸಿ ವಸತಿ ವಿನ್ಯಾಸ ಅನುಮೋದನೆ ನೀಡಬಹುದೆಂದು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

**ವಿಷಯ ನಂ 8.**

ಶ್ರೀ ಎನ್. ಆರ್. ತೆರದಾಳ್ ಬಿನ್ ರಾಜಪ್ಪ ತೆರದಾಳ್, ಮಲ್ಲಂದೂರು ರಸ್ತೆ, ಚಿಕ್ಕಮಗಳೂರು. ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 118 ಮತ್ತು 119 ರಲ್ಲಿನ 4987.53 ಚದರ ಮೀಟರ್ ಪ್ರದೇಶದಲ್ಲಿನ ಹೆಚ್. ಪಿ. ಗ್ಯಾಸ್ ಗೋಡಾನ್ ಕಟ್ಟಡ ನಿರ್ಮಿಸಲು ಪರವಾನಗಿ ಕೋರಿರುವ ಕುರಿತು.

**ಟಿಪ್ಪಣಿ :**

ಶ್ರೀ ಎನ್. ಆರ್. ತೆರದಾಳ್ ಬಿನ್ ರಾಜಪ್ಪ ತೆರದಾಳ್, ಮಲ್ಲಂದೂರು ರಸ್ತೆ, ಚಿಕ್ಕಮಗಳೂರು. ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 118 ಮತ್ತು 119 ರಲ್ಲಿನ 4987.53 ಚದರ ಮೀಟರ್ ಪ್ರದೇಶದಲ್ಲಿನ ಹೆಚ್. ಪಿ. ಗ್ಯಾಸ್ ಗೋಡಾನ್ ಕಟ್ಟಡ ನಿರ್ಮಿಸಲು ಪರವಾನಗಿ ಕೋರಿರುತ್ತಾರೆ, ಸದರಿ ಪ್ರದೇಶಕ್ಕೆ ಜಿಲ್ಲಾಧಿಕಾರಿಗಳವರ ಕಛೇರಿಯಿಂದ ಅನ್ಯಕ್ರಾಂತ ಆದೇಶವಾಗಿರುತ್ತದೆ ಹಾಗೂ ಪ್ರಾಧಿಕಾರದಿಂದ ದಿನಾಂಕ: 16-05-2010 ರಂದು ಏಕ ನಿವೇಶನ ರೂಪ ರೇಖೆ ಅನುಮೋದನೆ ಸಹ ನೀಡಲಾಗಿದೆ, ಸದರಿ ಪ್ರದೇಶದಲ್ಲಿ ಹೆಚ್. ಪಿ. ಗ್ಯಾಸ್ ಗೋಡಾನ್ ಕಟ್ಟಡ ಕಟ್ಟಲು ಪರವಾನಗಿ ನೀಡಬೇಕೆಂದು ದಿನಾಂಕ: 01-03-2011 ರಂದು ಅರ್ಜಿ ಸಲ್ಲಿಸಿರುತ್ತಾರೆ, ಹಾಗೂ ಸದರಿ ಪ್ರದೇಶದ ಅಕ್ಕ ಪಕ್ಕದಲ್ಲಿ ಯಾವುದೇ ವಸತಿ ಮನೆಗಳನ್ನು ನಿರ್ಮಿಸಿರುವುದಿಲ್ಲ ಹಾಗೂ ಒಂದು ವೇಳೆ ನಿರ್ಮಿಸಿದಲ್ಲಿ ತಮ್ಮ ಇಲಾಖೆಯಿಂದ ಅನುಮತಿ ಪಡೆದು ನಿರ್ಮಿಸುತ್ತೇನೆ ಎಂದು ತಿಳಿಸಿರುತ್ತಾರೆ, ಹಾಗಾಗಿ ಸದರಿ ಪ್ರದೇಶದಲ್ಲಿ ಹೆಚ್. ಪಿ. ಗ್ಯಾಸ್ ಗೋಡಾನ್ ಕಟ್ಟಡ ನಿರ್ಮಿಸಲು ಅನುಮತಿ ನೀಡುವ ಬಗ್ಗೆ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ವಹಿಸಬಹುದಾಗಿದೆ ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :–**

ಶ್ರೀ ಎನ್. ಆರ್. ತೆರದಾಳ್ ಬಿನ್ ರಾಜಪ್ಪ ತೆರದಾಳ್, ಮಲ್ಲಂದೂರು ರಸ್ತೆ, ಚಿಕ್ಕಮಗಳೂರು. ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 118 ಮತ್ತು 119 ರಲ್ಲಿನ 4987.53 ಚದರ ಮೀಟರ್ ಪ್ರದೇಶದಲ್ಲಿನ ಹೆಚ್. ಪಿ. ಗ್ಯಾಸ್ ಗೋಡಾನ್ ಕಟ್ಟಡ ನಿರ್ಮಿಸಲು ಪರವಾನಗಿ ಕೋರಿರುತ್ತಾರೆ, ಸದರಿ ಪ್ರದೇಶಕ್ಕೆ ಜಿಲ್ಲಾಧಿಕಾರಿಗಳವರ ಕಛೇರಿಯಿಂದ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತ ಆದೇಶವಾಗಿರುತ್ತದೆ. ಹಾಗೂ ಪ್ರಾಧಿಕಾರದಿಂದ ದಿನಾಂಕ: 16-05-2010 ರಂದು ವಸತಿ ಉದ್ದೇಶಕ್ಕಾಗಿ ಏಕ ನಿವೇಶನ ರೂಪ ರೇಖೆ ಅನುಮೋದನೆ ಸಹ ನೀಡಲಾಗಿದೆ, ಹಾಗೂ ವಸತಿ ವಲಯದಲ್ಲಿ ವಿಶೇಷ ಸಂದರ್ಭದಲ್ಲಿ ಗ್ಯಾಸ್ ಗೋಡಾನ್ ನಿರ್ಮಾಣಕ್ಕೆ ಅವಕಾಶವಿರುತ್ತದೆ, ಆದರೆ ಪ್ರಸ್ತಾವಿತ ಸ್ಥಳಕ್ಕೆ ಹೊಂದಿಕೊಂಡಂತೆ ವಸತಿ ಬೆಳವಣಿಗೆಗಳು ಬಂದಿರುವುದರಿಂದ ಹಾಗೂ ಮುಂದೆ ವಸತಿ ಬೆಳವಣಿಗೆಗಳು ಬರಬಹುದಾಗಿದ್ದು, ಸುರಕ್ಷತೆಯ ದೃಷ್ಟಿಯಿಂದ ಈ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಣಯ ಕೈಗೊಳ್ಳಬಹುದಾಗಿರುತ್ತದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಶ್ರೀ ಎನ್. ಆರ್. ತೆರದಾಳ್ ಬಿನ್ ರಾಜಪ್ಪ ತೆರದಾಳ್, ಮಲ್ಲಂದೂರು ರಸ್ತೆ, ಚಿಕ್ಕಮಗಳೂರು. ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 118 ಮತ್ತು 119 ರಲ್ಲಿನ 4987.53 ಚದರ ಮೀಟರ್ ಪ್ರದೇಶಕ್ಕೆ ಜಿಲ್ಲಾಧಿಕಾರಿಗಳವರ ಕಛೇರಿಯಿಂದ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತ ಆದೇಶವಾಗಿರುತ್ತದೆ, ಹಾಗೂ ಪ್ರಾಧಿಕಾರದಿಂದ ದಿನಾಂಕ: 16-05-2010 ರಂದು ವಸತಿ ಉದ್ದೇಶಕ್ಕಾಗಿ ಏಕ ನಿವೇಶನ ರೂಪ ರೇಖೆ ಅನುಮೋದನೆ ಸಹ ನೀಡಲಾಗಿದೆ, ಸದರಿ ಪ್ರದೇಶದಲ್ಲಿ ಗ್ಯಾಸ್ ಗೋಡಾನ್ ನಿರ್ಮಾಣಕ್ಕಾಗಿ ಅನುಮತಿ ಕೋರಲಾಗಿದ್ದು, ಮಾಲೀಕರಿಂದ ಅಫಿಡವಿಟ್ ಪಡೆದುಕೊಂಡು ಯಾವುದೇ ಅವಧಿಯಲ್ಲಿ ಆದೇಶ ರದ್ದುಗೊಳಿಸಿ ವಾಪಾಸ್ ಪಡೆಯುವ ಅಧಿಕಾರವನ್ನು ಪ್ರಾಧಿಕಾರವು ಕಾಯ್ದಿರಿಸಿಕೊಳ್ಳುವ ಷರತ್ತಿನ ಮೇರೆಗೆ ಹಾಗೂ ಈ ಘಟಕದ ಸುತ್ತ ಇದೇ ಮಾಲೀಕರ ಉಳಿದ ಭೂಮಿಯನ್ನು ಯಾವುದೇ ಉದ್ದೇಶಕ್ಕೆ (ವಸತಿ / ವಾಣಿಜ್ಯ, ಸಾರ್ವಜನಿಕ ಉದ್ದೇಶಕ್ಕೆ) ಬಳಸದಿರುವ ಷರತ್ತಿನೊಂದಿಗೆ ಅನುಮೋದನೆ ನೀಡುವಂತೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

# ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ಇತರೆ ವಿಷಯಗಳು.

**ವಿಷಯ ನಂ 1.**

ಪ್ರಾಧಿಕಾರದ ವ್ಯಾಪ್ತಿಯ ಹಿರೇಮಗಳೂರು ವಸತಿ ಬಡಾವಣೆಯ ಬೀದಿ ದೀಪಗಳ ದುರಸ್ಥಿ ಮತ್ತು ನಿರ್ವಹಣೆ ಕಾಮಗಾರಿಗಳನ್ನು ಕಛೇರಿವತಿಯಿಂದ ನಿರ್ವಹಿಸುವ ಬಗ್ಗೆ.

**ಟಿಪ್ಪಣಿ :**

ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಹಿರೇಮಗಳೂರು ವಸತಿ ಬಡಾವಣೆಯಲ್ಲಿನ ಬೀದಿದೀಪಗಳ ದುರಸ್ಥಿ ಮತ್ತು ನಿರ್ವಹಣೆ ಕಾಮಗಾರಿಗಳನ್ನು ಇಲ್ಲಿಯವರೆಗೆ ಟೆಂಡರ್ ಕರಾರಿನ ಮೇರೆಗೆ ವಾರ್ಷಿಕ 2.00 ಲಕ್ಷ ರೂಪಾಯಿಗಳು ವೆಚ್ಚಭರಿಸಿ ನಿರ್ವಹಿಸಲಾಗುತ್ತಿದ್ದು, ಸದರಿ ವಿದ್ಯುತ್ ನಿರ್ವಹಣೆ ವೆಚ್ಚವು ಹೆಚ್ಚಾಗಿದ್ದು, ನಿರ್ವಹಣೆ ಸಮರ್ಪಕ ರೀತಿಯಲ್ಲಿ ಕಛೇರಿ ವತಿಯಿಂದಲೇ ವಿದ್ಯುತ್ ದೀಪಗಳನ್ನು ದುರಸ್ಥಿಪಡಿಸುವುದು ಹಾಗೂ ನಿರ್ವಹಣೆ ಮಾಡುವುದು ಸೂಕ್ತ ಹಾಗೂ ಮಿತವ್ಯಯವಾಗುತ್ತದೆ ಎಂದು ಮಾನ್ಯ ಅಧ್ಯಕ್ಷರು ಅಭಿಪ್ರಾಯಪಟ್ಟಿರುತ್ತಾರೆ. ಆದ್ದರಿಂದ ಕಛೇರಿ ವತಿಯಿಂದ ನಿರ್ವಹಣೆ ಮಾಡುವ ಬಗ್ಗೆ ವಿಷಯವನ್ನು ಸಭೆ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಹಿರೇಮಗಳೂರು ವಸತಿ ಬಡಾವಣೆಯಲ್ಲಿನ ಬೀದಿ ದೀಪಗಳ ದುರಸ್ಥಿ ಮತ್ತು ನಿರ್ವಹಣೆ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್‌ಗಳಲ್ಲಿ ಬೀದಿ ದೀಪ ನಿರ್ವಹಣೆ ಬಗ್ಗೆ ಅನೇಕ ಹೊಸದಾಗಿ ಷರತ್ತುಗಳನ್ನು ವಿಧಿಸಲಾಗಿದ್ದು, ಆ ಎಲ್ಲಾ ಷರತ್ತುಗಳನ್ನು ಪೂರೈಸುವ ಬಗ್ಗೆ ವಿದ್ಯುತ್ ಗುತ್ತಿಗೆದಾರರೊಂದಿಗೆ ಮತ್ತೊಮ್ಮೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು.

**ವಿಷಯ ನಂ 2.**

ಪ್ರಾಧಿಕಾರದ ವತಿಯಿಂದ ಉಪ್ಪಳ್ಳಿ ಮತ್ತು ಇಂದಾವರ ಗ್ರಾಮದ ಸರ್ವೆ ನಂಬರುಗಳಲ್ಲಿ ನಿರ್ಮಾಣ ಮಾಡಲಾಗುತ್ತಿರುವ ಸುಮಾರು 187 ಎಕರೆ 19 ಗುಂಟೆ (ಖರಾಬು ಸೇರಿ 193 ಎಕರೆ 19 ಗುಂಟೆ) ಪ್ರದೇಶದಲ್ಲಿನ ವಸತಿ ಬಡಾವಣೆಗೆ "ಶ್ರೀ ಆಟಲ್‌ಬಿಹಾರಿ ವಾಜ್‌ಪೇಯಿ ವಸತಿ ಬಡಾವಣೆ" ಎಂದು ನಾಮಕರಣ ಮಾಡುವ ಬಗ್ಗೆ.

**ಟಿಪ್ಪಣಿ :**

ಪ್ರಾಧಿಕಾರದ ವತಿಯಿಂದ ಉಪ್ಪಳ್ಳಿ ಹಾಗೂ ಇಂದಾವರ ಗ್ರಾಮಗಳ ವಿವಿಧ ಸರ್ವೆ ನಂಬರುಗಳಲ್ಲಿನ 187 ಎಕರೆ 19 ಗುಂಟೆ (ಖರಾಬು ಸೇರಿ 193 ಎಕರೆ 19 ಗುಂಟೆ) ಪ್ರದೇಶದಲ್ಲಿ ನಿರ್ಮಾಣ ಮಾಡುತ್ತಿರುವ ವಸತಿ ಬಡಾವಣೆಗೆ ಶ್ರೀ ಆಟಲ್‌ಬಿಹಾರಿ ವಾಜ್‌ಪೇಯಿ ವಸತಿ ಬಡಾವಣೆ ಎಂದು ನಾಮಕರಣ ಮಾಡಲು ಮಾನ್ಯ ಅಧ್ಯಕ್ಷರು ಸೂಚಿಸಿದ್ದು ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಪ್ರಾಧಿಕಾರದ ವತಿಯಿಂದ ಉಪ್ಪಳ್ಳಿ ಹಾಗೂ ಇಂದಾವರ ಗ್ರಾಮಗಳ ವಿವಿಧ ಸರ್ವೆ ನಂಬರುಗಳಲ್ಲಿನ 187 ಎಕರೆ 19 ಗುಂಟೆ (ಖರಾಬು ಸೇರಿ 193 ಎಕರೆ 19 ಗುಂಟೆ) ಪ್ರದೇಶದಲ್ಲಿ ನಿರ್ಮಾಣ ಮಾಡುತ್ತಿರುವ ವಸತಿ ಬಡಾವಣೆಗೆ **"ಶ್ರೀ ಅಟಲ್‌ಬಿಹಾರಿ ವಾಜ್‌ಪೇಯಿ ವಸತಿ ಬಡಾವಣೆ"** ಎಂದು ನಾಮಕರಣ ಮಾಡಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ 3.**

ಉಪ್ಪಳ್ಳಿ ಮತ್ತು ಇಂದಾವರ ಗ್ರಾಮಗಳಲ್ಲಿ 187 ಎಕರೆ 19 ಗುಂಟೆ (ಖರಾಬು ಸೇರಿ 193 ಎಕರೆ 19 ಗುಂಟೆ) ಪ್ರದೇಶದಲ್ಲಿ ನಿರ್ಮಾಣ ಮಾಡಲಾಗುತ್ತಿರುವ ವಸತಿ ಬಡಾವಣೆ ಯೋಜನೆಯಲ್ಲಿ ಹಂಚಿಕೆ ಮಾಡಲಾಗುವ ನಿವೇಶನಗಳನ್ನು ಹಂಚಿಕೆದಾರರಿಗೆ ನೇರವಾಗಿ ಕ್ರಯಪತ್ರ ಮಾಡಿಕೊಡುವ ಬಗ್ಗೆ.

**ಟಿಪ್ಪಣಿ :**

ಉಪ್ಪಳ್ಳಿ – ಇಂದಾವರ ಗ್ರಾಮಗಳ ವಿವಿಧ ಸರ್ವೆ ನಂಬರುಗಳಲ್ಲಿ ಸುಮಾರು 187 ಎಕರೆ 19 ಗುಂಟೆ (ಖರಾಬು ಸೇರಿ 193 ಎಕರೆ 19 ಗುಂಟೆ) ಪ್ರದೇಶದಲ್ಲಿ ನಿರ್ಮಾಣ ಮಾಡುತ್ತಿರುವ ವಸತಿ ಬಡಾವಣೆಗೆ ಭೂಮಿಯನ್ನು ಪ್ರಾಧಿಕಾರದ ಪರವಾಗಿ ಪರಸ್ಪರ ಒಪ್ಪಿಗೆ ಮೂಲಕ (M.O.U.) ನೋಂದಣಿ ಮಾಡಿಸಿ ಸ್ವಾದೀನಕ್ಕೆ ಪಡೆಯಲಾಗುತ್ತಿದೆ. ಸರ್ಕಾರದ ಒಪ್ಪಿಗೆ ಪಡೆದು ಮಾಲೀಕರಿಂದ ಕ್ರಯಪತ್ರ ಮಾಡಿಸಿಕೊಳ್ಳಲು ಪ್ರಾಧಿಕಾರದ ನಿರ್ಣಯಕ್ಕಾಗಿ ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಉಪ್ಪಳ್ಳಿ – ಇಂದಾವರ ಗ್ರಾಮಗಳ ವಿವಿಧ ಸರ್ವೆ ನಂಬರುಗಳಲ್ಲಿ ಸುಮಾರು 187 ಎಕರೆ 19 ಗುಂಟೆ (ಖರಾಬು ಸೇರಿ 193 ಎಕರೆ 19 ಗುಂಟೆ) ಪ್ರದೇಶದಲ್ಲಿ ನಿರ್ಮಾಣ ಮಾಡುತ್ತಿರುವ ವಸತಿ ಬಡಾವಣೆಗೆ ಭೂಮಿಯನ್ನು ಪ್ರಾಧಿಕಾರದ ಪರವಾಗಿ ಪರಸ್ಪರ ಒಪ್ಪಿಗೆ ಮೂಲಕ (M.O.U.) ನೋಂದಣಿ ಮಾಡಿಸಿ ಸ್ವಾದೀನಕ್ಕೆ ಪಡೆಯಲಾಗುತ್ತಿದೆ. ಬಡಾವಣೆ ನಿರ್ಮಾಣವಾದ ನಂತರ ಸಂಬಂದಪಟ್ಟ ಭೂ ಮಾಲೀಕರಿಂದ ಜಮೀನು ನೋಂದಣಿ ಮಾಡಿಕೊಳ್ಳಲು ಹಾಗೂ M.O.U. ಸ್ಕೀಂ ನಂತೆ ನಿವೇಶನಗಳನ್ನು ಭೂಮಾಲೀಕರಿಗೆ ಶೇಕಡ 40 ರಷ್ಟು ಸ್ವಾದೀನ ಪತ್ರ ನೀಡಲು ಹಾಗೂ ಭೂಮಿಯನ್ನು ಪ್ರಾಧಿಕಾರಕ್ಕೆ ಕ್ರಯಪತ್ರ ಮಾಡಿಕೊಳ್ಳಲು ಸಭೆಯು ತೀರ್ಮಾನಿಸಿತು.

**ವಿಷಯ ನಂ 4.**

ಶ್ರೀಮತಿ ಬಿ. ಕೆ. ಪ್ರೇಮಾ ಕೊಂ ಶ್ರೀ ಹೆಚ್. ಎಂ. ಗುಂಡೇಗೌಡ ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 108 / 1 ಮತ್ತು 110 ರಲ್ಲಿನ 04 ಎಕರೆ 04 ಗುಂಟೆ ಪ್ರದೇಶಕ್ಕೆ ಅನ್ಯಕ್ರಾಂತವಾಗಿರುವ ಪ್ರದೇಶದ ಪೈಕಿ 09 ಗುಂಟೆ ಜಾಗವನ್ನು ಏಕ ನಿವೇಶನ ವಿನ್ಯಾಸ ಅನುಮೋದನೆ ಮಾಡಿಕೊಡಲು ಕೋರಿರುವ ಕುರಿತು.

**ಟಿಪ್ಪಣಿ :**

ಶ್ರೀಮತಿ ಬಿ. ಕೆ. ಪ್ರೇಮಾ ಕೊಂ ಶ್ರೀ ಹೆಚ್. ಎಂ. ಗುಂಡೇಗೌಡ ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 108 / 1 ಮತ್ತು 110 ರಲ್ಲಿನ ಒಟ್ಟು 04 ಎಕರೆ 04 ಗುಂಟೆ ಪ್ರದೇಶಕ್ಕೆ ತಹಶೀಲ್ದಾರ್ ಕಛೇರಿಯ ಪತ್ರ ಸಂಖ್ಯೆ. ಎಎಲ್ಎನ್ : 18 : 1996 - 97 ದಿನಾಂಕ: 17-06-1997 ರಂತೆ 04 ಎಕರೆ 04 ಗುಂಟೆ ಪ್ರದೇಶಕ್ಕೆ ಅನ್ಯಕ್ರಾಂತವಾಗಿರುತ್ತದೆ, ಸದರಿ ವಿಸ್ತೀರ್ಣದ ಪೈಕಿ 09 ಗುಂಟೆ ಪ್ರದೇಶಕ್ಕೆ ಮಾತ್ರ ಏಕ ನಿವೇಶನವನ್ನು ವಿಭಜನೆ ಮಾಡಿ ಅನುಮೋದನೆ ನೀಡಲು ಕೋರಿರುತ್ತಾರೆ, ಆದರೆ ಈಗಾಗಲೇ ಅನ್ಯಕ್ರಾಂತ ಆದೇಶವಾಗಿರುವ ಒಟ್ಟು 04 ಎಕರೆ 04 ಗುಂಟೆ ಪ್ರದೇಶದ ಪೈಕಿ 09 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ಸರ್ಕಾರದ ಪತ್ರದ ಸಂಖ್ಯೆ.ನಅಇ : 103 : ಮೈಅಪ್ರಾ : 2009, ದಿನಾಂಕ:13-11-2009. ರ ಪತ್ರದನ್ವಯ ವಿಭಜಿಸಿ ವಿನ್ಯಾಸ ಅನುಮೋದನೆ ನೀಡಲು ಅವಕಾಶವಿರುವುದಿಲ್ಲವಾದ್ದರಿಂದ ಅನುಮೋದನೆ ನೀಡಲು ಅವಕಾಶವಿರುವುದಿಲ್ಲ. ಆದರೆ ಇಂತಹ ಪ್ರಕರಣಗಳು ಸಾಕಷ್ಟು ಇರುವುದರಿಂದ ಸಾಮಾನ್ಯ ಜನರಿಗೆ ಮನೆ ಕಟ್ಟಿಕೊಳ್ಳಲು ತೊಂದರೆಯಾರಿರುತ್ತದೆ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಹಾಗೂ ಸಾರ್ವಜನಿಕರ ಹಿತದೃಷ್ಠಿಯಿಂದ ಮಾನ್ಯ ಅಧ್ಯಕ್ಷರ ಸೂಚನೆ ಮೇರೆಗೆ ಈಗಾಗಲೇ ವಿಭಜನೆ ಮಾಡಿರುವ ನಿವೇಶನಗಳಿಗೆ, ಏಕ ನಿವೇಶನ ವಿನ್ಯಾಸ ಅನುಮೋದನೆ ನೀಡುವ ಸಂಬಂದ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಉಪ್ಪಳ್ಳಿ ಗ್ರಾಮದ ಸರ್ವೆ ನಂ. 108 / 1 ಮತ್ತು 110 ರಲ್ಲಿನ ಒಟ್ಟು 04 ಎಕರೆ 04 ಗುಂಟೆ ಪ್ರದೇಶಕ್ಕೆ ತಹಶೀಲ್ದಾರ್ ಕಛೇರಿಯ ಪತ್ರ ಸಂಖ್ಯೆ. ಎಎಲ್‌ಎನ್ : 18 : 1996 - 97 ದಿನಾಂಕ: 17-06-1997 ರಂತೆ 04 ಎಕರೆ 04 ಗುಂಟೆ ಪ್ರದೇಶಕ್ಕೆ ಅನ್ಯಕ್ರಾಂತವಾಗಿರುತ್ತದೆ, ಸದರಿ ವಿಸ್ತೀರ್ಣದ ಪೈಕಿ 09 ಗುಂಟೆ ಪ್ರದೇಶಕ್ಕೆ ಮಾತ್ರ ಏಕ ನಿವೇಶನವನ್ನು ವಿಭಜನೆ ಮಾಡಿ ಅನುಮೋದನೆ ನೀಡಲು ಕೋರಲಾಗಿದ್ದು, ಕಾನೂನಿನ ಅಡಿಯಲ್ಲಿ ಈ ರೀತಿ ತುಂಡು ತುಂಡು ಮಾಡಿ ಏಕ ನಿವೇಶನ ಅನುಮೋದನೆ ಮಾಡಲು ಅವಕಾಶವಿರುವುದಿಲ್ಲವೆಂದು ನಗರ ಯೋಜನಾ ಸದಸ್ಯರು ಮತ್ತು ಆಯುಕ್ತರು ಸಭೆಗೆ ತಿಳಿಸಿದರು, ಆದರೆ ಮಾನ್ಯ ಅಧ್ಯಕ್ಷರು ಮತ್ತು ಸದಸ್ಯರುಗಳು ಈ ಬಗ್ಗೆ ಕಛೇರಿಯಲ್ಲಿ ಈ ರೀತಿ ಅನೇಕ ಅರ್ಜಿಗಳು ಬಂದು ಬಾಕಿ ಇದ್ದು ಸಾಮಾನ್ಯ ಜನರಿಗೆ ಇದರಿಂದ ತುಂಬಾ ತೊಂದರೆಯಾಗುತ್ತಿರುತ್ತದೆ, ಆದ್ದರಿಂದ ಬೇರೆ ಬೇರೆ ಪ್ರಾಧಿಕಾರಗಳಂತೆ ನಿವೇಶನ ಮೌಲ್ಯದ ಶೇಕಡ 25 ರಷ್ಟು ದಂಡ ವಿಧಿಸಿ ಅನುಮೋದನೆ ನೀಡಲು ಹಾಗೂ ಮುಂದೆ ಅಕ್ರಮ ಸಕ್ರಮ ಯೋಜನೆ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ವಿದಿಸಬಹುದಾದ ಷರತ್ತುಗಳಿಗೆ ಬದ್ದವಾಗಿರುವುದಾಗಿ ಅರ್ಜಿದಾರರಿಂದ ಮುಂದಿನ ಆಗು ಹೋಗುಗಳಿಗೆ ಪೂರ್ಣ ಜವಾಬ್ದಾರರಾಗಿರುವುದಾಗಿ ಅಫಿಡವಿಟ್ ಪಡೆದು ಅನುಮೋದನೆ ನೀಡುವಂತೆ ಆಯುಕ್ತರು ಹಾಗೂ ನಗರ ಯೋಜನಾ ಸದಸ್ಯರನ್ನು ಹೊರತುಪಡಿಸಿ ಉಳಿದೆಲ್ಲಾ ಸದಸ್ಯರು ಒಮ್ಮತದ ಅಭಿಪ್ರಾಯ ತಿಳಿಸಿದರು, ಸಭೆ ನಡವಳಿ ಸರ್ಕಾರಕ್ಕೆ ಕಳುಹಿಸಿದ ನಂತರ ಈ ಬಗ್ಗೆ ಸರ್ಕಾರದಿಂದ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ಅನುಷ್ಠಾನಗೊಳಿಸಬಹುದೆಂದು ಸಹ ಸಭೆಯಲ್ಲಿ ಬಹುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 5.**

ಶ್ರೀ ಪಿ. ಸಿ. ಲೋಕಪ್ಪಗೌಡ ಮಾತೃಶ್ರೀ ನಿಲಯ, ಹಿರೇಮಗಳೂರು ರಸ್ತೆ, ಚಿಕ್ಕಮಗಳೂರು ರವರು ವಾಸದ ಮನೆಯ ನಿವೇಶನದ ಮೇಲೆ ರಸ್ತೆ ತೋರಿಸಿರುವ ಬಗ್ಗೆ ಮನವಿ ಸಲ್ಲಿಸಿರುವ ಕುರಿತು.

**ಟಿಪ್ಪಣಿ :**

ಶ್ರೀ ಪಿ. ಸಿ. ಲೋಕಪ್ಪಗೌಡ ಮಾತೃಶ್ರೀ ನಿಲಯ ಹಿರೇಮಗಳೂರು ರಸ್ತೆ, ಚಿಕ್ಕಮಗಳೂರು ರವರು ದಿನಾಂಕ: 15-02-2011 ರಂದು ಅರ್ಜಿ ಸಲ್ಲಿಸಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 142 / P ರಲ್ಲಿನ 30 x 25 ವಿಸ್ತೀರ್ಣಕ್ಕೆ ದಿನಾಂಕ: 27-09-2001 ರಲ್ಲಿ ಬಿಡಿ ನಿವೇಶನ ಅನುಮೋದನೆ ನೀಡಿದ್ದು ಅದರಂತೆ ಸದರಿ ಪ್ರದೇಶದಲ್ಲಿ ನಿಯಮಾನುಸಾರ ಕಟ್ಟಡ ಪರವಾನಗಿ ಪಡೆದು ಕಟ್ಟಡ ನಿರ್ಮಾಣ ಮಾಡಿರುವುದಾಗಿ ತಿಳಿಸಿರುತ್ತಾರೆ, ಈಗ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯ ನಕ್ಷೆಯಲ್ಲಿ ಸದರಿ ಪ್ರದೇಶದ ಮೇಲೆ ರಸ್ತೆಯನ್ನು ತೋರಿಸಲಾಗಿದೆ, ಸದರಿ ರಸ್ತೆಯನ್ನು ಪಕ್ಕದಲ್ಲಿ ಖಾಲಿ ಇರುವ ಪ್ರದೇಶಕ್ಕೆ ಸ್ಥಳಾಂತರಿಸಿ ಅನುಕೂಲ ಮಾಡಿಕೊಡಬೇಕೆಂದು, ಸದರಿ ಪ್ರಕರಣವನ್ನು ಪರಿಶೀಲಿಸಿ ಸದರಿ ನಿವೇಶನದ ಮೇಲೆ ಅಳವಡಿಸಿರುವ ರಸ್ತೆಯನ್ನು ಬದಲಾಯಿಸಿ ಸರಿಪಡಿಸಿಕೊಡಬೇಕೆಂದು ಕೋರಿರುವಂತೆ ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಮಹಾಯೋಜನಾ ನಕ್ಷೆಯಲ್ಲಿ ಶ್ರೀ ಪಿ. ಸಿ. ಲೋಕಪ್ಪಗೌಡ ಮಾತೃಶ್ರೀ ನಿಲಯ ಹಿರೇಮಗಳೂರು ರಸ್ತೆ, ಚಿಕ್ಕಮಗಳೂರು ರವರ ಮನೆಯ ಮೇಲೆ ರಸ್ತೆ ಹಾದು ಹೋಗಿರುವುದಾಗಿ ತಿಳಿದು ಬಂದಿದ್ದು ಮುಂದಿನ 2 ವರ್ಷದವರೆಗೆ ಯಾವುದೇ ತಿದ್ದುಪಡಿ ಮಾಡಲು ಪ್ರಾಧಿಕಾರಕ್ಕೆ ಕಾನೂನಿನಲ್ಲಿ ಅವಕಾಶವಿರುವುದಿಲ್ಲವೆಂದು ನಗರ ಯೋಜನಾ ಸದಸ್ಯರು ಸಭೆಗೆ ತಿಳಿಸಿದರು ಆದ್ದರಿಂದ ಮುಂದಿನ 2 ವರ್ಷಗಳಲ್ಲಿ ಸದರೀ ಜಾಗದಲ್ಲಿ ರಸ್ತೆ ನಿರ್ಮಾಣ ಕೈಗೊಳ್ಳದಂತೆ ಸ್ಥಗಿತಗೊಳಿಸಿ ನಂತರ ಮುಂದಿನ ಕ್ರಮ ತೆಗೆದುಕೊಳ್ಳಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ 6.**

ಉಪ್ಪಳ್ಳಿ ಮತ್ತು ಇಂದಾವರ ಗ್ರಾಮದ ಸರ್ವೆ ನಂಬರುಗಳಲ್ಲಿನ 187 ಎಕರೆ 19 ಗುಂಟೆ (ಖರಾಬು ಸೇರಿ 193 ಎಕರೆ 19 ಗುಂಟೆ) ವಿಸ್ತೀರ್ಣದ ಪ್ರದೇಶದಲ್ಲಿರುವ ಸರ್ವೆ ನಂಬರುಗಳಲ್ಲಿ ಸಾರ್ವಜನಿಕ ಮತ್ತು ಅರೆಸಾರ್ವಜನಿಕ ಹಾಗೂ ಉದ್ಯಾನವನಕ್ಕೆ ಮೀಸಲಿರಿಸಿರುವ ಪ್ರದೇಶವನ್ನು ವಸತಿ ಉಪಯೋಗಕ್ಕಾಗಿ ಬದಾಲಾವಣೆ ಮಾಡುವ ಕುರಿತು.

**ಟಿಪ್ಪಣಿ :**

ಉಪ್ಪಳ್ಳಿ – ಇಂದಾವರ ಗ್ರಾಮಗಳ ವಿವಿಧ ಸರ್ವೆ ನಂಬರುಗಳಲ್ಲಿ ಸುಮಾರು 187 ಎಕರೆ 19 ಗುಂಟೆ (ಖರಾಬು ಸೇರಿ 193 ಎಕರೆ 19 ಗುಂಟೆ) ಪ್ರದೇಶದಲ್ಲಿ ನಿರ್ಮಾಣ ಮಾಡುತ್ತಿರುವ ವಸತಿ ಬಡಾವಣೆಯಲ್ಲಿನ ಸರ್ವೆ ನಂ. 44 ರಲ್ಲಿನ 7800.00 ಚ. ಮೀ, ಸರ್ವೆ ನಂ. 43 ರಲ್ಲಿನ 19730.00 ಚ. ಮೀ, ಸರ್ವೆ ನಂ. 61 ರಲ್ಲಿನ 7925.00 ಚ. ಮೀ, ಸರ್ವೆ ನಂ. 60 ರಲ್ಲಿನ 1085.00 ಚ. ಮೀ, ಸರ್ವೆ ನಂ. 59 ರಲ್ಲಿನ 17787.50 ಚ. ಮೀ, ಸರ್ವೆ ನಂ. 582 ರಲ್ಲಿನ 4525.00 ಚ. ಮೀ, ಮತ್ತು ಸರ್ವೆ ನಂ. 581 ರಲ್ಲಿನ 3745.00 ಚ. ಮೀ, **ಒಟ್ಟು 62597.50 ಚ. ಮೀ** ವಿಸ್ತೀರ್ಣದ ಪ್ರದೇಶವು **ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ** ಉಪಯೋಗಕ್ಕಾಗಿ ಮತ್ತು ಸರ್ವೆ ನಂ. 44 ರಲ್ಲಿನ 6720.00 ಚ. ಮೀ, ಸರ್ವೆ ನಂ. 45 ರಲ್ಲಿನ 13650.00 ಚ. ಮೀ, ಸರ್ವೆ ನಂ. 46 ರಲ್ಲಿನ 5200.00 ಚ. ಮೀ, ಸರ್ವೆ ನಂ. 59 ರಲ್ಲಿನ 950.00 ಚ. ಮೀ, ಸರ್ವೆ ನಂ. 34 ರಲ್ಲಿನ 10901.25 ಚ. ಮೀ ಮತ್ತು 3467.50 ಚ. ಮೀ **ಒಟ್ಟು 40888.75 ಚ. ಮೀ** ವಿಸ್ತೀರ್ಣದ ಪ್ರದೇಶವನ್ನು **ಉದ್ಯಾನವನ** ಉಪಯೋಗಕ್ಕಾಗಿ ಅನುಮೋದನೆಯಾಗಿರುವ ಮಹಾಯೋಜನಾ ನಕ್ಷೆಯಲ್ಲಿ ಮೀಸಲಿಡಲಾಗಿದೆ, ಆದರೆ ಸದರಿ ಪ್ರದೇಶದಲ್ಲಿ ಬಡಾವಣೆ ನಿರ್ಮಾಣ ಮಾಡುತ್ತಿದ್ದು ಸದರಿ ಪ್ರದೇಶದಲ್ಲಿ ಅವಶ್ಯವಿರುವ ಭಾಗದಲ್ಲಿ ಉದ್ಯಾನವನ ಮತ್ತು ಸಾರ್ವಜನಿಕ ಮತ್ತು ಅರೆಸಾರ್ವಜನಿಕ ಉಪಯೋಗಕ್ಕಾಗಿ ಮೀಸಲಿಟ್ಟಿರುವುದರಿಂದ ಸದರಿ ಜಾಗದಲ್ಲಿರುವ ಸಾರ್ವಜನಿಕ ಮತ್ತು ಅರೆಸಾರ್ವಜನಿಕ ಉಪಯೋಗ ಮತ್ತು ಉದ್ಯಾನವನದ ಉಪಯೋಗದಿಂದ ವಸತಿ ಉಪಯೋಗಕ್ಕೆ ಬದಲಾಯಿಸಲು ಸರ್ಕಾರದ ಪೂರ್ವಾನುಮತಿ ಪಡೆದು ಬಡಾವಣೆ ನಿರ್ಮಾಣಕ್ಕಾಗಿ ಸದರಿ ಭೂ ಉಪಯೋಗವನ್ನು ಬದಲಾಯಿಸಿಕೊಂಡು ಬಡಾವಣೆಯನ್ನು ರಚನೆ ಮಾಡಿಕೊಳ್ಳುವ ಸಲುವಾಗಿ ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಉಪ್ಪಳ್ಳಿ – ಇಂದಾವರ ಗ್ರಾಮಗಳ ವಿವಿಧ ಸರ್ವೆ ನಂಬರುಗಳಲ್ಲಿ ಸುಮಾರು 187 ಎಕರೆ 19 ಗುಂಟೆ (ಖರಾಬು ಸೇರಿ 193 ಎಕರೆ 19 ಗುಂಟೆ) ಪ್ರದೇಶದಲ್ಲಿ ನಿರ್ಮಾಣ ಮಾಡುತ್ತಿರುವ ವಸತಿ ಬಡಾವಣೆಯಲ್ಲಿನ ಸರ್ವೆ ನಂ. 44 ರಲ್ಲಿನ 7800.00 ಚ. ಮೀ, ಸರ್ವೆ ನಂ. 43 ರಲ್ಲಿನ 19730.00 ಚ. ಮೀ, ಸರ್ವೆ ನಂ. 61 ರಲ್ಲಿನ 7925.00 ಚ. ಮೀ, ಸರ್ವೆ ನಂ. 60 ರಲ್ಲಿನ 1085.00 ಚ. ಮೀ, ಸರ್ವೆ ನಂ. 59 ರಲ್ಲಿನ 17787.50 ಚ. ಮೀ, ಸರ್ವೆ ನಂ. 582 ರಲ್ಲಿನ 4525.00 ಚ. ಮೀ, ಮತ್ತು ಸರ್ವೆ ನಂ. 581 ರಲ್ಲಿನ 3745.00 ಚ. ಮೀ, **ಒಟ್ಟು 62597.50 ಚ. ಮೀ** ವಿಸ್ತೀರ್ಣದ ಪ್ರದೇಶವು **ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ** ಉಪಯೋಗಕ್ಕಾಗಿ ಮತ್ತು ಸರ್ವೆ ನಂ. 44 ರಲ್ಲಿನ 6720.00 ಚ. ಮೀ, ಸರ್ವೆ ನಂ. 45 ರಲ್ಲಿನ 13650.00 ಚ. ಮೀ, ಸರ್ವೆ ನಂ. 46 ರಲ್ಲಿನ 5200.00 ಚ. ಮೀ, ಸರ್ವೆ ನಂ. 59 ರಲ್ಲಿನ 950.00 ಚ. ಮೀ, ಸರ್ವೆ ನಂ. 34 ರಲ್ಲಿನ 10901.25 ಚ. ಮೀ ಮತ್ತು 3467.50 ಚ. ಮೀ **ಒಟ್ಟು 40888.75 ಚ. ಮೀ** ವಿಸ್ತೀರ್ಣದ ಪ್ರದೇಶವನ್ನು **ಉದ್ಯಾನವನ** ಉಪಯೋಗಕ್ಕಾಗಿ ಅನುಮೋದನೆಯಾಗಿರುವ ಮಹಾಯೋಜನಾ ನಕ್ಷೆಯಲ್ಲಿ ಮೀಸಲಿಡಲಾಗಿದೆ, ಆದರೆ ಸದರಿ ಪ್ರದೇಶದಲ್ಲಿ ಬಡಾವಣೆ ನಿರ್ಮಾಣ ಮಾಡುತ್ತಿದ್ದು ಸದರಿ ಪ್ರದೇಶದಲ್ಲಿ ಅವಶ್ಯವಿರುವ ಭಾಗದಲ್ಲಿ ಉದ್ಯಾನವನ ಮತ್ತು ಸಾರ್ವಜನಿಕ ಮತ್ತು ಅರೆಸಾರ್ವಜನಿಕ ಉಪಯೋಗದಿಂದ ವಸತಿ ಯೋಜನೆ ಉಪಯೋಗಕ್ಕೆ ಬದಲಾಯಿಸಲು ಸರ್ಕಾರದ ಪೂರ್ವಾನುಮತಿ ಪಡೆದು ಸದರಿ ಭೂ ಉಪಯೋಗವನ್ನು ಬದಲಾಯಿಸಿಕೊಂಡು ಬಡಾವಣೆ ರಚನೆ ಮಾಡುವ ಬಗ್ಗೆ ಸಭೆಯು ಸರ್ವಾನುಮತದ ಒಪಿಗೆ ನೀಡಿತು.

**ವಿಷಯ ನಂ 7.**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 330 / 12 ರಲ್ಲಿನ 00 ಎಕರೆ 17 ಗುಂಟೆ, ಸರ್ವೆ ನಂ. 330 / 6P2 ರಲ್ಲಿನ 00 ಎಕರೆ 06½ ಗುಂಟೆ, ಸರ್ವೆ ನಂ. 330 / 11 ರಲ್ಲಿನ 00 ಎಕರೆ 13 ಗುಂಟೆ, ಸರ್ವೆ ನಂ. 330 / 5 ರಲ್ಲಿನ 00 ಎಕರೆ 32 ಗುಂಟೆ, ಸರ್ವೆ ನಂ. 330 / 8 ರಲ್ಲಿನ 00 ಎಕರೆ 11 ಗುಂಟೆ, ಮತ್ತು ಸರ್ವೆ ನಂ. 330 / 8B ರಲ್ಲಿನ 00 ಎಕರೆ 12 ಗುಂಟೆ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿರುವ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 330 / 12 ರಲ್ಲಿನ 00 ಎಕರೆ 17 ಗುಂಟೆ, ಮತ್ತು ಸರ್ವೆ ನಂ. 330 / 5 ರಲ್ಲಿನ 00 ಎಕರೆ 32 ಗುಂಟೆ ಪ್ರದೇಶಕ್ಕೆ ಶ್ರೀ ರೇವಣಸಿದ್ದಪ್ಪ ಬಿನ್ ಸಿದ್ದಪ್ಪ, ಹಾಗೂ ಸರ್ವೆ ನಂ. 330 / 6P2 ರಲ್ಲಿನ 00 ಎಕರೆ 06½ ಗುಂಟೆ ಪ್ರದೇಶಕ್ಕೆ ಶ್ರೀ ಬಸವರಾಜ್ ಬಿನ್ ಶಂಕರಪ್ಪ, ಹಾಗೂ ಸರ್ವೆ ನಂ. 330 / 11 ರಲ್ಲಿನ 00 ಎಕರೆ 13 ಗುಂಟೆ ಪ್ರದೇಶಕ್ಕೆ ಶ್ರೀ ಶಿವಾನಂದ ಬಿನ್ ರೇವಣ್ಣ, ಹಾಗೂ ಸರ್ವೆ ನಂ. 330 / 8 ರಲ್ಲಿನ 00 ಎಕರೆ 11 ಗುಂಟೆ ಪ್ರದೇಶಕ್ಕೆ ಶ್ರೀ ಡಿ. ಬಿ. ಧರ್ಮಪ್ಪ ಬಿನ್ ಬಸಪ್ಪ, ಮತ್ತು ಸರ್ವೆ ನಂ. 330 / 8B ರಲ್ಲಿನ 00 ಎಕರೆ 12 ಗುಂಟೆ ಪ್ರದೇಶಕ್ಕೆ ಶ್ರೀ ಬಸಪ್ಪ ಯಾನೆ ರಾಜಣ್ಣ ಬಿನ್ ಡಿ. ಬಿ. ನಾಗೇಂದ್ರ ಇವರುಗಳು ವಸತಿ ವಿನ್ಯಾಸ ಅನುಮೋದನೆ ಕೋರಿರುತ್ತಾರೆ, ಸದರಿ ಪ್ರದೇಶವು ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯಿಂದ ಪ್ರತ್ಯೇಕವಾಗಿ ಅನ್ಯಕ್ರಾಂತ ಆದೇಶವಾಗಿರುವ ಪ್ರದೇಶವಾಗಿರುತ್ತದೆ, ಸದರಿ ಪ್ರದೇಶಕ್ಕೆ ಪ್ರತ್ಯೇಕವಾಗಿ ವಸತಿ ಬಡಾವಣೆ ವಿನ್ಯಾಸ ಅನುಮೋದನೆ ನೀಡಲು ನಿಯಮಾವಳಿಗಳಲ್ಲಿ ಅವಕಾಶ ಇರುತ್ತದೆ, ವಸತಿ ವಿನ್ಯಾಸವನ್ನು ಅನುಮೋದನೆ ನೀಡುವ ಸಂಬಂದ ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಸಭೆಗೆ ಮಂಡಿಸಿದ ವಿಷಯ ಹಾಗೂ ಟಿಪ್ಪಣಿಯಲ್ಲಿ ಮಾಲಿಕರ ಹೆಸರು ತಪ್ಪಾಗಿ ಮೂಲ ಮಾಲೀಕರ ಹೆಸರು ಬರೆಯಲಾಗಿದೆ ಎಂದು ಸಭೆಗೆ ಮನವರಿಕೆ ಮಾಡಿಕೊಡಲಾಯಿತು, ಸದರಿ ಹೆಸರುಗಳನ್ನು ಈ ಕೆಳಕಂಡಂತೆ ಇರುವುದಾಗಿ ತಿಳಿಸಿದರು, ಕ್ರಮವಾಗಿ 1 ರಿಂದ 5 ರವರೆಗೆ ಶ್ರೀಮತಿ ಎಂ. ಎಸ್. ಲತಾ ಕೊಂ ಶ್ರೀ ಬಿ. ಎ. ಬಾಲಕೃಷ್ಣ, ಮತ್ತು 6. ಶ್ರೀ ಬಿ. ಎ. ಬಾಲಕೃಷ್ಣ ಬಿನ್ ಲೇಟ್ ಸಿ. ಬಿ. ಅಣ್ಣಪ್ಪರಾವ್, ಚಿಕ್ಕಮಗಳೂರು ಇವರ ಹೆಸರಿನಲ್ಲಿದ್ದು ಸದರೀ ಪ್ರದೇಶಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆ ಆಗಿರುವಷ್ಟು ಭೂಮಿಗೆ ವಿನ್ಯಾಸ ಅನುಮೋದನೆ ನೀಡಲು ನಿಯಮಾವಳಿಗಳಲ್ಲಿ ಅವಕಾಶವಿರುವುದಾಗಿ ನಗರ ಯೋಜನಾ ಸದಸ್ಯರು ಸಭೆಗೆ ತಿಳಿಸಿದರು, ಆದರೆ ಒಂದು ಎಕರೆಗಿಂತ ಕಡಿಮೆ ಇರುವುದರಿಂದ ಎಲ್ಲಾ ಭೂಮಿಯನ್ನು ಒಟ್ಟಿಗೆ ಸೇರಿಸಿ ಬಡಾವಣೆ ವಿನ್ಯಾಸ ನೀಡಲು ಪ್ರತ್ಯೇಕವಾಗಿ ನೀಡದಿರಲು ಸದಸ್ಯರಾದ ಶ್ರೀ ಮಂಜುನಾಥ್ ತಿಳಿಸಿದರು, ಪ್ರತ್ಯೇಕವಾಗಿ ಭೂ ಪರಿವರ್ತನೆ ಆಗಿರುವುದರಿಂದ ಪ್ರತ್ಯೇಕ ವಿನ್ಯಾಸ ನೀಡಲು ಕಾನೂನಿನಲ್ಲಿ ಅವಕಾಶ ಇರುವುದರಿಂದ ಶೇಕಡ 55 ಕಿಂತ ಹೆಚ್ಚಾಗಿ ವಸತಿಗೆ ನೀಡುವ ವಿಸ್ತೀರ್ಣಕ್ಕೆ ಮಾರುಕಟ್ಟೆ ಬೆಲೆಯನ್ನು ಪಾವತಿಸಿಕೊಂಡು ವಲಯ ನಿಯಮಾನುಸಾರ ವಸತಿ ವಿನ್ಯಾಸವನ್ನು ಅನುಮೋದಿಸಬಹುದೆಂಬ ಅಭಿಪ್ರಾಯವನ್ನು ನಗರ ಯೋಜನಾ ಸದಸ್ಯರು ತಿಳಿಸಿದರು, ಹಾಗಾಗಿ ಕಾನೂನಿನಲ್ಲಿ ಅವಕಾಶ ಇರುವುದರಿಂದ ಪ್ರತ್ಯೇಕವಾಗಿ ಭೂ ಅನ್ಯಕ್ರಾಂತವಾಗಿರುವ ಪ್ರದೇಶವಾಗಿರುವುದರಿಂದ ಪ್ರತ್ಯೇಕವಾಗಿ ವಿನ್ಯಾಸ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 8.**

ಚಿಕ್ಕಮಗಳೂರು ಗೃಹ ಮಂಡಳಿ ಕಛೇರಿಯಲ್ಲಿ ಹಿರೇಮಗಳೂರು ಗ್ರಾಮದ ವಿವಿಧ ಸರ್ವೆ ನಂಬರುಗಳಲ್ಲಿ ನಾಲ್ಕೈದು ಹಂತಗಳಲ್ಲಿ ವಸತಿ ಬಡಾವಣೆ ರಚನೆ ಮಾಡಿ ಪ್ರಾಧಿಕಾರದಿಂದ ಬಡಾವಣೆ ನಕ್ಷೆ ಅನುಮೋದನೆ ಪಡೆಯದೆ ಯೋಜನೆ ಅನುಷ್ಠಾನಗೊಳಿಸಿದ ನಂತರ ನಕ್ಷೆ ಅನುಮೋದನೆ ಕೋರಿದ್ದು ನಿಯಮಾನುಸಾರ ರಸ್ತೆ, ಪಾರ್ಕ್‌ಗಳ ಹಾಗೂ ನಾಗರೀಕ ಸೌಲಭ್ಯ ನಿವೇಶನಗಳನ್ನು ಪ್ರಾಧಿಕಾರಕ್ಕೆ ನೋಂದಾಯಿಸಿ ವರ್ಗಾಯಿಸದೆ ಇರುವ ಬಗ್ಗೆ ಕುರಿತು.

**ಟಿಪ್ಪಣಿ :**

ಕರ್ನಾಟಕ ಗೃಹ ಮಂಡಳಿ ಚಿಕ್ಕಮಗಳೂರು ಕಛೇರಿಯಿಂದ ಈವರೆವಿಗೆ ನಾಲ್ಕೈದು ಹಂತಗಳಲ್ಲಿ ವಸತಿ ಬಡಾವಣೆ ರಚಿಸಲಾಗಿದ್ದು, ಪ್ರಾಧಿಕಾರದಿಂದ ಬಡಾವಣೆ ನಕ್ಷೆಯನ್ನು ಈ ಕಛೇರಿಯಿಂದ ಅನುಮೋದನೆ ಪಡೆದಿರುವುದಿಲ್ಲ. ಯೋಜನೆ ಅನುಷ್ಠಾನಗೊಂಡ ನಂತರ ಈ ಕಛೇರಿಗೆ ವಸತಿ ಬಡಾವಣೆ ನಕ್ಷೆಯ ಅನುಮೋದನೆ ಕೋರಿ ಪತ್ರ ಬರೆದಿರುತ್ತಾರೆ. ಆದರೆ ವಸತಿ ಬಡಾವಣೆಯಲ್ಲಿನ ರಸ್ತೆಗಳು, ಪಾರ್ಕ್‌ಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ಬಿಟ್ಟಿದ್ದರೂ ಸಹ ನಾಗರೀಕ ಸೌಲಭ್ಯ ನಿವೇಶನಗಳನ್ನು ನಿಯಮಾನುಸಾರ ಪ್ರಾಧಿಕಾರಕ್ಕೆ ಹಸ್ತಾಂತರಿಸಬೇಕಾಗಿರುತ್ತದೆ. ಆದರೆ ಯಾವುದೇ ನಾಗರೀಕ ಸೌಲಭ್ಯ ನಿವೇಶನಗಳನ್ನು ಇಲ್ಲಿಯವರೆಗೂ ಪ್ರಾಧಿಕಾರಕ್ಕೆ ಹಸ್ತಾಂತರಸಿರುವುದಿಲ್ಲ. ಈ ಬಗ್ಗೆ ಸದರಿ ಕಛೇರಿಗೆ ವಿವರಗಳನ್ನು ನೀಡುವಂತೆ ದಿನಾಂಕ: 23-02-2011 ರಂದು ಈ ಕಛೇರಿಯಿಂದ ಪತ್ರ ಬರೆದಿದ್ದರೂ ಸಹ ಯಾವುದೇ ಉತ್ತರ ನೀಡಿರುವುದಿಲ್ಲ. ಆದ್ದರಿಂದ ಗೃಹ ಮಂಡಳಿಗೆ ಸಂಬಂಧಿಸಿದ ಕೇಂದ್ರ ಕಛೇರಿಯ ಗಮನಕ್ಕೆ ವಿಷಯ ತರಲು ಪ್ರಾಧಿಕಾರ ಸಭೆಗೆ ವಿಷಯ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಕರ್ನಾಟಕ ಗೃಹ ಮಂಡಳಿ ಚಿಕ್ಕಮಗಳೂರು ಕಛೇರಿಯಿಂದ ಈವರೆವಿಗೆ ನಾಲ್ಕೈದು ಹಂತಗಳಲ್ಲಿ ವಸತಿ ಬಡಾವಣೆ ರಚಿಸಲಾಗಿದ್ದು, ಪ್ರಾಧಿಕಾರದಿಂದ ಬಡಾವಣೆ ನಕ್ಷೆಯನ್ನು ಈ ಕಛೇರಿಯಿಂದ ಅನುಮೋದನೆ ಪಡೆದಿರುವುದಿಲ್ಲ. ಯೋಜನೆ ಅನುಷ್ಠಾನಗೊಂಡ ನಂತರ ಈ ಕಛೇರಿಗೆ ವಸತಿ ಬಡಾವಣೆ ನಕ್ಷೆಯ ಅನುಮೋದನೆ ಕೋರಿ ಪತ್ರ ಬರೆದಿರುತ್ತಾರೆ. ಆದರೆ ವಸತಿ ಬಡಾವಣೆಯಲ್ಲಿನ ರಸ್ತೆಗಳು, ಪಾರ್ಕ್‌ಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ಬಿಟ್ಟಿದ್ದರೂ ಸಹ ನಾಗರೀಕ ಸೌಲಭ್ಯ ನಿವೇಶನಗಳನ್ನು ನಿಯಮಾನುಸಾರ ಪ್ರಾಧಿಕಾರಕ್ಕೆ ಹಸ್ತಾಂತರಿಸಬೇಕಾಗಿರುತ್ತದೆ. ಆದರೆ ಯಾವುದೇ ನಾಗರೀಕ ಸೌಲಭ್ಯ ನಿವೇಶನಗಳನ್ನು ಇಲ್ಲಿಯವರೆಗೂ ಪ್ರಾಧಿಕಾರಕ್ಕೆ ಹಸ್ತಾಂತರಸಿರುವುದಿಲ್ಲ. ಈ ಬಗ್ಗೆ ಸದರಿ ಕಛೇರಿಗೆ ವಿವರಗಳನ್ನು ನೀಡುವಂತೆ ದಿನಾಂಕ: 23-02-2011 ರಂದು ಈ ಕಛೇರಿಯಿಂದ ಪತ್ರ ಬರೆದಿದ್ದರೂ ಸಹ ಯಾವುದೇ ಉತ್ತರ ನೀಡಿರುವುದಿಲ್ಲ. ಆದ್ದರಿಂದ ಗೃಹ ಮಂಡಳಿಗೆ ಸಂಬಂಧಿಸಿದ ಕೇಂದ್ರ ಕಛೇರಿಯ ಗಮನಕ್ಕೆ ತರಲು ಪತ್ರ ಬರೆದು ಸೂಕ್ತಕ್ರಮ ತೆಗೆದುಕೊಳ್ಳುವಂತೆ ಸರ್ವಾನುಮತದಿಂದ ಸಭೆ ತೀರ್ಮಾನಿಸಿತು.

**ವಿಷಯ ನಂ 9.**

ಪ್ರಾಧಿಕಾರದ ವ್ಯಾಪ್ತಿಯಲ್ಲಿ ವಸತಿ ವಲಯದಲ್ಲಿರುವ ಕಂದಾಯ ಭೂಮಿಯನ್ನು ವಿಭಜಿಸಿ ಮಾರಾಟ ಮಾಡುತ್ತಿರುವ ಮತ್ತು ಅನಧಿಕೃತ ಬಡಾವಣೆ ರಚನೆಗೆ ಪ್ರಯತ್ನಪಡುತ್ತಿರುವ ಭೂಮಿಯನ್ನು ಭೂಸ್ವಾಧೀನ ಮಾಡಿ ಪ್ರಾಧಿಕಾರದಿಂದ ಬಡಾವಣೆ ರಚನೆ ಮಾಡುವ ಕುರಿತು.

**ಟಿಪ್ಪಣಿ :**

ನಗರದಲ್ಲಿ ಅನಧೀಕೃತ ಬಡಾವಣೆ ರಚನೆ ಮಾಡುತ್ತಿದ್ದು ಕಂದಾಯ ಭೂಮಿಯನ್ನು ವಿಭಜಿಸಿ ಗುಂಟೆ ಲೆಕ್ಕದಲ್ಲಿ ಮಾರಾಟ ಮಾಡಲಾಗುತ್ತಿದೆ, ರಸ್ತೆಗೆ ಮಾತ್ರ ಸ್ವಲ್ಪ ಭೂಮಿ ಮೀಸಲಿಟ್ಟು ಶೇಕಡ 90 ರಷ್ಟು ಭೂಮಿ ಕಂದಾಯ ನಿವೇಶನಗಳು ಎಂಬಂತೆ ಮಾರಾಟ ಆಗುತ್ತಿದೆ, ಇಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುತ್ತಿಲ್ಲ, ಕಾನೂನಿನ ದುರುಪಯೋಗ ಆಗುತ್ತಿದೆ, ಈಗಾಗಲೇ ದಿನಾಂಕ: 31-01-2011 ರ ಸಭೆಯಲ್ಲಿ ನಿರ್ಣಯ ಆಗಿರುವ ಭೂಮಿಯ ಜೊತೆಗೆ ಇಂತಹ ಪ್ರದೇಶಗಳನ್ನು ಸೇರಿಸಿ ಪ್ರಾಧಿಕಾರದಿಂದ ಬಡಾವಣೆ ರಚನೆಗೆ ತೀರ್ಮಾನ ಕೈಗೊಳ್ಳಬಹುದಾಗಿರುತ್ತದೆ ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ದಿನಾಂಕ: 31-01-2011 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ. 8 ರ ತೀರ್ಮಾನದಲ್ಲಿ ತಿಳಿಸಿರುವ ಸರ್ವೆ ನಂಬರುಗಳ ಭೂಮಿಯ ಜೊತೆಗೆ ಹಿರೇಮಗಳೂರು ಗ್ರಾಮದ ಸರ್ವೆ ನಂ. 468, 469, 470, 476, 479, 480, 481, 482, 483, 489, 490, 562, 563, 564, 565, 570, 571, 573, 574, 575, 576, 581, 1007, 1008, 1009 ಮತ್ತು 1015 ಗಳ ಭೂಮಿಯನ್ನು ಸಹ ಯೋಜನೆ ವ್ಯಾಪ್ತಿಗೆ ಸೇರಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು, ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ, ತಹಶೀಲ್ದಾರರು ಮತ್ತು ಉಪ ನೋಂದಣಾಧಿಕಾರಿಗಳಿಗೆ ಪತ್ರ ಬರೆದು ವಿಭಜಿಸಿ ನೋಂದಣಿ ಮಾಡಲು ಅವಕಾಶ ನೀಡದಂತೆ ಕೋರಲು ತೀರ್ಮಾನಿಸಲಾಯಿತು.

**ಇತರೆ ವಿಷಯಗಳು :**

ನರಹಂತಕ ವೀರಪ್ಪನ್ ಕಾರ್ಯಾಚರಣೆಯಲ್ಲಿ ಸೇವೆ ಸಲ್ಲಿಸಿದ 26 ಯೋದರಿಗೆ ಸರ್ಕಾರವು 30' x 40' ಅಡಿ ಅಳತೆಯ ನಿವೇಶನ ಹಂಚಿಕೆ ಮಾಡುವಂತೆ ಆದೇಶ ನೀಡಿರುವ ಬಗ್ಗೆ ಪ್ರಾಧಿಕಾರದ ಸದಸ್ಯರಾದ ಶ್ರೀ ಮಂಜುನಾಥ್ ರವರು ಈಗಾಗಲೇ ಸರ್ಕಾರದಿಂದ ಸದರೀ 26 ಜನ ಯೋದರಿಗೂ ನಿವೇಶನ ಹಂಚಿಕೆಗಾಗಿ ಸರ್ಕಾರದ ಹಣ ಬಿಡುಗಡೆ ಮಾಡಿ ಚೆಕ್ ನೀಡಿರುತ್ತಾರೆ ಆದುದರಿಂದ ಅವರುಗಳು ಸದರೀ ಹಣವನ್ನು ಪ್ರಾಧಿಕಾರಕ್ಕೆ ಪಾವತಿಸಿದಲ್ಲಿ ನಿವೇಶನ ಹಂಚಿಕೆ ಮಾಡುತ್ತೀರಾ ಎಂದು ಸಭೆ ಗಮನಕ್ಕೆ ತಂದರು, ಆ ಸಂದರ್ಭದಲ್ಲಿ ಪ್ರಾಧಿಕಾರದ ಆಯುಕ್ತರು ಅವರುಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಮೊತ್ತವನ್ನು ಈಗಾಗಲೇ ಪ್ರಾಧಿಕಾರಕ್ಕೆ ಜಮಾ ಮಾಡಿದಲ್ಲಿ ಅವರುಗಳಿಗೆ ಈ ಕಛೇರಿಯಿಂದ ನಿರ್ಮಾಣ ಮಾಡುತ್ತಿರುವ ವಸತಿ ಬಡಾವಣೆಯಲ್ಲಿ ನಿವೇಶನಗಳನ್ನು ಮೀಸಲಿಟ್ಟು ಹಂಚಿಕೆ ಮಾಡುವಾಗ ಯಾವ ದರ ನಿಗದಿಪಡಿಸಲಾಗುತ್ತದೆಯೋ ಆ ವ್ಯತ್ಯಾಸದ ಮೊತ್ತವನ್ನು ನಂತರ ಪಾವತಿಸಿಕೊಳ್ಳಲಾಗುತ್ತದೆ ಎಂದು ಸಭೆಗೆ ತಿಳಿಸಿದರು ಇದನ್ನು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

ಪ್ರಾಧಿಕಾರದ ಸಿಬ್ಬಂದಿಗಳಿಗೆ ಪಿಂಚಣಿ, ಡಿ.ಸಿ.ಆರ್.ಜಿ. ಪಾವತಿಸುವ ಬಗ್ಗೆ ಸರ್ಕಾರದಿಂದ ಮಾಹಿತಿ ಕೇಳಿರುವ ಬಗ್ಗೆ ಆಯುಕ್ತರು ಸಭೆಯ ಗಮನ ಸೆಳೆದಾಗ ಸಭೆಯು ಎಷ್ಟು ಮೊತ್ತ ಪಾವತಿಸಬೇಕಾಗುತ್ತದೆ,? ಅಷ್ಟು ಮೊತ್ತ ಪಾವತಿಸಲು ಪ್ರಾಧಿಕಾರ ಶಕ್ತವಾಗಿದೆಯೇ? ಎಂಬ ಬಗ್ಗೆ ಮುಂದಿನ ಸಭೆಯಲ್ಲಿ ವಿವರವಾದ ಪೂರ್ಣ ಮಾಹಿತಿ ಪಡೆದು ಸರ್ಕಾರಕ್ಕೆ ವರದಿ ಸಲ್ಲಿಸಬಹುದಾಗಿದೆ ಎಂದು ಸಭೆಯು ಒಮ್ಮತದ ಅಭಿಪ್ರಾಯ ನೀಡಿತು.

ಪ್ರಾಧಿಕಾರದಿಂದ ಹೊಸದಾಗಿ ನಿರ್ಮಾಣ ಮಾಡಲಾಗುತ್ತಿರುವ ಉಪ್ಪಳ್ಳಿ – ಇಂದಾವರ ಗ್ರಾಮಗಳ ವಿವಿದ ಸರ್ವೆ ನಂಬರುಗಳಲ್ಲಿನ 186.39 ಎಕರೆ ಪ್ರದೇಶದಲ್ಲಿ ನಿರ್ಮಾಣ ಮಾಡಲಿರುವ ಎಲ್ಲಾ ನಿವೇಶನಗಳಲ್ಲಿ ಮನೆ ಕಟ್ಟುವ ಸಂಧರ್ಭದಲ್ಲಿ ಮಳೆ ನೀರು ಸಂಗ್ರಹಣೆ ಮಾಡಿ ಅಂತರ್ಜಲ ಹೆಚ್ಚಿಸುವಂತೆ ಕಡ್ಡಾಯವಾಗಿ ಲೈಸನ್ಸ್ ನೀಡುವಾಗ ಷರತ್ತು ವಿದಿಸುವಂತೆ ಸಭೆಯಲಿದ್ದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಚಿಕ್ಕಮಗಳೂರು ರವರು ನೀಡಿದ ಸಲಹೆಗೆ ಸಭೆಯಲ್ಲಿನ ಎಲ್ಲಾ ಸದಸ್ಯರೂ ಸಹಮತ ಸೂಚಿಸಿದರು ಹಾಗೆಯೇ ಮಾನ್ಯ ಅಧ್ಯಕ್ಷರು ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯಲ್ಲಿ ಮುಂದೆ ಮನೆ ಕಟ್ಟಲು ಪರವಾನಗಿ ಕೋರುವವರಿಗೂ ಕಡ್ಡಾಯವಾಗಿ ಮಳೆ ನೀರು ಸಂಗ್ರಹಣೆಗಾಗಿ ಮಳೆಕೊಯ್ಲು ಪದ್ದತಿ ಅಳವಡಿಸುವ ಷರತ್ತು ವಿಧಿಸಬೇಕೆಂದು ಸೂಚಿಸಿದರು ಇದಕ್ಕೆ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

**ಅಧ್ಯಕ್ಷರ ಅಪ್ಪಣೆ ಪಡೆದು ಸಭೆಯು ಮುಕ್ತಾಯವಾಯಿತು.**

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.